ಚೇರ್ಮನ್: ಈಗ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ವಿಧೇಯಕವನ್ನು ಮಂಡಿಸಬೇಕು.

ಶಾಸನ ರಚನಾ ಕಾರ್ಯಕಲಾಪಗಳು

1992ರ ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ : ಮಾನ್ಯ ಉಪಾಧ್ಯಕ್ಷಣಿಯವರೇ, ಈ ವಿಧೇಯಕವನ್ನು ಮಂಡಿಸುತ್ತಾ ಇದರ ಬಗ್ಗೆ ಸ್ವಲ್ಪ ವಿವರವಾಗಿ ಇದರ ಹಿನ್ನೆಲೆಯನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಈ ಒಂದು ಕೃಷ್ಣಾ ಜಲಾನಯನ ವಿಧೇಯಕವನ್ನು ಮಂಡಿಸಲಿಕ್ಕೆ ಅದರ ಹಿನ್ನಲೆ ಮತ್ತು ಆ ಭಾಗದ ಬಹುಕಾಲದ ಅಭಿವೃದ್ಧಿ ಹಿನ್ನಲೆಯಲ್ಲಿ ಈ ರಾಜ್ಯದ ಮುಖ್ಯ ಮಂತ್ರಿಗಳ ಆಸೆ ಆಕಾಂಕ್ಷೆಗಳ ಹಿನ್ನಲೆಯಲ್ಲೂ ಕೂಡಾ ಈ ವಿಧೇಯಕವನ್ನು ಮಂಡಿಸಲಿಕ್ಕೆ, ಶ್ರೀ ಆರ್.ವಿ. ದೇಶಪಾಂಡೆ : ರಾಜ್ಯದ ಮುಖ್ಯ ಮಂತ್ರಿಗಳ ಆಕಾಂಕ್ಷೆ ಅಲ್ಲ. ಜನರ ಆಕಾಂಕ್ಷೆ ಮೇರೆ ಎಂದು ಹೇಳಿ.

(ಗೊಂದಲ)

ಶ್ರೀ ಎಂ.ಎಸ್. ಪಾಟೀಲ್ :— ಮಾನ್ಯ ಮುಖ್ಯಮಂತ್ರಿಗಳು ಜನರ ಆಕಾಂಕ್ಷೆ ಮೇಲೆಯೇ ಮುಖ್ಯಮಂತ್ರಿಗಳು ಆಗಿದ್ದುದು. ಜನರೂ ಕೂಡ ಬೆಂಬಲ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :— ಪ್ರತಿಯೊಂದು ಬಿಲ್ ಮಂಡಣೆ ಮಾಡುವಾಗ ಅವರ ಹೆಸರು ಹೇಳಬೇಕೇ?

ಶ್ರೀ ಎಂ.ಎಸ್. ಪಾಟೀಲ್ : ರಾಜ್ಯದ ಜನತೆಯ ಪರವಾಗಿ ಅವರು ಮುಖ್ಯಮಂತ್ರಿಗಳಾಗಿ ಇರುವುದು. ಅವರು ಕೂಡ ಇದಕ್ಕೆ ಬೆಂಬಲ ಕೊಟ್ಟಿದ್ದಾರೆ, ಅವರು ಕೂಡ ಇದರ ಬಗ್ಗೆ ಯೋಚನೆ ಮಾಡಿದ್ದಾರೆ.

(ಗೊಂದಲ)

ಚೇರ್ಮನ್ :— ದಯಮಾಡಿ ಎಲ್ಲರೂ ಕೂಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ ಮಹದೇವ್ :— ಮುಖ್ಯಮಂತ್ರಿಗಳು ಜನಗಳ ಪ್ರತಿನಿಧಿಯಾಗಿ ಈ ಪ್ರಾಧಿಕಾರದ ರಚನೆಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರಿಂದ ಇವತ್ತು ಅದು ಸದನದಲ್ಲಿ ಮಂಡಣೆಗೆ ಬಂದಿದೆ. ಅವರು ಒಂದುವೇಳೆ ಆಸಕ್ತಿ ವಹಿಸಿಲ್ಲವಾದಲ್ಲಿ ಅದು ಬರುತ್ತಾ ಇರಲಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರ ಹೆಸರನ್ನು ತಂದಿದ್ದರೆ ಅದರಲ್ಲಿ ತಪ್ಪು ಏನು?

ಶ್ರೀ ಡಿ.ಬಿ. ಚಂದ್ರೇಗೌಡ :— ಇದರಲ್ಲಿ ತಪ್ಪು ಏನೂ ಇಲ್ಲ. ಸನ್ಮಾನ್ಯ ಶಾಸಕರು ಮೊದಲು ಮುಖ್ಯಮಂತ್ರಿಗಳಿಗೆ ವಿರೋಧವಾಗಿದ್ದರು, ಈಗ ಪರವಾಗಿದ್ದಾರೆ. ಆಮೇಲೆ ಏನಾಗುತ್ತಾರೋ ಗೊತ್ತಿಲ್ಲ. ನೀವು ಆಯಾಯ ಕಾಲಕ್ಕೆ ಸರಿಯಾಗಿ ಮಾತನಾಡುತ್ತೀರಿ.

(ಗೊಂದಲ)

ಶ್ರೀ ಎಂ. ಮಹದೇವ್ :— ಮಾನ್ಯ ಚಂದ್ರೇಗೌಡರು ಸದನದಲ್ಲಿ ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಮಹದೇವ್‌ರವರು ಮೊದಲು ಮುಖ್ಯಮಂತ್ರಿಯವರಿಗೆ ವಿರುದ್ಧವಾಗಿ ಇದ್ದದು, ಈಗ ಪರವಾಗಿ ಇದ್ದಾರೆ, ಇನ್ನು ಮುಂದೆ ಏನು ಆಗುತ್ತಾರೋ ಗೊತ್ತಿಲ್ಲ ಎಂದು ನೇರವಾಗಿ ನನ್ನ ಹೆಸರನ್ನು ಎಳೆದಿದ್ದಾರೆ. ಆದರೆ ನಾನು ಯಾವೊತ್ತು ಮುಖ್ಯಮಂತ್ರಿಗಳಿಗೆ ವಿರುದ್ಧವೂ ಇಲ್ಲ, ಪರವೂ ಇಲ್ಲ. ಆದ್ದರಿಂದ ದಯವಿಟ್ಟು

(ಗೊಂದಲ)

ಯಾವುದೇ ಮುಖ್ಯಮಂತ್ರಿಗಳ ಒಳ್ಳೆಯ ಕೆಲಸಗಳಿಗೆ ನಮ್ಮ ಪೂರ್ಣ ಬೆಂಬಲ ಇದೆ. ಮಾನ್ಯ ಮುಖ್ಯಮಂತ್ರಿಯವರು ಒಳ್ಳೆಯ ಕೆಲಸ ಮಾಡುತ್ತಾ ಇದ್ದಾರೆ ಅವರಿಗೆ ಪೂರ್ಣ ಬೆಂಬಲ ಇದೆ. ಮಾನ್ಯ ವೀರೇಂದ್ರ ಪಾಟೀಲ್‌ರವರು ಒಳ್ಳೆಯ ಕೆಲಸ ಮಾಡಿದ್ದರು ಅವರಿಗೂ ಪೂರ್ಣ ಬೆಂಬಲ ಇತ್ತು. ನಮ್ಮ

ಪಕ್ಷದ ನಾಯಕರುಗಳಿಗೆ ನಮ್ಮ ಬೆಂಬಲ ವ್ಯಕ್ತಪಡಿಸಲೇ ಬೇಕು. ನಮ್ಮಲ್ಲಿ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಅದು ಹೊರಗಡೆಯಲ್ಲಿ. ನಮ್ಮ ನಾಯಕರು ಒಳ್ಳೆಯ ಕೆಲಸ ಮಾಡಿದ್ದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಕ್ಕೆ ನೀವು ಪರ ವಿರೂಧ ಎಂದು ಯಾಕೆ ಹೇಳುತ್ತೀರಿ? ಅದರಲ್ಲಿ ಅವರ ವಿಚಾರ ಧಾರೆ ಏನಿದೆ ಅದಕ್ಕೆ ನಾವು ಬೆಂಬಲ ವ್ಯಕ್ತಪಡಿಸಿದರೆ ಅದನ್ನು ಪರ ವಿರೋಧ ಅಂತ ಏಕೆ ಹೇಳ್ತೀರಿ ತಾವು.

ಶ್ರೀ ವಾಟಾಳ್ ನಾಗರಾಜ್ : ಪ್ರಾಧಿಕಾರದ ಬಗ್ಗೆ ಇಲ್ಲಿ ಮಸೂದೆ ಇರೋದು ನಾವು ಇದನ್ನು ಅಕ್ಷರ ಅಕ್ಷರ ನೋಡಿದೆ, ಬಂಗಾರಪ್ಪನವರ ಹೆಸರು ಇಲ್ಲಿಲ್ಲ.

ಚೇರ್ಮನ್ :— ಹೆಸರು ಇರಬೇಕೊಂತ ಏನೂ ಇಲ್ಲಾರೀ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅವರು ಮಾತನಾಡಲು ಅವಕಾಶ ಇದೆ, ಆಗ ಅವರ ಅಭಿಪ್ರಾಯ ಹೇಳಲಿ. ಬೇರೆಯವರು ಕಾರ್ಯಕ್ರಮ ಮಾಡಿದರೆ ಅವರ ಹೆಸರು ಹೇಳಬಾರದೇ?

ಶ್ರೀ ವಾಟಾಳ್ ನಾಗರಾಜ್ :— ಒಳ್ಳೇ ಮಂತ್ರಿಗಳು ನೀವು, ನನ್ನದು ಕ್ರಿಯಾಲೋಪ ಇದೆ, ಚರ್ಚೆಯಲ್ಲಿ ಸಾಮರಸ್ಯ ಇರಬೇಕಲ್ಲ, ಏಕೆಷ್ಟೊಂದು ನೀವು ಆತುರ ಪಡ್ತಾಯಿದ್ದೀರಿ, ಇದರಲ್ಲೇನಾಗಿದೆ ಅಂದರೆ ನಾನೇನೂ ಯಾರು ಕೆಲಸ ಮಾಡಿದವರ ಬಗ್ಗೆ ಹೊಗಳಬಾರದೆಂದು ನನ್ನದಲ್ಲ. ಹೊಗಳಲಿ, ಆದರೆ ಇಲ್ಲೇನಾಗ್ತಿದೆ? ಮಸೂದೆಯನ್ನು ಇಲ್ಲಿ ಮಂಡಿಸುವಾಗ ಹೆಜ್ಜೆಹೆಜ್ಜೆಗೂ ಬಂಗಾರಪ್ಪನವರ ಸ್ಮರಣೆ ಇಲ್ಲದೆ ಇಲ್ಲೇನೂ ನಡೆಯೋದಿಲ್ಲ. ನನ್ನದು ಮುಗಿದ ಮೇಲೆ ಇವರು ಪಾದಪೂಜೆ ಮಾಡಲಿ ಯಾರು ಬೇಡಾಂತಾರೆ? ನನ್ನ ಅಭ್ಯಂತರವಿಲ್ಲ. ಬಂಗಾರಪ್ಪನವರ ಹೆಸರು ಹೇಳಿದರು ಅಂತ ನಮಗೇನೂ ನೋವಾಗ್ತಿಲ್ಲ ಮಾಡಿಕೊಳ್ಳಲಿ ಇವರು, ಆದರೆ ಹೊಗಳಿ ಹೊಗಳಿ ಹೊನ್ನಸೂಲಕ್ಕೆ ಏರಿಸಬೇಡಿ ಅವರನ್ನು, ನೀವು ಸುತ್ತ ಹೊಗಳುಭಟ್ಟರು ಸೇರಿಕೊಂಡು ದಿನಾ ಅವರ ತಲೆಕೆಡಿಸಿ ಅವರು ಮಾಡಬಾರದ್ದೆಲ್ಲ ಮಾಡಿ ಏನು ಮಾಡಬೇಕೂಂತ ಹೊರಟ್ಟಿದ್ದೀರಿ ನೀವು ಸ್ವಲ್ಪ ಒಳ್ಳೆಯ ಮಾತು ಹೇಳಿ ಅವರಿಗೆ, ಒಳ್ಳೆಯ ದಾರಿಗೆ ತಗೊಂಡು ಬನ್ನಿ, ಅದು ನಿಮಗೆ ಹೆಸರು ತರ್ತದೆ ಅದನ್ನು ಬಿಟ್ಟುಬಿಟ್ಟು ನಮ್ಮ ಮಹಾದೇವರು ಹೇಳ್ತಾರೆ ಕಾಲಕಾಲಕ್ಕೆ ಯಾವ ಸರ್ಕಾರ ಯಾವ ನಾಯಕರು ಬರ್ತಾರೆ ಅವರಿಗೆ ನಮ್ಮ ಬೆಂಬಲ ಅಂತ ಹೇಳುತ್ತಾ ಹೊರಗಡೆ ನಮ್ಮದು ಏನಾದರೂ ಇರಬಹುದು, ಒಳಗಿಲ್ಲ ಅಂದರೆ ನಿಮ್ಮಲ್ಲಿ ಭೇದಭಾವನೆ ಇದೇಂತ ಅರ್ಥವಾಯಿತಲ್ಲ.

(ಗೊಂದಲ)

ಚೇರ್ಮನ್ : ಮಿನಿಸ್ಟರ್ ಕಂಟಿನ್ಯೂ ಮಾಡ್ರಿ. ನಿಮ್ಮದು ಕ್ರಿಯೇನೂ ಇಲ್ಲ ಲೋಪಾನೂ ಇಲ್ಲ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :— ಅಧ್ಯಕ್ಷರಲ್ಲಿ ಬಹಳ ಗೌರವ ಕೊಟ್ಟು ನಾನು ಅಪರೂಪಕ್ಕೊಂದು ಕ್ರಿಯಾಲೋಪ ಎತ್ತಿದ್ದೇನೆ. ಆದರೆ ನೀವು ಕ್ರಿಯಾನೂ ಇಲ್ಲ ಲೋಪನೂ ಇಲ್ಲ ಅಂದುಬಿಟ್ರೆ ಹೇಗೆ? ಇದು ನಿಜವಾದ ಕ್ರಿಯೆ ನಡೀತಿದೆ ಮಸೂದೆಯಲ್ಲಿ, ಜೊತೆಗೆ ಲೋಪವು ಇದೆ..

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಲೋಪ ಇದ್ದರೆ ಒಪ್ಪೋಣ ನಿಮ್ಮ ಮಾತು ಬಂದಾಗ ಅದನ್ನು ಹೇಳಿ.

ಚೇರ್ಮನ್ : ಅದು ಒಂದು ದೊಡ್ಡ ಕ್ರಿಯಾಲೋಪ ಏನಲ್ಲ, ನೀವು ದಯವಿಟ್ಟು ಮುಂದುವರಿಸಿ.

ಶ್ರೀ ಡಿ.ಕೆ. ಶಿವಕುಮಾರ್ :— ಹೈಕಮಾಂಡ್ ಕ್ಯಾಂಡಿಡೇಟ್ ಅಂದರು, ಇವರು ಯಾರ ಕ್ಯಾಂಡಿಡೇಟ್ ಅಂತ ಹೇಳಬೇಕು.

ಚೇರ್ಮನ್ : ನೀವು ಕೂತುಕೊಳ್ಳೀಪ್ಪ.

ಶ್ರೀ ಎಲ್ ಆರ್ ಶಿವರಾಮೇಗೌಡ :— ನನ್ನದು ನಿಜವಾದ ಪಾಯಿಂಟ್ ಆಫ್ ಆರ್ಡರ್ ಇದೆ, ನನಗೆ ಅವಕಾಶ ಕೊಡಬೇಕು. ಈಗ ಭಾರಿ ನೀರಾವರಿ ಸಚಿವರು ಮಂಡಿಸುತ್ತಿರುವ ನಿರ್ಣಯ ಏನಿದೆ ಇದಕ್ಕೆ ನನ್ನ ಕ್ರಿಯಾಲೋಪ ಇದೆ. ಅದೇನೆಂದು ತಾವು ಕೇಳಬೇಕು. ದಯಮಾಡಿ ಕೇಳಿ. ಇವತ್ತು ಕಾವೇರಿ ವಿಚಾರದಲ್ಲಿ ಹತ್ತಿಕೊಂಡು ಉರಿಯುತ್ತಿರತಕ್ಕಂಥ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಕೃಷ್ಣಾ ಜಲಾನಯನ ಮಾಡುತ್ತಿರುವುದು ಸ್ವಾಗತಾರ್ಹ. ನಾನು ಬೇಡ ಎಂದು ಹೇಳುವುದಿಲ್ಲ. ಕಾವೇರಿ . . .

(ಗೊಂದಲ)

ಶ್ರೀ ಸಿ. ಬೈರೇಗೌಡ :– ತಮ್ಮ ಪಾಯಿಂಟ್ ಆಫ್ ಆರ್ಡರ್‌ಗೆ ರೂಲ್ಸ್ ಯಾವುದು? Let him quote the rule.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಯಾವ ನಿಯಮ ಎಂದು ಹೇಳಿ.

(ಗೊಂದಲ)

ಚೇರ್ಮನ್ :– ಅವರಿಗೆ ಯಾವುದೂ ಬೇಕಾಗಿಲ್ಲ, ಹಾಗೆ ಎದ್ದು ಬಿಡುತ್ತಾರೆ. Nothing will go on record, except Minister's speech.

(ಗೊಂದಲ)

ಶ್ರೀ ಸಿ. ಬೈರೇಗೌಡ :– ರೂಲ್ ನಂಬರ್ ಯಾವುದು ಎಂದು ಹೇಳಿ. ನೀವು ಅದನ್ನು ಹೇಳದಿದ್ದರೆ ನಾನು ಪುನಃ ಎದ್ದು ನಿಂತುಕೊಳ್ಳುತ್ತೇನೆ. ಯಾವ ರೂಲ್ ಪ್ರಕಾರ ಎಂದು ತಾವು ಹೇಳಬೇಕು.

(ಗೊಂದಲ)

ಶ್ರೀ ಸಿ. ಮಲ್ಲಾರಿಗೌಡ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷಿಣಿಯವರೇ, ತಾವು ಅವರಿಗೆ ಅವಕಾಶವನ್ನು ಕೊಟ್ಟಿದ್ದೀರಾ?

Chairman : Nothing will go on record

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್:– ಈ ಜಲಾಶಯನ ಪ್ರದೇಶದಲ್ಲಿ ಇರತಕ್ಕಂಥ . . . .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಅಧ್ಯಕ್ಷರ ವಿರುದ್ಧ ನೇರ ದಾಳಿ ಇದು. ಅದು ಸರಿಯಿಲ್ಲ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :– ನಾನು ಪಾಯಿಂಟ್ ಆಪ್ ಆರ್ಡರ್ ರೈಜ್ ಮಾಡಿದ್ದೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ:– ರೂಲ್ಸ್ ಎಲ್ಲಿ ಸ್ವಾಮಿ ?

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ ;– ಹೇಳುತ್ತೇನೆ . ಯಾವ ರೂಲ್ ಪ್ರಕಾರ ನಾನು ಪಾಯಿಂಟ್ ಆಫ್ ಆರ್ಡರ್ ಮಾಡಿದ್ದೇನೆ ಎಂದು ಹೇಳಿದರೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ;–ಇದೇನು ಇದು ?

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಅವಕಾಶವನ್ನು ಕೊಡುವುದಿಲ್ಲ ಎಂದು ಹೇಳಿದ ಮೇಲೆ ಸದಸ್ಯರು ಈ ರೀತಿ ವರ್ತಿಸುತ್ತಿರುವುದು ಈ ಸದನಕ್ಕೇ ಅಗೌರವ.

ಶ್ರೀ ಎಲ್ . ಅರ್ . ಶಿನರಾಮೇಗೌಡ ;– ನಾನು ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿದ್ದೇನೆ. ಯಾವ ಆಧಾರದ ಮೇಲೆ ಪಾಯಿಂಟ್ ಆಫ್ ಆರ್ಡರನ್ನು ರೈಜ್ ಮಾಡಿದ್ದೇನೆ. ಎಂದು ಕೇಳತಕ್ಕಂಥ ಹಕ್ಕು ನಿಮಗೆ ಇದೆ. ಕೇಳಿ ನಾನು ಅದಕ್ಕೆ ಉತ್ತರವನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ ;– ಕ್ರಿಯಾಲೋಪ ಎತ್ತಿದ ತಕ್ಷಣ ನೀವು ಒಪ್ಪಿದ್ದೀರಿ ಎಂದು ಅರ್ಥವೇ? ಮಾನ್ಯ ಸದಸ್ಯರು ಅಧ್ಯಕ್ಷರ ಹಕ್ಕನ್ನು ಪ್ರಶ್ನೆ ಮಾಡುತ್ತಿದ್ದಾರೆ . ಅಧ್ಯಕ್ಷರು ಕೊಟ್ಟಂಥ ರೂಲಿಂಗನ್ನು ಪ್ರಶ್ನೆ ಮಾಡುತ್ತಿದ್ದಾರೆ. ಅವರ ಪೀಠವನ್ನೇ ಪ್ರಶ್ನೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :– ನಾನು ಪ್ರಶ್ನೆ ಮಾಡುತ್ತಿಲ್ಲ.

(ಗೊಂದಲ)

ಚೇರ್ಮನ್ :— ನೀವು ಕುಳಿತುಕೊಳ್ಳುತ್ತೀರೋ ಅಥವಾ ಇಲ್ಲವೋ ಹೇಳಿ?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :— ಕೊಡುವುದಿಲ್ಲ.

Chairman: Nothing will go on record.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ :— ಕೊಡುವುದಿಲ್ಲ ಎಂದು ಅಧ್ಯಕ್ಷರಿಗೆ ಹೇಳುತ್ತಿದ್ದಾರೆ. ಇದು ಸದನಕ್ಕೆ ಅಗೌರವ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ :— ಇದು ಅತೀ ಆಯಿತು. ಕಾನೂನುಬಾಹಿರವಾದುದು. ಸದನಕ್ಕೆ ಅವಹೇಳನ ತರತಕ್ಕಂಥ ಕೆಲಸವನ್ನು ಶಿವರಾಮೇಗೌಡರು ಮಾಡುತ್ತಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶಿವರಾಮೇಗೌಡರು ಅಧ್ಯಕ್ಷರ ಪೀಠದ ಮುಂಭಾಗದಲ್ಲಿ ಬಂದು ಧರಣಿ ಕುಳಿತರು.)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :— ಮಾನ್ಯ ಸದಸ್ಯರಾದ ಶಿವರಾಮೇಗೌಡರಲ್ಲಿ ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ಇದು ಬಹಳ ಐತಿಹಾಸಿಕವಾದಂಥ ಒಂದು ವಿಧೇಯಕವನ್ನು ನಾನು ಮಂಡಿಸುತ್ತಿದ್ದೇನೆ. ತಮ್ಮ ಏನೊಂದು ಅನಿಸಿಕೆಯನ್ನು ಹೇಳುತ್ತಿದ್ದೀರಿ, ಅದರ ಬಗ್ಗೆ ಸರ್ಕಾರ ಪೂರ್ಣ ವಿಚಾರವನ್ನು ಮಾಡುತ್ತದೆ. ಇದರ ಬಗ್ಗೆ ಬಹಳ ಹೇಳಬೇಕಾಗಿಲ್ಲ. ಇಂಥ ಸಂದರ್ಭದಲ್ಲಿ ತಾವು ಇಲ್ಲಿ ಬಂದು ಧರಣಿ ಮಾಡುವುದು, ಅದೇ ಪ್ರಕಾರ ಹಠವನ್ನು ಮಾಡುವುದು ಸರಿಯಲ್ಲ. ದಯಮಾಡಿ ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ, ತಮ್ಮ ಸ್ಥಾನಕ್ಕೆ ತಾವು ವಾಪಸ್ ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್ :— ಧರಣಿ ಮಾಡಿದರೂ ಸಭೆ ನಡೆಯಬಹುದು ಎಂದು ತೀರ್ಪನ್ನು ಕೊಟ್ಟಿದ್ದಾರೆ. ಅವರು ಕುಳಿತಿರಲಿ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷಣಿಯವರೇ, ಮತ್ತೊಂದು ಸಲ ತಮ್ಮ ಪರವಾಗಿ ಅವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಶಿವರಾಮೇಗೌಡರು ಅವರು ತಮ್ಮ ಸ್ಥಾನಕ್ಕೆ ಹೋಗಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶಿವರಾಮೇಗೌಡರು ಧರಣಿಯನ್ನು ಕೈಬಿಟ್ಟು ತಮ್ಮ ಸ್ಥಾನಕ್ಕೆ ಹೋದರು.)

ಶ್ರೀ ವಾಟಾಳ್ ನಾಗರಾಜ್ :— ಇದು ನಾಟಕ. ಇದು ಧರಣಿಯೇ

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :— ತಾವು ನನಗೆ ಪಾಯಿಂಟ್ ಆಫ್ ಆರ್ಡರನ್ನು ರೈಜ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :— ಅವರು ಮಾತನಾಡುವ ಕಾಲಕ್ಕೆ ಅವರಿಗೆ ಅವಕಾಶ ಇದೆ. ಅವರು ಏನು ಹೇಳಬೇಕೋ ಅದನ್ನು ಹೇಳಬಹುದು. ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿ ಹೇಳಬೇಕು ಎಂದೇನೂ ಇಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನಾನು ಯಾವ ಆಧಾರದ ಮೇಲೆ ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದ್ದೇನೆ ಅಂದರೆ ಮೊನ್ನೆ ಜಿಲ್ಲಾಪರಿಷತ್ತಿನ ವಿಧೇಯಕವನ್ನು ತಂದರು. ಅವರು ವಿರೋಧ ಪಕ್ಷದ ನಾಯಕರು ಯಾವ ಆಧಾರದಮೇಲೆ ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದರು. ಅದರ ಆಧಾರದಮೇಲೆ ನಾನು ಕೇಳುತ್ತೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ :— ಇದು ಕೇವಲ ಪ್ರಚಾರಕ್ಕಾಗಿ ಮಾಡುವಂತಹ ಕೆಲಸ ಆಗಿದೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :– ಪ್ರಚಾರಕ್ಕೋಸ್ಕರ ಯಾರು ಮಾಡುತ್ತಿದ್ದಾರೆ. ಈ ರಾಜ್ಯದ ಜನಕ್ಕೆ ಗೊತ್ತಿದೆ. ಅವರು ತಂದಿದ್ದು ತಪ್ಪು ಅಂತ ಅಲ್ಲ. ನನ್ನ ವಾದ ಏನು ಅಂದರೆ ನಾನು ಕ್ರಿಯಾಲೋಪವನ್ನು ಎತ್ತಿದ್ದೇನೆ. ಅದಕ್ಕೆ ನೀವು ಅವಕಾಶಮಾಡಿಕೊಡಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :– ಯಾವ ರೂಲ್‌ನಲ್ಲಿದೆ?

(ಗೊಂದಲ)

ಚೇರ್ಮನ್ : ಮಾನ್ಯ ಶಿವರಾಮೇಗೌಡ್ರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಕಾವೇರಿಯ ಬಗ್ಗೆ ಮಾತನಾಡುವುದಕ್ಕೂ ಅವಕಾಶ ಇದೆ. ಮಾತನಾಡುಬಹುದು., ಆದರೆ ಕ್ರಿಯಾಲೋಪ ಎತ್ತಿ ಮಸೂದೆ ಮೇಲೆ ಮಂಡಿಸುವುದಕ್ಕೆ ಬಿಡುವುದಿಲ್ಲ ಅಂತ ಹೇಳಿದೆ ಸರ್ಕಾರದ ಪರ ಇರುವ ಸದಸ್ಯರೇ ಅಡ್ಡಿಮಾಡುವುದಾದರೆ ಇದು ಏನು ಪರಿಸ್ಥಿತಿ?

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ :– ನಾವು ಕೃಷ್ಣ ಜಲಾನಯನಕ್ಕೆ ವಿರೋಧ ಅಲ್ಲ. ಕಾವೇರಿಯನ್ನು ಮಾಡಿ.

SRI, D.B. CHANDRE GOWDA : Who is he to question? (Interruptions) No. I will not participate in this.

(Sri D.B. Chandre Gowda withdrew from the House)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಈಗ ಶಿವರಾಮೇಗೌಡ್ರು ಪ್ರಶ್ನೆ ಏನಿದೆ ಅವರ ಕಳಕಳಿ ಎಲ್ಲರಿಗೂ ಗೊತ್ತಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಮಗೂ ಗೊತ್ತಿದೆ. ಆದರೆ ಈ ಪ್ರಾಧಿಕಾರಕ್ಕೆ ಏನೇನೊ ಮಸೂದೆಯನ್ನು ತರುತ್ತಿದ್ದಾರೆ. ಕಾವೇರಿಯ ಬಗ್ಗೆ ತರಬೇಡಿ ಎಂದು ನಾವು ಯಾರು ಅಡ್ಡಿಪಡಿಸಿಲ್ಲ. ಎರಡು ತಿಂಗಳಿಂದ ಅವರು ಏನು ಮಾಡುತ್ತಿದ್ದರು?

(ಭಾರಿ ಗೊಂದಲ)

Chairman : Nothing will go on record, except the Minister's statement.

(ಭಾರಿ ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈಗ ವಿರೋಧ ಪಕ್ಷದ ನಾಯಕರು ಹೋಗಿದ್ದಾರೆ. ನಾನು ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರು......ಅವರು ವಾದ ಮಾಡಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ಅವರನ್ನು ಸದನದಿಂದ ಹೊರಗೆ ಹಾಕಿ.

ಶ್ರೀ ಆರ್.ವಿ. ದೇಶಪಾಂಡೆ : ಇದರಲ್ಲಿ ಪಾರ್ಟಿಸಿಪೆಟ್ ಮಾಡುವುದಿಲ್ಲ ಅಂತ ಹೊರಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೋಗಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ನಮಗೂ ಪೆಟ್ಟಾಗುತ್ತದೆ. ನಾವು ಹೊರಗಡೆ ಹೋಗಬೇಕಾಗುತ್ತದೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ಸದನವನ್ನು ದುರುಪಯೋಗ ಮಾಡಿಕೊಂಡಿದ್ದಾರೆ.

(ಭಾರಿ ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶಿವರಾಮೇಗೌಡ್ರಿಗೆ...

(ಭಾರಿ ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಆದರೆ ಮಾನ್ಯ ಶಿವರಾಮೇಗೌಡ್ರು ಉದ್ದೇಶವಾಗಿ ಈ ರೀತಿಯಾಗಿ ಮಾಡುವುದು ಸರಿಯಲ್ಲ. ಕಾವೇರಿಯ ಬಗ್ಗೆ ನಮಗೂ ಕಳಕಳಿ ಇದೆ. ಶಿವರಾಮೇಗೌಡ್ರು ಮುಖ್ಯಮಂತ್ರಿಗಳಿಗೆ ಏತಕ್ಕೆ ಹೇಳಲಿಲ್ಲ.

Chairman : Nothing will go on record.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷಿಣಿಯವರೆ, ಶ್ರೀ ಎಲ್.ಆರ್. ಶಿವರಾಮೇಗೌಡರು ನಾನೇ ಕಾವೇರಿ ಬಗ್ಗೆ ಹೋರಾಟ ಮಾಡಿದೆ, ಇನ್ಯಾರು ಹೋರಾಟ ಮಾಡಿಲ್ಲ ಎನ್ನುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷಿಣಿಯವರೆ, ಇವರು ಯಾವ ಹೋರಾಟಗಾರರು?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ರಾಜ್ಯಪಾಲರ ಭವನದ ಗೇಟಿಗೆ ಒಂದು ಬೀಗ ಹಾಕಿದ್ದೇವೆ. ಅದಕ್ಕಿಂತ ಬೇಕಾಗಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಶ್ರೀ ವಾಟಾಳ್ ನಾಗರಾಜ್‌ರವರ ಜೊತೆ ಹೋದರೆ ಒಂದು ಪ್ರಚಾರ ಸಿಗುತ್ತದೆಂದು ಹೋಗಿದ್ದಾರಷ್ಟೆ. ಬೇರೇನೂ ಇಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್ : ಶ್ರೀ ಶಿವರಾಮೇಗೌಡರು ಒಂದು ನಾಟಕ ನಡೆಸುತ್ತಿದ್ದಾರೆ.

ಚೇರ್ಮನ್ : ಶಿವರಾಮೇಗೌಡರೆ, ನೀವು ನಮಗೆ ಮಾತ್ರ ಅಗೌರವ ತೋರಿಸಲಿಲ್ಲ. Leader of the Opposition, a very respected leader. ಅವರ ಬಗ್ಗೆ ತುಚ್ಛವಾಗಿ ಮಾತನಾಡಿದ್ದೀರಿ. Please expunge it.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ನನಗೆ ವಿರೋಧ ಪಕ್ಷದ ನಾಯಕರ ಬಗ್ಗೆ ಗೌರವವಿದೆ.

Chairman : I am not allowing.

(Interruptions)

Chairman : The Speaker may, direct any member whose conduct is, in his opinion, grossly disorderly to withdraw immediately from the House *and any* member so ordered to with draw shall do so forthwith and shall absent himself during the remainder of the day's sitting.

Will you please do that? Will you please withdraw from the House?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಶ್ರೀ ರಾಯರೆಡ್ಡಿಯವರೆ, ಈ ಸದನದಲ್ಲಿ ಬಹಳ ಹಗುರವಾಗಿ ಮಾತನಾಡುವುದು ಬೇಕಾಗಿಲ್ಲ. ಏನು ಟೀಮಾರಿ ಹಾಕುವುದು? ನಾನೇನು ಅಂತಹ ಅಪವಾದ ಮಾಡಿರುವುದು? ನಾನೇನಾದರೂ ತಪ್ಪು ಮಾಡಿದ್ದರೆ ಟೀಮಾರಿ ಹಾಕಲಿ.

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಎಚ್. ಬನ್ನಿಕೋಡ್‌ರವರು ಸಭಾತ್ಯಾಗ ಮಾಡಿದರು).

Chairman : He is ordered to withdraw but he is not doing it.

ಶ್ರೀ ಸಿ. ಬೈರೇಗೌಡ : ತಾವು ತೀರ್ಪು ಕೊಟ್ಟಿದ್ದೀರಿ. ತಮ್ಮ ತೀರ್ಪಿಗಾದರೂ ಬೆಲೆ ಇದೆಯೇ ? ಇಲ್ಲವೇ? ತಮ್ಮ ತೀರ್ಪಿಗೆ ಗೌರವ ಕೊಡಬೇಕೋ ಅಥವಾ ಬೇಡವೋ? ಎನ್ನತಕ್ಕಂಥಾದ್ದು ಮೊದಲು ತೀರ್ಮಾನವಾಗಬೇಕು. ತಾವು ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರನ್ನು ಹೊರಗಡೆ ಹೋಗಬೇಕೆಂದು ಹೇಳಿದ್ದೀರಿ.

(ಗೊಂದಲ)

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷಿಣಿಯವರೆ, ಸರ್ಕಾರದವರು ಬಹಳ ಒಳ್ಳೆಯ ಉದ್ದೇಶದಿಂದ ಕೃಷ್ಣಾ ಪ್ರಾಧಿಕಾರವನ್ನು ರಚಿಸಬೇಕೆಂದು ಹೊರಟಿದ್ದಾರೆ. ನಮ್ಮ ರಾಜ್ಯಕ್ಕಾಗಿ ಬಹಳಷ್ಟು ಜನ ಕಷ್ಟಪಟ್ಟು ತ್ಯಾಗ ಮಾಡಿ, ಹಿರಿಯರು ರಾಜ್ಯದ ಏಕೀಕರಣಕ್ಕಾಗಿ ಹೋರಾಡಿದ್ದು,

ಕೃಷ್ಣಾ, ಕಾವೇರಿ ಮತ್ತು ಗೋದಾವರಿಗಳೆಲ್ಲಾ ಒಂದೇ ಎನ್ನುವ ಭಾವನೆ ಮೂಡಿಸಿದ್ದಾರೆ. ಹೀಗಾಗಿ ಇದರ ಬಗ್ಗೆ ಸದನದಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಇದರ ಧ್ವನಿ ಸದನದ ಹೊರಗೆ ಐಕ್ಯತೆಯನ್ನು ಹೆಚ್ಚು ಮಾಡಬೇಕೇ ವಿನಃ ಮತ್ತು ಕಾವೇರಿ ಬಗ್ಗೆ ನಾವುಗಳೆಲ್ಲರೂ ಸಹ ತುಂಬು ಅಭಿಮಾನದಿಂದ ಈ ಯೋಜನೆ ಆಗಬೇಕು, ಬೇರೆ ಕಡೆಯಿಂದ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ, ಅದನ್ನು ಸರಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಕೃಷ್ಣಾ ಬಗ್ಗೆ ಒಂದು ಪ್ರಾಧಿಕಾರವನ್ನು ರಚನೆ ಮಾಡಿ, 2000 ಇಸವಿಯೊಳಗೆ ಇದನ್ನು ಮಾಡದಿದ್ದರೆ ಏನೇನು ಅನ್ಯಾಯವಾಗಬಹುದು, ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಒಂದು ಕಾರ್ಯಕ್ರಮ ತೆಗೆದುಕೊಳ್ಳುವುದಾಗಿ ಹೇಳಿದಾಗ ಅತ್ಯಂತ ಹೃದಯದ ಅಂತರಾಳದಿಂದ ನಾವು ಅದನ್ನು ಸ್ವಾಗತ ಮಾಡಬೇಕಾದ್ದು ನಮ್ಮ ಕರ್ತವ್ಯ ಮತ್ತು ಧರ್ಮ.

ನಾವು ಅದೇ ದೃಷ್ಟಿಯಿಂದ ಕಾವೇರಿಯ ಬಗ್ಗೆ ಸಹ ಮಾಡಬೇಕೆಂದು ಒತ್ತಾಯ ಮಾಡುತ್ತೇವೆ. ಆದರೆ ಈ ಸಂದರ್ಭದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಮನಸ್ಸಿಗೆ ಬಹಳ ನೋವಾಗಿದೆ. ಅದು ಯಾರೇ ಇರಬಹುದು. ಈ ನಡವಳಿಕೆಗಳಿಂದ ಅವರಿಗೆ ಬಹಳ ನೋವಾಗಿದೆ ಅವರು ಸಭಾತ್ಯಾಗ ಮಾಡಿದ್ದಾರೆ, ನೀವು ದಯಮಾಡಿ ಸಭೆಯನ್ನು 5 ನಿಮಿಷ ಮುಂದಕ್ಕೆ ಹಾಕಿ ವಿರೋಧ ಪಕ್ಷದ ನಾಯಕರನ್ನು ಕರೆಸಿ ಮಾತನಾಡಿ. ಇದು ಕಡೆಯ ದಿನ. ಅಧಿವೇಶನದಲ್ಲೂ ಕೂಡ ನಾವು ಮಾತನಾಡಲು ಆಗಲಿಲ್ಲ. ಕೊನೆಯ ಪಕ್ಷ ಇಂಥ ಒಂದು ಮಹತ್ವದ ತೀರ್ಮಾನವನ್ನು ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ತಾವು ದಯಮಾಡಿ ಸಭೆಯನ್ನು 5 ನಿಮಿಷ ಮುಂದಕ್ಕೆ ಹಾಕಿ ನಮ್ಮನ್ನು ಕರೆಸಿ ಮಾತನಾಡಿ, ಆಮೇಲೆ ಸಭೆಯನ್ನು ನಡೆಸಬೇಕು, ಇದಕ್ಕೆ ಸರ್ಕಾರ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರ ಗೈರುಹಾಜರಿಯಲ್ಲಿ ನಾವು ಹೊರಗಡೆ ಹೋಗಬೇಕಾಗುತ್ತದೆ. ದಯಮಾಡಿ ಸಭೆಯನ್ನು 5 ನಿಮಿಷ ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಸಿಂಧ್ಯರವರು ಕೊಟ್ಟ ಸಲಹೆ ಬಹಳ ಒಳ್ಳೆಯ ಸಲಹೆ. ಏಕೆಂದರೆ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಕೆಲವು ಜನ ಸದಸ್ಯರು ಒಂದು ಅಗ್ಗದ ಪ್ರಚಾರಕ್ಕಾಗಿ ಹೋದರು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ತಾವು ಕೆಲವು ಜನ ಸದಸ್ಯರೆಂದು ಏಕೆ ಹೇಳುತ್ತಿದ್ದೀರಿ?

(ಗೊಂದಲ)

ಶ್ರೀ ಪ್ರೊ. ಬಿ. ಬಸವಲಿಂಗಪ್ಪ : ಮಾನ್ಯ ಸಿಂಧ್ಯರವರು ಹೇಳಿದ್ದಾರೆ. ಆದುದರಿಂದ 10 ನಿಮಿಷ ಸಭೆಯನ್ನು ಮುಂದೂಡಿ.

ಚೇರ್ಮನ್ : ಈಗ ಸಭೆಯು ಮುಂದೂಡಲ್ಪಟ್ಟು ಮತ್ತೆ 3–10ಕ್ಕೆ ಸರಿಯಾಗಿ ಸೇರುತ್ತದೆ.

ಸದನ ಮತ್ತೆ 3–45ಕ್ಕೆ ಸಮಾವೇಶಗೊಂಡಿತು

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ವೀರಪ್ಪಮೊಯ್ಲಿ (ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಸದನವನ್ನು ನಾವು ಬಿಡುವ ಮೊದಲು ಒಂದು ವಿಷಾದಕರ ಘಟನೆ ನಡೆಯಿತು. ಸನ್ಮಾನ್ಯ ಶಿವರಾಮೇಗೌಡರು ಕಾವೇರಿ ಜಲಾನಯನಕ್ಕೂ ಒಂದು ಪ್ರಾಧಿಕಾರ ಮಾಡಬೇಕೆಂದು ಹೇಳಿ, ಒತ್ತಾಯ ಮಾಡಿ ತಮ್ಮ ವಿಚಾರವನ್ನು ಮತ್ತೆ ಮುಂದುವರಿಸಿಕೊಂಡು ಹೋದರು. ಈರೀತಿ ಮುಂದುವರಿಸಿಕೊಂಡು ಹೋಗಿ ಕೆಲವು ಮಾತುಗಳು ಬಳಕೆ ಆದಾಗ ಸನ್ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ಇದರ ವಿಚಾರವಾಗಿ ಮನನೊಂದು ಈ ಸಭೆಯಿಂದ ಹೊರಹೋದರು. ಸನ್ಮಾನ್ಯ ಶಿವರಾಮೇಗೌಡರು ವಿಧಾನ ಸಭೆಗೆ ಪ್ರಥಮ ಬಾರಿಗೆ ಬರುತ್ತಿದ್ದಾರೆ, ಉತ್ಸಾಹಿ ಯುವಕರು, ಶಾಸನಸಭೆಗೆ ಹಾಜರಿಮಟ್ಟಿಗೆ, ಸದಾ ಇಲ್ಲಿರುತ್ತಾರೆ, ಹೆಚ್ಚು ಶ್ರದ್ಧೆ ತೋರಿಸುತ್ತಾರೆ. ಎಲ್ಲಾ

ವಿಚಾರಗಳನ್ನೂ ಆಸಕ್ತಿಯಿಂದ ಅಧ್ಯಯನ ಮಾಡಿ, ಬಂದು ಸಭೆಯಲ್ಲಿ ಭಾಗವಹಿಸುತ್ತಾರೆ. ಆದರೆ, ಯುವಕರಾದುದರಿಂದ, ಕೆಲವುಸಾರಿ ಹೆಚ್ಚು ಉತ್ಸಾಹ ಬರುತ್ತದೆ, ಇದು ಬಹುಶಃ ಮತ್ತೊಬ್ಬರಿಗೆ ನೋವು ಮಾಡಬೇಕೆಂದು ಅಲ್ಲ. ವಿಷಯವನ್ನು ಸಮರ್ಥನೆ ಮಾಡುವುದರಲ್ಲಿ ಪಳಗುತ್ತಾ ಬಂದಿದ್ದಾರೆ. ಇದನ್ನು ಮಾನ್ಯ ವಿರೋಧಪಕ್ಷದ ನಾಯಕರು ತಪ್ಪಾಗಿ ತಿಳಿದುಕೊಳ್ಳದೆ, ಅವರಿಂದ ಏನು ಕೆಲವು ವಿಚಾರ ನಡೆದಿದೆ, ಅವರ ಮಾತಿನ ಬಳಕೆಯಿಂದ ವಿರೋಧಪಕ್ಷದ ನಾಯಕರಿಗೆ ಅಥವಾ ಈ ಸದನದ ಘನತೆಗೆ ಯಾವ ರೀತಿಯಿಂದಲೂ ಕುಂದು ಬರಬೇಕೆಂಬ ಉದ್ದೇಶ ಸನ್ಮಾನ್ಯ ಶಿವರಾಮೇಗೌಡರದು ಅಲ್ಲ. ಆದುದರಿಂದ ಅವರು ಬಹುಶಃ ಇದರ ಬಗ್ಗೆ ವಿಷಾದ ಕೂಡಾ ಖಂಡಿತವಾಗಿ ಸೂಚಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸದನದ ಘನತೆಯನ್ನು ಎತ್ತಿ ಹಿಡಿಯುವುದರಲ್ಲಿ, ಪರಂಪರೆಯನ್ನು ಎತ್ತಿಹಿಡಿಯುವುದರಲ್ಲಿ ತಮ್ಮ ಸ್ಥಾನಮಾನ ಇರಬಹುದು ಅಥವಾ ಸನ್ಮಾನ್ಯ ವಿರೋಧಪಕ್ಷದ ನಾಯಕರ ಒಂದು ಸ್ಥಾನಮಾನದಘನತೆ ಇರಬಹುದು ಅದನ್ನು ಎತ್ತಿಹಿಡಿಯುವುದರಲ್ಲಿ ಯಾವಾಗಲೂ ಕೂಡಾ ಶಿವರಾಮೇಗೌಡರು ಪ್ರಯತ್ನ ಮಾಡುತ್ತಾರೆ, ಅದಕ್ಕೆ ಸಹಕರಿಸುತ್ತಾರೆ ಮತ್ತು ಈ ಒಂದು ವಿಧಾನಸಭೆಯ ಸದನದ ಒಂದು ಪರಂಪರೆಗೆ ಕೂಡಾ ಖಂಡಿತವಾಗಿ ಸ್ಪಂದಿಸುತ್ತಾರೆ ಎಂಬ ವಿಶ್ವಾಸ ಇದೆ, ಆದ್ದರಿಂದ ಅವರು ಏನು ಕೆಲವು ಘಟನೆ ನಡೆಯಿತು ಅದಕ್ಕೆ ವಿಷಾದ ಸೂಚಿಸಿ ಈ ಒಂದು ಪ್ರಸಂಗಕ್ಕೆ ಇತಿಶ್ರೀ ಹಾಡಬೇಕೆಂದು ತಮ್ಮ ಮುಖೇನ ಕೇಳಿಕೊಳ್ಳುತ್ತೇನೆ. ನಮ್ಮ ಮುಂದೆ ಪ್ರಮುಖವಾದ ಏನು ಮಸೂದೆ ಇದೆ, ಅದು ಕರ್ನಾಟಕ ರಾಜ್ಯದ ಜೀವಾಳ, ಕಾವೇರಿ ಯಾವರೀತಿ ಕರ್ನಾಟಕರಾಜ್ಯದ ಜೀವಾಳವೋ ಅದೇ ರೀತಿ ಕೃಷ್ಣಾ ಜಲಾನಯನ ಕೂಡಾ ಕರ್ನಾಟಕ ರಾಜ್ಯದ ಜೀವಾಳ, ಈ ಎರಡೂ ಕೂಡಾ ಬೆಳವಣಿಗೆಯಾದಾಗ ಕರ್ನಾಟಕ ರಾಜ್ಯ ನಿಜವಾಗಿಯೂ ಆರ್ಥಿಕ ಮತ್ತು ಸಾಮಾಜಿಕವಾಗಿ ಇಡೀ ರಾಷ್ಟ್ರದಲ್ಲಿ ತಲೆ ಎತ್ತಿ ನಿಲ್ಲುವುದಕ್ಕೆ ಸಾಧ್ಯ ಇದೆ, ಇದಕ್ಕೆ ಸ್ಪಂದಿಸಿ ಈ ಒಂದು ಮಸೂದೆಯನ್ನು ಸರ್ವಾನುಮತದಿಂದ ಅಂಗೀಕಾರ ಮಾಡಬೇಕು, ಎಲ್ಲರ ಕ್ರಿಯಾಶೀಲವಾದ ಭಾಗವಹಿಸುವಿಕೆಯಿಂದ ಇದು ಆಗಬೇಕು, ಇದಕ್ಕೆ ಎಲ್ಲರೂ ಕೂಡಾ ಸಹಕಾರಿಯಾಗುತ್ತಾರೆ ಎಂಬ ವಿಶ್ವಾಸ ಹೊಂದಿ ಸನ್ಮಾನ್ಯ ಶಿವರಾಮೇಗೌಡರು ಈ ಬಗ್ಗೆ ಸೂಕ್ತವಾದ ಒಂದು ಕೆಲಸ ಮಾಡುತ್ತಾರೆ, ಏನು ವಿಚಾರ ನಡೆದಿದೆ ಅದಕ್ಕೆ ಅವರು ತಮ್ಮ ಒಂದು ವಿಚಾರವನ್ನು ಕೂಡಾ ಸೇರಿಸಿ, ಸ್ಪಂದಿಸಿ, ಈ ಮನೆಯ ವಿರೋಧ ಪಕ್ಷದ ನಾಯಕರಿಗಾಗಲೀ ಅಥವಾ ಈ ಸದನದ ಮರ್ಯಾದೆ ಘನತೆ ವಿಚಾರದಲ್ಲಿ ಯಾವರೀತಿಯ ಕುಂದೂ ಬರದಂತೆ ನೋಡಿಕೊಳ್ಳುತ್ತಾರೆ ಎಂಬ ವಿಶ್ವಾಸ ಇದೆ. ಆ ವಿಶ್ವಾಸದಿಂದ ಅವರು ನಡೆದುಕೊಳ್ಳುತ್ತಾರೆ ಎಂಬ ಭರವಸೆ ಇದೆ. ಈ ಬಗ್ಗೆ ತಮ್ಮ ವಿಚಾರ ಹೇಳಬೇಕೆಂದು ಕೂಡಾ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಸಂಸದೀಯ ಸಚಿವರು ಹೇಳಿದಹಾಗೆ ನಾವೆಲ್ಲರೂ ಸಹಿತ ಪ್ರಥಮಬಾರಿಗೆ ಈ ಅಧಿವೇಶನಕ್ಕೆ ಬಂದಿರತಕ್ಕಂಥವರು. ಇನ್ನೂ ನಾವೆಲ್ಲರೂ ಕೂಡಾ ಕಲಿಯಬೇಕಾದುದು ಬಹಳ ಇದೆ ಎಂದು ನಾನು ಭಾವನೆ ಮಾಡಿಕೊಳ್ಳುತ್ತೇನೆ. ಆದರೆ ನನ್ನ ಒಟ್ಟಾರೆ ಉದ್ದೇಶ ಈ ಮಸೂದೆಗೆ ಸ್ವಾಗತ ಮಾಡಬೇಕೆಂತಲೂ ಮತ್ತು ಹತ್ತಿಕೊಂಡು ಉರಿಯುತ್ತಿರುವ ನಮ್ಮ ಪ್ರದೇಶಕ್ಕೆ ಅಂದರೆ ಕಾವೇರಿಗೆ ಸಹಿತ ಹಿತಕ್ಕೆ ಸರಕಾರ ಒಂದು ಬೋರ್ಡ್ ಮಾಡಬಾರದು ಎಂಬ ವಿಜಾರದಲ್ಲಿ ತಾತ್ವಿಕವಾಗಿ ಒಪ್ಪಿಗೆಯನ್ನು ಕೊಡಬೇಕೆಂಬ ವಿಚಾರದಲ್ಲಿ ಕ್ರಿಯಾಲೋಪ ಮಾಡಿದಂತ ಸಂದರ್ಭ ಅದು. ಆ ಸಂದರ್ಭದಲ್ಲಿ ಚರ್ಚೆ ಮುಂದಕ್ಕೆ ಹೋಗಿ ಸ್ವಲ್ಪ ದೊಡ್ಡದಾಗಿ ಹೋದಂತ ಪ್ರಸಂಗ ನಡೆಯಿತು. ಈ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರಿಗೆ ಅಥವಾ ಇನ್ನೂ ಯಾರಿಗಾದರೂ ನೋವಾಗಿದ್ದರೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ ಮತ್ತು ಈ ಮಸೂದೆಗೆ ನನ್ನ ಸ್ವಾಗತ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಸನ್ಮಾನ್ಯ ಸಂಸದೀಯ ಸಚಿವರು ಹೇಳಿದಹಾಗೆ ಇದಕ್ಕೆ ಇತಿಶ್ರೀ ಹಾಡಿ, ಇದಕ್ಕೆ ಮನ್ನಣೆ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ (ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, ನಡೆದಂಥ ಘಟನೆ ಬಗ್ಗೆ ವಿಷಾದ ವ್ಯಕ್ತಮಾಡಿದ್ದಾರೆ, ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಇಂತಹ ಒಂದು ಐತಿಹಾಸಿಕವಾದಂಥ ಈ ಒಂದು ವಿಧೇಯಕವನ್ನು ಮಂಡಿಸುತ್ತಿದ್ದೇನೆ.. ನಾವು ಎರಡು ಸಾವಿರದ ಇಸವಿಯೊಳಗೆ ನಮಗೆ ಲಭ್ಯವಿರತಕ್ಕ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ, ಅದರಲ್ಲಿ ಸುಮಾರು 757 ಟಿ.ಎಂ.ಸಿ. ನಮ್ಮ ಪಾಲಿಗೆ ಬರುತ್ತದೆ, ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನಾವು ಈಗಾಗಲೇ ಸುಮಾರು 465 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿರುತ್ತೇವೆ. ಇನ್ನೂ 492 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಬೇಕಾಗಿದೆ. ಈ ಒಂದು ವಿಶೇಷವಾದ ಪ್ರಾಧಿಕಾರವನ್ನು ಏನು ರಚನೆ ಮಾಡುತ್ತಿದ್ದೇವೆ ಇದಕ್ಕೆ ತನ್ನದೇ ಆದಂಥ ಎಲ್ಲ ರೀತಿಯ ಅಧಿಕಾರವನ್ನೂ ಕೂಡಾ ಕೊಡುತ್ತೇವೆ. ಮುಖ್ಯವಾಗಿ ಈ ಜಲಾನಯನ ಪ್ರದೇಶದ ಅಭಿವೃದ್ಧಿಗಾಗಿ ಒಂದು ಸ್ವಂತ ನಿಧಿಯನ್ನು ಸಂಗ್ರಹಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಇದೇ ತರಹ ಕಡ್ಡಾಯವಾಗಿ ಭೂ ಸ್ವಾಧೀನಕ್ಕಾಗಿ ಕೂಡಾ ವಿಶೇಷವಾದ ಕಾನೂನು ವ್ಯವಸ್ಥೆ ಕೂಡಾ ಇದರಲ್ಲಿದೆ. ಯಾವುದಾದರೂ ವಿವಾದ ಬಂದರೆ ಆ ವಿವಾದಗಳನ್ನು ಕೂಡಾ ಅದೇ ಪ್ರಾಧಿಕಾರದಿಂದ ಅಲ್ಲೇ ತೀರ್ಮಾನ ಮಾಡತಕ್ಕ ವಿಶೇಷವಾದ ಅಧಿಕಾರವನ್ನು ಈ ಪ್ರಾಧಿಕಾರಕ್ಕೆ ಕೊಡುತ್ತಿದ್ದೇವೆ.

ಪ್ರಾಧೀಕಾರದ ಹಿತರಕ್ಷಣೆಗಾಗಿ ಸರ್ಕಾರಿ ನೌಕರಿಯಲ್ಲಿರತಕ್ಕಂಥ ಸಿಬ್ಬಂದಿ ವರ್ಗದಮೇಲೆ ಪ್ರಾಧಿಕಾರದ ಹಿತದೃಷ್ಟಿಯಿಂದ ಮಾಡಿದ ಕೆಲಸದ ವ್ಯಾಪ್ತಿಯಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಪ್ತಿಗೆ ಬಾರದೇ ಇರತಕ್ಕಂಥ ಕಾನೂನಿನ ಚೌಕಟ್ಟಿನಲ್ಲಿ ಕೂಡ ತರತಕ್ಕಂಥ ಪರಿಸ್ಥಿತಿ ಈ ಒಂದು ವಿದೇಯಕದಲ್ಲಿ ತರಲಿಕ್ಕೆ ಮೂಲಭೂತವಾಗಿ ಆ ಹಿನ್ನೆಲೆಯಲ್ಲಿ 2 ಸಾವಿರ ಇಸವಿಯೊಳಗೆ ಇರತಕ್ಕಂಥ ನೀರಿನ ಸಂಗ್ರಹಣೆ ಏನಿದೆ ನಮ್ಮ ಪಾಲಿನ ನೀರಿನ ಸಂಗ್ರಹಣೆಯನ್ನು ಸರ್ವ ರೀತಿಯಲ್ಲೂ ಆದಷ್ಟು ಶೀಘ್ರವಾಗಿ ಬರುವ 8 ವರ್ಷಗಳಲ್ಲಿ ಉಪಯೋಗ ಮಾಡತಕ್ಕಂಥ ಹಿನ್ನೆಲೆಯಲ್ಲಿ ಇದು ಒಂದು ಪ್ರಾಧಿಕಾರ ರಚನೆ ಮಾಡಲಿಕ್ಕೆ ತೀರ್ಮಾನ ಮಾಡಿದ್ದೇವೆ. ಅದಕ್ಕೆ ಎಲ್ಲಾ ಪಕ್ಷದ ಮಾನ್ಯ ಸದಸ್ಯರು ವಿರೋಧಪಕ್ಷದ ನಾಯಕರು ವಿರೋಧಪಕ್ಷದ ಉಪನಾಯಕರು ಎಲ್ಲಾ ಪಕ್ಷದ ಸದಸ್ಯರು ಕೂಡ ಚರ್ಚೆಯಲ್ಲಿ ಪಾಲ್ಗೊಂಡು ಸಂಪೂರ್ಣವಾದ ಮಾರ್ಗದರ್ಶನ ಮಾಡಿ ಈ ವಿಧೇಯಕವನ್ನು ಸರ್ವಾನುಮತದಿಂದ ಪಾಸ್ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು):— ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶ ಅಭಿವೃದ್ಧಿ ಪ್ರಾಧೀಕಾರ ವಿಧೇಯಕ 1992ನ್ನು ನಾನು ಸ್ವಾಗತಿಸುತ್ತಾ, ಈ ಕೃಷ್ಣಾ ಜಲಾನಯನ ಪ್ರದೇಶಕ್ಕೆ ಸಂಬಂದಪಟ್ಟಂತೆ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಮಾಡಬೇಕೆಂದು ನಾನು ನಿಂತಿದ್ದೇನೆ. 1969ರಲ್ಲಿ ಕೃಷ್ಣಾ ಜಲಾನಯನ ಪ್ರದೇಶ ಮತ್ತು ಒಟ್ಟಾರೆ ಕೃಷ್ಣಾ ನದಿ ನೀರಿನಲ್ಲಿರತಕ್ಕಂಥ ನೀರಿನ ಒಟ್ಟು ಉಪಯೋಗಕ್ಕೆ ಒಂದು ಪಂಚಾಯಿತಿಯನ್ನು ಕೇಂದ್ರ ಸರ್ಕಾರ ನೇಮಕ ಮಾಡುವ ತೀರ್ಮಾನ ತೆಗೆದುಕೊಂಡರು. ಆ ಪಂಚಾಯಿತಿಗೆ ಜಸ್ಟೀಸ್ ಬಚಾವತ್ ಅವರ ಅಧ್ಯಕ್ಷತೆಯಲ್ಲಿ ಒಂದು ನಿರ್ಣಯವನ್ನು ಕೊಟ್ಟಿದ್ದಾರೆ. ಆ ನಿರ್ಣಯದಂತೆ ಒಟ್ಟು ಕೃಷ್ಣಾ ನದಿ ನೀರಿನಲ್ಲಿ ಸುಮಾರು 2 ಸಾವಿರ 60 ಟಿಎಂ.ಸಿ.ಎಫ್.ಟಿ. ಇದೆ ಎಂದು ಅದರಲ್ಲಿ 75 ಭಾಗ ಡಿಪೆಂಡಬಿಲಿಟಿ ಮೇಲೆ ಇದರಲ್ಲಿ ಕರ್ನಾಟಕ ರಾಜ್ಯದ ಭಾಗ 700 ಟಿ.ಎಂ.ಸಿ.ಎಫ್.ಟಿ. ಮತ್ತು ಮಹಾರಾಷ್ಟ್ರದ ಭಾಗ 560 ಟಿ.ಎಂ.ಸಿ.ಎಫ್.ಟಿ. ಆಂಧ್ರಪ್ರದೇಶದ ಭಾಗ 800 ಟಿ.ಎಂ.ಸಿ.ಎಫ್.ಟಿ ಎಂದು ನಿರ್ಧಾರ ಮಾಡಿದ್ದಾರೆ. ಇದು ಸ್ಕೀಮ್ (ಎ) ಅಂತ ಹೇಳಿ ಇದನ್ನು ಪ್ರಸಿದ್ಧಿಪಡಿಸಿದ್ದಾರೆ. ಮತ್ತೆ ಉಳಿದಿರತಕ್ಕಂತ ಈ ಜನರೇಷನ್ ಆಗತಕ್ಕಂಥ ನೀರು ಎಷ್ಟು ಇದೆ ಎನ್ನತಕ್ಕಂಥಾದ್ದನ್ನು ಅಂದಾಜು ಮಾಡಿ ಇದರಲ್ಲಿ ಶೇಕಡ ಅರ್ಧಭಾಗ ಕರ್ನಾಟಕ ರಾಜ್ಯಕ್ಕೆ ಬರಬೇಕು ಅಂತಲೂ 25 ಭಾಗ ಮಹಾರಾಷ್ಟ್ರಕ್ಕೂ ಕೊಡಬೇಕೆಂತಲೂ ಶೇಕಡ 11ರಷ್ಟು ಆಂಧ್ರಪ್ರದೇಶಕ್ಕೆ ಕೊಡಬೇಕೆಂತಲೂ ತೀರ್ಮಾನ ಮಾಡಿದ್ದಾರೆ. ಅಲ್ಲಿಗೆ ರೀ ಜನರೇಶನ್ ಸೇರಿಕೊಂಡು ಸುಮಾರು 734 ಟಿಎಂಸಿಎಫ್‌ಟಿ ನೀರನ್ನು ನಾವು ಸ್ಕೀಮ್ (ಎ)ನಂತೆ ಬಳಕೆ ಮಾಡಬೇಕು. ಸ್ಕೀಮ್ (ಬಿ) ಲೆಕ್ಕಕ್ಕೆ ಇರತಕ್ಕಂಥ ಅಥವಾ ಹೆಚ್ಚಾಗಿ ಎಕ್ಸಸ್ ಆಗಿ ಬರತಕ್ಕಂಥ ನೀರನ್ನು ಅಂದಾಜು ಮಾಡಿ 333 ಟಿಎಂಸಿಎಫ್‌ಟಿ. ಅಂತ ಕೇಳಿ

ಬಚಾವತ್ ಅವಾರ್ಡ್‌ನಲ್ಲಿ ಕಾಣಿಸಿದ್ದಾರೆ. ಅದರ ಪಾಲು 166.5 ಟಿಎಂಸಿಎಫ್‌ಟಿ ಕರ್ನಾಟಕ ರಾಜ್ಯಕ್ಕೆ 91 ಟಿಎಂಸಿ ಮಹಾರಾಷ್ಟ್ರಕ್ಕೆ ಆಂಧ್ರಪ್ರದೇಶಕ್ಕೆ 76 ಟಿ.ಎಂ.ಸಿ.ಎಫ್.ಟಿ. ನೀರು ಇದರಲ್ಲಿ ಹಂಚಿಕೆ ಮಾಡಿದ್ದಾರೆ. ಅರ್ಥಾತ್ ಒಟ್ಟು ಕರ್ನಾಟಕ ರಾಜ್ಯದಲ್ಲಿ ಕೃಷ್ಣಾನ ಜಲಾನಯನ ಪ್ರದೇಶದಲ್ಲಿ ಸಿಗಬಹುದಾದ ನೀರು 905 ಟಿ.ಎಂ.ಸಿ.ಎಫ್.ಟಿ ಅಷ್ಟು ಸುಮಾರಾಗಿ 900 ಟಿಎಂಸಿಎಫ್‌ಟಿ ನೀರು ಅಂತ ಹೇಳಬಹುದು. ಇಷ್ಟು ದೊಡ್ಡ ಪ್ರಮಾಣದ ನೀರು ನಾವು ಬಳಕೆ ಮಾಡಿಕೊಳ್ಳುವುದಕ್ಕೆ ಕಳೆದ 30 ವರ್ಷಗಳಿಂದ ಆಗಿರತಕ್ಕಂಥ ಪ್ರಯತ್ನ ಎಷ್ಟು ಎನ್ನುವ ವಿವರಕ್ಕೆ ನಾನು ಹೋಗುವುದಿಲ್ಲ. ಆದರೆ ಎಷ್ಟರ ಮಟ್ಟಿಗೆ ಪ್ರಯತ್ನ ಆಗಬೇಕಾಗಿತ್ತೋ ಅಷ್ಟರಮಟ್ಟಿಗೆ ಪ್ರಯತ್ನ ಆಗಿಲ್ಲ. ಈಗಿನ ನಿರೀಕ್ಷಿತ ಫಲ ಸಿಗದೆ ಇರುವುದರಿಂದ ನಾವು ಮಾತ್ರ ಧಾರಾಳವಾಗಿ ಬಳಕೆ ಮಾಡಬೇಕು ಎನ್ನುವುದನ್ನು ನೀರಾವರಿ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ ಅಂತ ನಾನು ಭಾವನೆ ಮಾಡುತ್ತೇನೆ.

ಆ ದೃಷ್ಟಿಯಿಂದ ಎರಡು ಸಾವಿರ ಇಸವಿಯೊಳಗೆ ಈ ಒಟ್ಟಾರೆ 905 ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರನ್ನು ನಾವು ಬಳಕೆ ಮಾಡಿಕೊಳ್ಳದಿದ್ದರೆ, ಆನೀರಿನ ಮೇಲೆ ಇರತಕ್ಕಂಥ ಹಕ್ಕು ಕರ್ನಾಟಕದಿಂದ ಕೈಬಿಡುತ್ತದೆ. ಆದ್ದರಿಂದ ಉಳಿದಿರತಕ್ಕಂಥ 8 ವರ್ಷಗಳಲ್ಲಿ ಮುಖ್ಯವಾದ ಎಕ್ಸಿಕ್ಯುಟಿವ್ ಪವರ್ಸ್ ಕೂಡಾ ಕೊಟ್ಟು ಇದನ್ನು ಮಾಡಿದ್ದೀರಿ, ಸಂತೋಷ. ಬಹಳ ಹಿಂದೆ ಇದಾಗಬೇಕಾಗಿತ್ತು. ತಡವಾಗಿಯಾದರೂ ಈ ಒಂದು ಆಲೋಚನೆಯನ್ನು ಮಾಡಿದ್ದೀರಿ. ಅದಕ್ಕಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮುಖ್ಯವಾಗಿ ಕೆಲವು ವಿಚಾರಗಳನ್ನು ರಾಜ್ಯದ ಮುಖ್ಯಮಂತ್ರಿಗಳು ಗುಟ್ಟಾಗಿ ಒಪ್ಪಿಕೊಂಡಿದ್ದಾರೆ. ಪುಟ್ಟಪರ್ತಿಯಲ್ಲಿ ನಡೆದಂಥ ಸಭೆಯಲ್ಲಿ ಈ ಒಪ್ಪಂದ ಆಗಿತ್ತು ಎನ್ನತಕ್ಕಂಥ ಶಂಕೆಯನ್ನು ಈ ರಾಜ್ಯದ ಜನ ಅಭಿವ್ಯಕ್ತ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಆಗಿದೆಯೋ ಅಥವಾ ಇಲ್ಲವೋ? ಮಾತುಕತೆ ಆಗಿತ್ತೋ ಎಂಬುದನ್ನು ಈ ರಾಜ್ಯದ ಗಮನಕ್ಕಾಗಲೀ ಸದನದ ಗಮನಕ್ಕಾಗಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತಿಳಿಸಿಲ್ಲ. ಆ ದಿವಸ ಆಂಧ್ರಪ್ರದೇಶ ಮುಖ್ಯಮಂತ್ರಿಗಳು ಮತ್ತು ಕರ್ನಾಟಕದ ಮುಖ್ಯಮಂತ್ರಿಗಳು ಮಾತ್ರ ಇರಲಿಲ್ಲ. ಈ ದೇಶದ ಪ್ರಧಾನಮಂತ್ರಿಗಳು ಇದ್ರು ಎನ್ನತಕ್ಕಂಥಾದ್ದು ಬಹಳ ಗಮನಾರ್ಹವಾದ ಅಂಶ. ನಾನು ಪ್ರಧಾನ ಮಂತ್ರಿಗಳ ಮೇಲೆ ಗೂಬೆ ಕೂರಿಸಬೇಕು ಎನ್ನತಕ್ಕಂಥ ಇಚ್ಛೆ ನನಗಿಲ್ಲ. ಆದರೆ ಅವರೂ ಕೂಡಾ lower reparian statesನಿಂದ ಬರುತ್ತಾರೆ ಎಂಬುದು ನಮ್ಮ ಗಮನದಲ್ಲಿರಬೇಕು. ಅದು ಅಷ್ಟಕ್ಕೆ ಸೀಮಿತವಾಗಿ ನಾನು ಹೇಳುತ್ತೇನೆ. upper reparian states ಗಳ ರಕ್ಷಣೆ ಮಾಡುವಷ್ಟು ಒಳ್ಳೆಯ ಮನಸ್ಸು ಬುದ್ಧಿ ಅವರಿಗೆ ಕೊಡಲಿ ಎಂದು ನಾವು ಪ್ರಾರ್ಥನೆ ಮಾಡಬಹುದು ಅಷ್ಟೇ! ಆ ದೃಷ್ಟಿಯಿಂದ ಈ ಸಮಾನಾಂತರ ಕಾಲುವೆ ಮಾತುಕತೆ ನಡೆದಿತ್ತೇ? ಹಾಗೆ ನಡೆದಿದ್ರೆ ಅಲ್ಲಿ ನಡೆದಂಥ ಗೋಪ್ಯ ಚರ್ಚೆಯ ಮಾತುಕಥೆಗಳಲ್ಲಿ ನಡೆದಿರತಕ್ಕಂಥ ಏನಾದರೂ ನಿರ್ಣಯಗಳನ್ನು ನೀವು ಮಾಡಿದ್ದೀರೋ? ರಾಜ್ಯ ಸರ್ಕಾರ ಇದಕ್ಕೆ ಏನಾದರೂ ಬದ್ಧವಾಗಿದೆಯೋ? ಹಾಗಿಲ್ಲದೆ ಇದ್ರೆ ಇದುವರೆಗೆ ನೀವು ಹೇಳದೆ ಇರುವುದಕ್ಕೆ ಕಾರಣ ಏನು ಎನ್ನತಕ್ಕಂಥಾದ್ದನ್ನು ನಾನು ಮಾನ್ಯ ಸಚಿವರನ್ನು ಪ್ರಾರ್ಥನೆ ಮಾಡುತ್ತೇನೆ. ಮತ್ತೊಂದು ಬಹಳ ಮುಖ್ಯವಾದಂಥಾದ್ದು, ತೆಲುಗು ಗಂಗಾ ಯೋಜನೆ. ನಾವು ಒಟ್ಟು ನಮಗೆ ಬಂದಂಥ ನೀರಿನ ಪ್ರಮಾಣದಲ್ಲಿ ಮದ್ರಾಸ್‌ಗೆ ಕುಡಿಯುವುದಕ್ಕೆ ನೀರು ಇಲ್ಲ; ಆದ್ದರಿಂದ ಕುಡಿಯುವುದಕ್ಕೆ ನೀರು ಕೊಡಬೇಕು. ಅದಕ್ಕಾಗಿ ನಮ್ಮ ಹಕ್ಕಿನಲ್ಲಿ 5 ಟಿಎಂಸಿಎಫ್‌ಟಿ.ಯಷ್ಟು ನೀರನ್ನು ಆಂಧ್ರಪ್ರದೇಶದ ಹಕ್ಕಿನಲ್ಲಿ 5 ಟಿಎಂಸಿಎಫ್‌ಟಿ ಯಷ್ಟು ನೀರನ್ನು ಮಹಾರಾಷ್ಟ್ರದ 5 ಟಿಎಂಸಿಎಫ್‌ಟಿ ಯಷ್ಟು ನೀರನ್ನು ಒಟ್ಟು 15 ದಶಲಕ್ಷ ಘನ ಅಡಿಯಷ್ಟು ನೀರನ್ನು ಮದ್ರಾಸ್ ನಗರಕ್ಕೆ ಕುಡಿಯುವುದಕ್ಕೆ ನೀರು ಕೊಡಬೇಕೆಂದು ಒಂದು ಒಪ್ಪಂದಕ್ಕೆ ನಾವು ಬಂದಿದ್ದೇವೆ. ಅದರಂತೆ ತೆಲುಗು ಗಂಗಾ ಯೋಜನೆಯನ್ನು ಕಾರ್ಯಾರಂಭ ಮಾಡಬೇಕೆಂದು ಹೇಳಿ 28 ಅಕ್ಟೋಬರ್ 1977ರಲ್ಲಿ on the mode of supply of the said 15 TMCFT of water to Madras city.

ಶ್ರೀ ಜಿ. ಎಸ್. ಶಿವನಂಜಪ್ಪನವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ಒಂದು ಅಗ್ರಿಮೆಂಟನ್ನು ಡ್ರಾ ಮಾಡಿದರು. ಇದರ ಪ್ರಕಾರ 28 ಅಕ್ಟೋಬರ್ 1977ರಲ್ಲಿ ಒಂದು ಕರಾರನ್ನು ಕೆಲವು ನಿಬಂಧನೆಗಳ ಸಹಿತ ಒಪ್ಪಂದ ಮಾಡಿಕೊಂಡಿರತಕ್ಕಂಥಾದ್ದನ್ನು ಈ ಸದನದ

ಗಮನಕ್ಕೆ ತರುತ್ತಿದ್ದೇನೆ ಅದರಲ್ಲಿ ಮುಖ್ಯವಾಗಿ "Tamilnadu shall be permitted to draw not more then 15 TMC FT. Water a year." This is the first condition.
ಈ 15 ಟಿ.ಎಂ.ಎಫ್.ಸಿ.ಟಿ ವಾಟರನ್ನು ಡ್ರಾ ಮಾಡುವ ಅಧಿಕಾರ ಅದು ಅವಕಾಶ ಮತ್ತು ಅಗತ್ಯ. ಮದ್ರಾಸಿಗೆ ಕುಡಿಯುವ ನೀರಿಗಾಗಿ ಕೊಡಬೇಕು ಎಂಬ ದೃಷ್ಟಿಯಿಂದ ಮಾಡಿದ್ದರೆ, ತೆಲುಗುಗಂಗಾ ಯೋಜನೆಯಲ್ಲಿ ಕಾಲುವೆಯನ್ನು ಏನು ತೆಗೆಯುತ್ತಾ ಇದ್ದಾರೆ 1,150 ಕ್ಯೂಸೆಕ್ಸ್ ನೀರು ಹೋಗತಕ್ಕಂಥ ಕಾಲುವೆಯನ್ನು ತೆಗೆಯುವ ಬದಲಿಗೆ 11 ಸಾವಿರ ಕ್ಯುಸೆಕ್ಸ್ ನೀರು ಹೋಗತಕ್ಕಂಥ ಕಾಲುವೆಯನ್ನು ಆಂಧ್ರಪ್ರದೇಶದವರು ತೆಗೆಯುತ್ತಾ ಇದ್ದಾರೆ ಎನ್ನತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದರೆ ಕೇಂದ್ರ ಸರಕಾರ ಇದಕ್ಕೆ ಒಪ್ಪಿಗೆ ಕೊಡಕೂಡದು ಎಂದು ಹೇಳಿ, ಈ ಸರಕಾರ ಏನಾದರೂ ಪ್ರೊಟೆಸ್ಟನ್ನು ಕಳುಹಿಸಿದೆಯೇ? ಕಳುಹಿಸದೇ ಇದ್ದರೆ ಈ 11 ಸಹಸ್ರ ಕ್ಯುಸೆಕ್ಸೆಫ್ ನೀರು ಈ ತೆಲುಗು ಗಂಗಾ ಕಾಲುವೆಯಲ್ಲಿ ಹರಿಯುವುದಕ್ಕೆ ಬಿಟ್ಟರೆ ಮುಖ್ಯವಾಗಿ ಈಗ ಮಾಡತಕ್ಕಂಥ ವಾದ ಏನು? ಕೃಷ್ಣಾ ಜಲಾನಯನ ಪ್ರದೇಶದ ನೀರು ವ್ಯರ್ಥವಾಗಿ ಹೋಗುತ್ತಾ ಇದೆ, ಇದರ ಉಪಯೋಗ ಇವರಿಗಾದರೂ ಆಗಲೀ, ಅವರಿಗಗಾದರೂ ಆಗಲೀ, ಅಂತೂ ಉಪಯೋಗ ಮಾಡದೇ ಇರಬೇಡಿ ಎಂದು ಕೇಂದ್ರ ಸರಕಾರದವರು ವಾದ ಮಾಡುತ್ತಾರೆ. ನಾವು ಎಲ್ಲಾ ಪ್ರಧಾನ ಮಂತ್ರಿಗಳ ಜೊತೆಗೂ ಈ ಬಗ್ಗೆ ಮಾತುಕತೆಗಳನ್ನು ಆಡುವಾಗ ಅವರು ಇದೇ ವಾದವನ್ನು ಇಡುತ್ತಾರೆ. ಆದರೆ ಹೀಗೆ ನೀವು ಅವರಿಗೆ ಅವಕಾಶವನ್ನು ಮಾಡಿಕೊಟ್ಟರೆ ಎರಡು ಸಾವಿರ ಇಸವಿಯೊಳಗೆ ಇದನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗದಿದ್ದರೆ, ಅಥವಾ ಒಂದು ವೇಳೆ ಉಪಯೋಗಿಸಿಕೊಂಡರೂ ಕೂಡ ಮುಂದೆ lower riparian State ಅದು ಆಂಧ್ರಪ್ರದೇಶದ ಹಕ್ಕು ಆಗುತ್ತದೆ ಎಂಬುದನ್ನು ಗಂಬೀರವಾಗಿ ಈ ಸರಕಾರದವರು ಗಮನದಲ್ಲಿ ಇಟ್ಟುಕೊಳ್ಳಬೇಕು. ಆ ಕಾರಣಕ್ಕಾಗಿ 15 ಟಿಎಂಎಫ್‌ಸಿಎಫ್‌ಟಿ ನೀರಿಗಿಂತ ಒಂದು ಹನಿ ಹೆಚ್ಚು ನೀರು ಬಳಕೆ ಮಾಡಿಕೊಳ್ಳುವುದಕ್ಕೆ ಅಥವಾ ಈ ಕಾಲುವೆಯಲ್ಲಿ ಹರಿಯುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ ಎಂಬ ಒಂದು ವಾಗ್ದಾನವನ್ನು ಸರಕಾರದವರು ಈ ಸದನದ ಮೂಲಕ ಈ ರಾಜ್ಯದ ಜನತೆಗೆ ಕೊಡಬೇಕೆಂದು ಹೇಳಿ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಬಹಳ ಮುಖ್ಯವಾಗಿ ಈ ನೀರನ್ನು ನನ್ನ ಅನಿಸಿಕೆಯ ಪ್ರಕಾರ ಯಾವ ಸ್ಕೀಮ್‌ನಲ್ಲಿ ಕೊಟ್ಟುತ್ತೀರಿ? ಸ್ಕೀಮ್ ಎ) ನಲ್ಲಿಯೂ ಐದು ಟಿಎಂಸಿಎಫ್‌ಟಿ ಕೊಡುವುದಕ್ಕೆ ಆಗುವುದಿಲ್ಲ. ಅವರು ಎರಡನೇ ಕಂಡೀಶನ್‌ನಲ್ಲಿ ಏನು ಹೇಳುತ್ತಾರೆ "The period of drawal shall be from 1st of July to 31st of October of that year." ಜುಲೈನಿಂದ ಅಕ್ಟೋಬರ್‌ವರಗೆ ನೀವು ಈ ನೀರನ್ನು ಡ್ರಾ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. The canal from Srishailam to Someshaila dam on pannar shall have a capacity of only 1500 cusecs capacity. ಅರ್ಥಾತ್ ನಾನು 1,150 ಕ್ಯೂಸೆಕ್ಸ್ ಎಂದೇನು ಹೇಳಿದೆ, ಒಟ್ಟು ಅದರ ಡ್ರಾಯಿಂಗ್ ಕೆಪಾಸಿಟಿ 1500 ಕ್ಯುಸೆಕ್ಸ್ ವರೆಗೆ ಇರಬಹುದು. ಅದಕ್ಕಿಂತ ದೊಡ್ಡ ಕಾಲುವೆಯನ್ನು ತೆಗೆಯುವುದಕ್ಕೆ ಆಂಧ್ರ ಸರಕಾರಕ್ಕಾಗಲೀ, ಅಥವಾ ಅಲ್ಲಿಂದ ಕೆಳಗಡೆ ಹೊಗತಕ್ಕಂಥ ರಾಜ್ಯಗಳಿಗಾಗಲೀ ಅವಕಾಶ ಇಲ್ಲ ಎನ್ನತಕ್ಕಂಥ ನಿಭಂದನೆಯನ್ನು ಇಲ್ಲಿ ಹಾಕಿದ್ದಾರೆ. This lined canal shall not be utilised for irrigation and other consumptive uses. this is one of the conditions.
ಇದು ಕೂಡ ಒಂದು ಕಂಡೀಶನ್. ಈಗ ವಾದ ಏನೆಂದರೆ, ಈಗ ವ್ಯರ್ಥವಾಗಿ ನೀರು ಹೋಗುತ್ತಾ ಇದೆ, ಅದನ್ನು ಸಮುದ್ರಕ್ಕೆ ಬಿಡುವ ಬದಲು ನಾವೇ ತಾತ್ಕಾಲಿಕವಾಗಿ 8–10 ವರ್ಷಗಳ ವರೆಗೆ ಉಪಯೋಗಿಸಿಕೊಳ್ಳುತ್ತೇವೆ, ಇದಕ್ಕೆ ಅವಕಾಶ ಕೊಡಿ, ಅಥವಾ ಕೊಡಬೇಕೆಂದು ತಮ್ಮ ವಾದವನ್ನು ಆಂಧ್ರಪ್ರದೇಶ ಸರಕಾರದವರು ಕೇಂದ್ರ ಸರಕಾರದವರ ಮುಂದಿಟ್ಟಿದ್ದಾರೆ. ಈ ವಾದಕ್ಕೆ ನಾವೇನಾದರೂ ಕಿವಿ ಕೊಟ್ಟರೆ, ಅಥವಾ ನಾವು ಸ್ವಲ್ಪವಾದರೂ ಎಡವಿದರೆ, ಅಥವಾ ತಪ್ಪು ಹೆಜ್ಜೆಯನ್ನು ಇಟ್ಟರೆ ಮುಂದೆ ಇದು ಆ ರಾಜ್ಯದ ಹಕ್ಕು ಆಗುತ್ತದೆ ಎಂಬುದನ್ನು ನಾನು ಮತ್ತೆ ಮತ್ತೆ ಒತ್ತಿ ಹೇಳುತ್ತೇನೆ. The Government of India will arrange to inspect and ensure that

withdrawal from Srishilam shall not exceed 15 TMC ft. in a year and this water is only used for water supply to Madras city.
ಈಗ ಏನೆಂದರೆ, ಈಗ ಇರತಕ್ಕಂಥ ತೆಲುಗು ಗಂಗಾ ಕಾಲುವೆಯನ್ನು ಏನು ಆಂಧ್ರಪ್ರದೇಶದವರು ಮಾಡುತ್ತಾ ಇದ್ದಾರೆ it violates all the conditions laid down in this agreement. This is my complaint. ಆದ್ದರಿಂದ ನೀವು ಪ್ರಾಧಿಕಾರ ಹೀಗೆ ನಾವು ಮಾಡಿರತಕ್ಕಂಥ ಅಗ್ರಿಮೆಂಟನ್ನು ವೈಲೇಟ್ ಮಾಡತಕ್ಕಂಥ ಒಂದು ತೀರ್ಮಾನಕ್ಕೆ ಬಂದರೆ ಅಂಥಾದ್ದರಲ್ಲಿ ನೀವು ಮಾಡಿರತಕ್ಕಂಥ ಪ್ರಾಧಿಕಾರ ಈ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಇದು ಅಂತರರಾಜ್ಯ ಸಮಸ್ಯೆಯಾಗುತ್ತದೆ, ರಾಜ್ಯ ಮತ್ತು ರಾಷ್ಟ್ರದ ಸಮಸ್ಯೆಯಾಗುತ್ತದೆ. ಆ ಕಾರಣದಿಂದ ಇದನ್ನು ನೀವು ಯಾವರೀತಿ ಪ್ರಾಧಿಕಾರದ ವ್ಯಾಪ್ತಿಗೆ ತರುವ ಪ್ರಯತ್ನ ಮಾಡ್ತಿರಾ ಅಂತ ಹೇಳಬೇಕು. ಮತ್ತೆ ನಾನು ಇದನ್ನು ವಿಸ್ತಾರವಾಗಿ ಚರ್ಚೆ ಮಾಡಲು ಹೋಗುವುದಿಲ್ಲ ಈ ಕಂಡೀಶನ್ಸ್ ಏನು ವಯಲೇಟಾಗಿದೆ ಇದು ವಯಲೇಶನ್ ಆಗಿದ್ದರೆ ರಾಜ್ಯಸರ್ಕಾರ ಇದನ್ನು ಉಳಿಸಿಕೊಳ್ಳುವುದಕ್ಕೆ ಏನು ಪ್ರಯತ್ನ ಮಾಡ್ತದೆ ಎನ್ನೋದನ್ನು ತಮ್ಮಲ್ಲಿ ಕೇಳೋದಕ್ಕೆ ಅಪೇಕ್ಷೆ ಮಾಡ್ತೇನೆ. ಮತ್ತೊಂದು ಮುಖ್ಯವಾದ ವಿಚಾರ ಆಂಧ್ರದ ಮುಖ್ಯಮಂತ್ರಿ ಜನಾರ್ಧನರೆಡ್ಡಿಯವರು ಒಂದು ಮಾತು ಹೇಳಿದ್ದಾರೆ ಅದು ಗೋದಾವರಿ ನದಿಯಲ್ಲಿರುವ ಹೆಚ್ಚು ನೀರನ್ನು ಹಂಚಿಕೊಳ್ಳುವುದಕ್ಕಾಗಲೀ ಉಪಯೋಗಿಸಿಕೊಳ್ಳುವುದಕ್ಕಾಗಲಿ ಅವಕಾಶ ಇಲ್ಲ ಅಂತ ಹೇಳಿದ್ದಾರೆ. ಇದು ಇಲ್ಲಿ ತಾತ್ಕಾಲಿಕವಾಗಿ ಅಪ್ರಸ್ತುತ ಅಂತ ಕಾಣಬಹುದು, ಆದರೆ ಮಾನ್ಯ ಸಚಿವರ ಸರ್ಕಾರದ ಅವಗಾಹನೆಗೆ ತರುತ್ತಿದ್ದೇನೆ. ಈ ಬಚಾವತ್ ತೀರ್ಪು ಬರುವ ಮುನ್ನ ಆ ಟ್ರಿಬ್ಯೂನಲ್ ಏನು ರಚನೆ ಮಾಡಿದರು ಆ ಕಾಲಕ್ಕೆ ನಾನಂದುಕೊಂಡಿರುವುದು ನಿಜವಿದ್ದರೆ ಗೋದಾವರಿ ಕೂಡ ಇದರ ವ್ಯಾಪ್ತಿಯಲ್ಲಿತ್ತು. 1971ರಲ್ಲಿ ಶ್ರೀ ವೀರೇಂದ್ರಪಾಟೀಲರ ಸರ್ಕಾರ ಬಿದ್ದುಹೋಯ್ತು. ರಾಷ್ಟ್ರಪತಿಗಳ ಆಳ್ವಿಕೆ ಜಾರಿಗೆ ಬಂತು ಆ ಕಾಲದಲ್ಲಿ ಗೋದಾವರಿಯನ್ನು ಇದರ ವ್ಯಾಪ್ತಿಯಿಂದ ತೆಗೆದು ಬರೀ ಕೃಷ್ಣಾ ಜಲಾನಯನ ಪ್ರದೇಶ ಅಂತ ತಿದ್ದುಪಡಿಯನ್ನು ಕೇಂದ್ರ ಸರ್ಕಾರ ಮಾಡ್ತು ಅನ್ನುವುದು ನಮ್ಮ ನೆನಪಿನಲ್ಲಿದೆ. ಇಲ್ಲಿ 21 ವರ್ಷಗಳ ಹಿಂದೆ ನಡೆದ ಘಟನೆಗೆ ಕಾರಣ ಏನು? it is a fact, ಏತಕ್ಕೆ ತೆಗೆದರು ಅನ್ನುವುದು ಈ ಜನಾರ್ಧನರೆಡ್ಡಿಯವರು ಈಗ ಮಾಡುವ ಹೇಳಿಕೆಯಿಂದ ನಿಮಗೆ ಅರ್ಥವಾದೀತು ಅಂತ ನನ್ನ ಭಾವನೆ. ಅಲ್ಲಿ ಎಷ್ಟು ಎಚ್ಚರಿಕೆಯಿಂದ ರಾಜ್ಯದ ಮುಖ್ಯಮಂತ್ರಿ ಒಂದು ಎಳೆಯನ್ನು ಆ ಕಾಲಕ್ಕೆ ಏನು ಬಿಟ್ಟು ಹೋಗಿದ್ದರು, 21 ವರ್ಷದ ತರುವಾಯ ಕೂಡ ಆಂಧ್ರಪ್ರದೇಶದ ಸರ್ಕಾರ, ಮುಖ್ಯಮಂತ್ರಿಗಳು ಆಲೋಚನೆ ಮಾಡ್ತದೆ ಎಂಬುದನ್ನು ಅಧ್ಯಕ್ಷರೇ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಏಕೆ ಹೇಳ್ತಿದ್ದೇನೆಂದರೆ ತುಂಗಭದ್ರಾ ಅಲ್ಲಿಂದಾಚೆಗೆ ಶ್ರೀಶೈಲಂ ಇರಲಿ ಮತ್ತೊಂದು ಇರಲಿ, ಕೃಷ್ಣಾ ಜಲಾನಯನದಲ್ಲಿ ಅಣೆಕಟ್ಟು ಕಟ್ಟುವ ಕಾಲದಲ್ಲಿ ಆಂಧ್ರಪ್ರದೇಶ ಎಲ್ಲ ಕೆಲಸವನ್ನೂ ಸ್ಥಗಿತಗೊಳಿಸಿತು, ಎಲ್ಲ ಹಣ ತಗೊಂಡುಹೋಗಿ ಅಲ್ಲಿ ಸುರೀತು ಸರ್ಕಾರದ ನೌಕರರು ಒಂದೊಂದು ತಿಂಗಳ ತಮ್ಮ ಸಂಬಳ ಬಿಟ್ಟರು. ಕಟ್ಟಡಗಳನ್ನು ಕಟ್ಟಲಿಲ್ಲ ರಸ್ತೆಗಳನ್ನು ಮಾಡಲಿಲ್ಲ ಎಲ್ಲ ಇಲಾಖೆಗಳ ಹಣ ತಂದು ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್‌ಮಾಡಿಕೊಂಡರು. ನಾವೇನು ಮಾಡ್ತಿದ್ದೇವೆ ಇವತ್ತು, ವಿಶ್ವ ಯೋಜನೆಗೆ 500ಕೋಟಿ, ಅದನ್ನು ಮಾಡಬಾರದು ಅಂತ ಹೇಳೋದಿಲ್ಲ, 2 ಸಾವಿರ ಇಸವಿಯೊಳಗೆ, ಇದು ಹೇಗಿದೆ ಅಂದರೆ ಅಕ್ಕನ ಮನೇಲಿ ಊಟವಾಗಬೇಕು ಅಕ್ಕಿ ಖರ್ಚಾಗಬಾರದು ಈ ಪ್ರವೃತ್ತಿ ಆಗೋದಿಲ್ಲ ನಿಖರವಾಗಿ ನಿರ್ದಿಷ್ಟವಾಗಿ ನೀರಿನ ಬಳಕೆ ಆಗಬೇಕೆಂದು ಕಂಡರೆ ಏನಿದು ಹುಚ್ಚುಚ್ಚಾಗಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಬಡವರಿಗೆ ಮನೆ ಕಟ್ಟಿಕೊಡಬೇಕು, ಸುಮಾರು 400 ಕೋಟಿ ರೂ ಪ್ರಾಜೆಕ್ಟ್ ಹಾಕಿಬರೋದು, ಇದ್ಯಾವಾಗ ಆಗುತ್ತವೋ? ಇಷ್ಟು ದಿವಸ ಕಾದ ನಿಮ್ಮ ಜನ ಇಂತಹ ಒಳ್ಳೆಯ ಕೆಲಸ ಮಾಡೋದಾದರೆ ಇನ್ನೆರಡು ವರ್ಷ ಕಾಯ್ತಾರೆ. ಈ ಹಣ ಅಲ್ಲಿ ತಗೊಂಡುಹೋಗಿ ಹಾಕಬಹುದು. 48 ಕೋಟಿ ರೂ ಕೊಡುವ ಕಾರ್ಯಕ್ರಮ ಮಕ್ಕಳಿಗೆ ಈ ಸಾರಿ 80 ಕೋಟಿಯಾಗಿದೆ, ಕೇಳಿದರೆ ಯಾರಾದರೂ? ಈ ಕಾಲದಲ್ಲಿ ಕೂಡ ವಿದ್ಯಾವಂತ ಮಕ್ಕಳಿಗೆ ರೂಪಾಯಿ ಕೊಟ್ಟು ಬೀಡಿ ಸೇದಿಸಬಹುದೇ ಹೊರತು ವಿದ್ಯೆ ಕಲಿಸುವುದಕ್ಕಾಗುವುದಿಲ್ಲ. ಇಂತಹ ಅನ್‌ಪ್ರಾಡಕ್ಟೀವ್

ಕಾರ್ಯಕ್ರಮಗಳನ್ನು ಹಾಕುತ್ತೇವೆ, ಪ್ಲಾನಿಂಗನ್ನು ಮಾಡುವಾಗ ದುಡ್ಡನ್ನು ಎಲ್ಲಿ ಒದಗಿಸುತ್ತೀರಿ? ಇದು ಒಂದು ಕಷ್ಟ ನಮಗೆ. ಈಗ ಈ ಕಾರ್ಯಕ್ರಮಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಎರಡು ಸಾವಿರ ಇಸವಿಗೆ ಆ ಜನ ಇವತ್ತಿನ ಸರ್ಕಾರಕ್ಕೆ ಶಾಪವನ್ನು ಹಾಕುತ್ತಾರೆ, ಹಿಂದಿನ ಸರ್ಕಾರಗಳಿಗೂ ಹಾಕಬಹುದು. ಅದು ಏನು ಎಂದರೆ ಶಾಪವನ್ನು ಅವರು ಹಾಕುತ್ತಿರುತ್ತಾರೆ ನಿವು ಇರುವುದಿಲ್ಲ, ಅವರು ಇರುತ್ತಾರೋ ಇಲ್ಲವೋ ನಮಗೆ ಗೊತ್ತಿಲ್ಲ. ನಾವು ಶಾಪಗ್ರಸ್ಥರಾಗಬಾರದು ಎನ್ನತಕ್ಕಂಥ ಸವಿಚ್ಛೆ ಇದ್ದರೆ ಶಾಪ ವಿಮೋಚನ ಮಾಡಿಕೊಳ್ಳಬೇಕು ಎನ್ನತಕ್ಕಂಥ ಇಚ್ಛೆ ಇದ್ದರೆ ಈ ರಾಜ್ಯದ ಒಟ್ಟಾರೆ ಅಭಿವೃದ್ಧಿ ಆಗಬೇಕು ಎನ್ನತಕ್ಕಂಥದ್ದು ಭದ್ರವಾದಂಥ ಆರ್ಥಿಕ ಬುನಾದಿಯ ಮೇಲೆ ಈ ರಾಜ್ಯವನ್ನು ಕಟ್ಟಬೇಕು ಎನ್ನತಕ್ಕಂಥ ಅಭಿಲಾಷೆ ಇದ್ದರೆ ನಾವು ಈಗ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಯಾವ ಕಾರ್ಯಕ್ರಮಗಳು ಅನ್‌ಪ್ರೊಡಕ್ಟೀವ್ ಎಂದು ಕಾಣುತ್ತದೆ, ಅಂಥವುಗಳನ್ನು ಇವತ್ತಾದರೂ ಸ್ಥಗಿತಗೊಳಿಸಿ, ನೀರಾವರಿಗೆ ಅದನ್ನು ಹಾಕಿ. ಇಲ್ಲದಿದ್ದರೆ ಎರಡು ಸಾವಿರ ಇಸವಿಗೆ ಮುಗಿಸುತ್ತೇವೆ, ಬಚಾವತ್ ಅವಾರ್ಡ್‌ನಲ್ಲಿ ಕೊಟ್ಟು ಮುಗಿಸುತ್ತೇವೆ ಎಂದರೆ ಹೇಗೆ ಮುಗಿಸುತ್ತೀರಿ? ನಿಮಗೆ ಉದಾಹರಣೆಯಾಗಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತುಂಗಾ ಮೇಲ್ದಂಡೆ ಯೋಜನೆಯ ಶಂಕುಸ್ಥಾಪನೆಯನ್ನು ಮಾಡಿದರು ಅದರ ಪ್ರಾಜೆಕ್ಟ್ ಕಾಸ್ಟ್ ಎಷ್ಟು ಎಂದರೆ 333 ಕೋಟಿ ರೂಪಾಯಿಗಳು. 2 ಲಕ್ಷದ 34 ಸಾವಿರ ಎಕರೆಗೆ ನೀರನ್ನು ಕೊಡುತ್ತೇವೆ ಎಂದು ಹೇಳಿದರು. ನಾನು ಕೇಳುತ್ತೇನೆ, ಹಣವನ್ನು ಎಲ್ಲಿಂದ ತರುತ್ತೀರಿ? ನೀರು ಎಲ್ಲಿ ತರುತ್ತೀರಿ? ಈ ಎರಡೂ ಬೇಕು. ಬಚಾವತ್ ಅವಾರ್ಡ್‌ನಲ್ಲಿ ಹೇಳುತ್ತಾರೆ, ಕೃಷ್ಣಾ ಮೇಲ್ಭಾಗದಲ್ಲಿ 16 ಟಿಎಂಸಿಎಫ್‌ಟಿ ನೀರಿಗಿಂತ ಹೆಚ್ಚು ನೀರನ್ನು ನೀವು ಬಳಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಇಲ್ಲ. ಎರಡು ಲಕ್ಷದ 34 ಸಾವಿರ ಎಕರೆ ನೀರನ್ನು ಕೊಡಬೇಕು ಎನ್ನತಕ್ಕಂಥದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಹೋಗಿ ಏನು ಶಿಲಾನ್ಯಾಸ ಮಾಡಿದ್ದೀರಿ, ಕನಿಷ್ಟ ನನ್ನ ಲೆಕ್ಕದಲ್ಲಿ 23 ಟಿಎಂಸಿಎಫ್‌ಟಿ ಯಾದರೂ ನೀರು ಬೇಕು; semi-dry crop ಮಾಡಿದರೆ ನೀವು ಎಲ್ಲಿಂದ ನೀರನ್ನು ತರುತ್ತೀರಿ? ಹೋಗಿ ಅಲ್ಲಿ ಗುದ್ದಲಿ ಪೂಜೆಯನ್ನು ಮಾಡಿದಿರಿ. ರೂಪಾಯಿ ಏನಾದರೂ ಇಟ್ಟಿದ್ದೀರೋ ಒಂದು ರೂಪಾಯಿ ಇಲ್ಲ, ಸೆಂಟ್ರಲ್ ವಾಟರ್ ಕಮಿಷನ್‌ರವರಿಂದ (ಸಿಡಬ್ಲ್ಯೂಸಿ) ಕ್ಲಿಯರೆನ್ಸ್ ಇಲ್ಲ, ಪ್ಲಾನಿಂಗ್ ಕಮೀಷನ್‌ನ ಕ್ಲಿಯರೆನ್ಸ್ ಇಲ್ಲ. ಮೇಲಾಗಿ ಕೇಂದ್ರ ಸರ್ಕಾರದ ಅನುಮತಿ ಇಲ್ಲ. ರಾಜ್ಯಸರ್ಕಾರದ ಆಯವ್ಯಯದಲ್ಲಿಯೂ ಹೇಳುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿಯೂ ಹೇಳುವುದಿಲ್ಲ. ಆಯವ್ಯಯದಲ್ಲಿ ಹಣವನ್ನು ಒದಗಿಸುವುದಿಲ್ಲ. 333 ಕೋಟಿ ರೂಪಾಯಿ ಪ್ರಾಜೆಕ್ಟ್‌ಗೆ ರಾಜ್ಯದ ಮುಖ್ಯಮಂತ್ರಿಗಳು ಹೋಗಿ ಶಿಲಾನ್ಯಾಸ ಹಾಕುತ್ತಾರೆ. ಆ ರೀತಿ ಹಾಕುವಾಗ ಹೋಗಲಿ ನೀರಾದರೂ ಇದೆಯೊ ನಿಮಗೆ?

ಪ್ರೊ : ಎಂ.ಡಿ. ನಂಜುಂಡಸ್ವಾಮಿ – ತಾವು ಪ್ಲಾನಿಂಗ್ ಕಮಿಷನ್ ಕ್ಲಿಯರೆನ್ಸ್ ಇಲ್ಲ ಎಂದು ಹೇಳಿದಿರಿ. ಈ ಕಾಗದಪತ್ರಗಳು ಪ್ಲಾನಿಂಗ್ ಕಮಿಷನ್‌ಗೆ ಹೋಗೇ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :– ಒಂದು ಸಾರಿ ಹೋಗಿದೆ. ವಾಪಸ್ ಬಂದಿದೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :– ಇಲ್ಲ, I have a letter from Mr. Mohan Dharia that these papers have not reached the planning Commission.

ಶ್ರೀ ಡಿ.ಬಿ. ಚಂದ್ರೇಗೌಡ :– ಪ್ಲಾನಿಂಗ್ ಕಮಿಷನ್‌ಗೆ ಅಲ್ಲ. ಕೇಂದ್ರ ಸರ್ಕಾರಕ್ಕೆ ಒಂದು ಸಾರಿ ಹೋಗಿದೆ. ಕೇಂದ್ರಸರ್ಕಾರಕ್ಕೆ ಹೋಗಿ ವಾಪಸ್ ಬಂದಿದೆ, ಪುನಃ ಕಳುಹಿಸಿಲ್ಲ. ಸೆಂಟ್ರಲ್ ವಾಟರ್ ಕಮಿಷನ್‌ಗಂತೂ ಈ ಪ್ರಪೋಸನಲ್ಲೇ ಹೋಗಿಲ್ಲ. ಈಗಾಗಲೇ ಕಾವೇರಿ ಜಲಾನಯನ ಪ್ರದೇಶದಲ್ಲಿ ಪ್ಲಾನಿಂಗ್ ಕಮಿಷನ್ ಕ್ಲಿಯರೆನ್ಸ್ ಇಲ್ಲ ಎಂದು ಹೇಳಿ ಕೇಂದ್ರದ ಅಸಿಸ್ಟೆನ್ಸ್ ಬರುತ್ತಿಲ್ಲ ಎಂದು ಹೇಳಿ ನಾವು ರಾಜ್ಯದಲ್ಲಿ ಅಲ್ಲೋ, ಇಲ್ಲೋ ತೇಪೆ ಹಾಕಿ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಎಂದು ಮಾಡಿಕೊಂಡು ಹೋಗುತ್ತಿದ್ದೇವೆ. ಇಲ್ಲಿ You did not even pose, let alone clearance, for the consideration of the planning Commission ಈ ರೀತಿ ಆದರ ನಿಮ್ಮ ಪ್ರಾಧಿಕಾರ ಮಾಡಿ ಏನು ಪ್ರಯೋಜನ? ಕೋಟು ಕೊಟ್ಟಿದ್ದೇವೆ, ಶರ್ಟು ಕೊಟ್ಟಿದ್ದೇವೆ, ಎಲ್ಲಾ ಕೊಟ್ಟಿದ್ದೇವೆ ಎಂದು ಹೇಳಿ ಇಲ್ಲಿ ಈ ಶಾಸನಸಭೆಯಲ್ಲಿ ನಮ್ಮನ್ನು ವಿರೋಧ ಪಕ್ಷದವರನ್ನು

ಮೂರ್ಖರನ್ನಾಗಿ ಮಾಡುವುದು ಬೇಡ. ಜನರನ್ನಂತೂ ಇನ್ನು ಮುಂದೆ ಮಾಡುವುದು ಬೇಡ. ಇಷ್ಟು ಮಾಡಿದ್ದು ಸಾಕು. ಎಷ್ಟು ಹಾಸಿಗೆ ಇದೆಯೋ ಅಷ್ಟು ಕಾಲು ಚಾಚುವುದಕ್ಕೆ ಪ್ರಯತ್ನವನ್ನು ಮಾಡೋಣ. ಇಲ್ಲಿ ನಮಗೆ ಬಹಳ ಅನೇಕ ತೊಂದರೆಗಳು ಇದ್ದಾವೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಪೂರ್ಣವಾದರೆ ನೀವು ಹಾಕಿಕೊಂಡಿರತಕ್ಕ 22 ಲಕ್ಷ ಎಕರೆ ಭೂಮಿಗೆ ನೀರು ಕೊಡತಕ್ಕಂಥದ್ದು ನಿಮ್ಮ ಮನಸ್ಸಿನಲ್ಲಿ ಇದ್ದರೆ ಬಹುತೇಕ 400 ಟಿ.ಎಂ.ಸಿ. ನೀರು ಬೇಕಾಗುತ್ತದೆ. ಅದೊಂದು ಪ್ರಾಜೆಕ್ಟ್‌ಗೆ 400 ಘನ ಅಡಿಗಳಷ್ಟು ನೀರು ಬೇಕಾಗುತ್ತದೆ. ಉಳಿದ ಪ್ರಾಜೆಕ್ಟ್‌ಗಳನ್ನು ಹೇಗೆ ಮಾಡುತ್ತೀರಿ? ಅದರ ವಿವರವನ್ನು ನಾನು ಮಾನ್ಯ ಮಂತ್ರಿಗಳಿಗೆ ಕೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಏನಾದರೂ ಒಂದು ಆಧಾರವಿದ್ದರೆ ಹೇಳಿ. please take us into confidence. We are not opposed for any irrigntion projects in particular. ಪ್ರಾಧಿಕಾರದಲ್ಲಿ ಈ ವಿಚಾರಗಳ ಬಗ್ಗೆ ಅದಕ್ಕೆ ನಾನು ಹಾಗಲೇ ಹೇಳಿದೆ. In the reported statement of Andhra Pradesh Chief Minister on linking of southern rivers, ಅವರು ಆಪೋಸ್ ಮಾಡುತ್ತಾರೆ. ಗೋದಾವರಿ ಬಗ್ಗೆ ಆಂಧ್ರಪ್ರದೇಶದವರು ಆಪೋಸ್ ಮಾಡುತ್ತಾರೆ. ಒರಿಸ್ಸಾದವರು ಮಹಾನದಿಯನ್ನು ತರುವುದಕ್ಕೆ ಅಪೋಸ್ ಮಾಡುತ್ತಾರೆ. ಒಟ್ಟು ಒರಿಸ್ಸಾದವರ ವಿರುದ್ಧ, ಆಂಧ್ರಪ್ರದೇಶದವರ ವಿರುದ್ಧ ಮತ್ತು ಮಹಾರಾಷ್ಟ್ರದವರ ವಿರುದ್ಧ, ನಾವು ಇಲ್ಲಿ ಮದರಾಸಿಗೆ ನೀರನ್ನು ಕೊಡಬೇಕು. Southern rivers ನ್ನೂ ಇಂಟಿಗ್ರೇಡ್ ಮಾಡತಕ್ಕದ್ದಕ್ಕೆ ಏನಾದರೂ ಪ್ಲಾನಿಂಗ್ ಇದೆಯೋ? ಕೃಷ್ಣ ಸೀರಿಯಸ್ ಎನ್ನುವಾಗ ಬರೀ ಕೃಷ್ಣಾ ನದಿಯನ್ನು ಅಷ್ಟೇ ನೋಡಿದರೆ ಸಾಕಾಗುವುದಿಲ್ಲ. ಆದ್ದರಿಂದ ಈ ವಿವರಗಳನ್ನು ಮಾನ್ಯ ಮಂತ್ರಿಗಳು ನಮಗೆ ಕೊಡಬೇಕು. ನಿನ್ನೆ ತಾನೆ ಈ ಸದನದಲ್ಲಿ "ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರ" ಮತ್ತು ಬಾಗಲಕೋಟೆ ಮುಳುಗುತ್ತದೆ ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಹಿಂದೆ ನಮ್ಮ ಸರ್ಕಾರದ ಇದ್ದಂತಹ ಕಾಲದಲ್ಲಿ ಮುಳುಗುತ್ತದೆ ಎನ್ನುವ ದ್ವಂದ್ವ, ಮೊದಲನೆಯದಾಗಿ ಈ 535 ಮನೆಗಳು ಮುಳುಗುತ್ತವೆ, ಇವರಿಗೆ ಪರಿಹಾರವನ್ನು ಕೊಡುವುದಕ್ಕೆ ಏನು ಮಾಡಬೇಕು. ಆಮೇಲೆ ಗೋಡೆ ಹಾಕುವುದು. ಇವೆಲ್ಲಾ ಆಗಿ ಕಟ್ಟಕಡೆಗೆ ಬಾಗಲಕೋಟೆ ನಗರವನ್ನು ಸ್ಥಳಾಂತರಿಸತಕ್ಕ ಒಂದು ಸ್ಕೀಮ್ ಅನ್ನು ತಯಾರು ಮಾಡಿದರು. 1984ರಲ್ಲಿ ರಿಹ್ಯಾಬಿಲಿಟೇಷನ್‌ಕ್ಯೋಸ್ಕರ ಒಂದು ಸಮಿತಿಯನ್ನು ರಚನೆ ಮಾಡಿದರು. 1989ರಲ್ಲಿ ಯಾವಾಗ ಬಾಗಲಕೋಟೆ ಮುಳುಗಡೆಯಾಗುತ್ತದೆ ಎನ್ನತಕ್ಕ ನಿರ್ಣಯಕ್ಕೆ ಬಂತೋ, ಆಗ ಈ ಒಂದು ಪ್ರಾಧಿಕಾರವನ್ನು ವಜಾಮಾಡಿ ಎರಡು ಕಮಿಟಿಗಳನ್ನು ಮಾಡಿದರು. ಆ ಕಮಿಟಿಗಳು ಅಸ್ತಿತ್ವಕ್ಕೆ ಬಂತು ಆಮೇಲೆ ಏನಾಯಿತೊ ಗೊತ್ತಿಲ್ಲ. 1991 ಕ್ಕೆ ಯಾರೋ ಒಬ್ಬ ರಾಜಕಾರಣಿಯನ್ನು ರಿಹ್ಯಾಲಿಟೇಟ್ ಮಾಡಬೇಕೆಂದು ಹೇಳಿ ಮತ್ತೆ ಆ ಕಮಿಟಿಯನ್ನು ನೇಮಕಮಾಡಿದರು. ಕನಿಷ್ಠ ಈ ಪ್ರಾಧಿಕಾರದ ವ್ಯಾಪ್ತಿಗೆ ಎಲ್ಲವನ್ನು ತರತಕ್ಕದ್ದು ನಿಮ್ಮ ಸದಿಚ್ಛೆಯಾಗಿದ್ದರೆ ಈ ಸಮಿತಿಯನ್ನು ವಜಾ ಮಾಡಿ ಈ ಪ್ರಾಧಿಕಾರದ ಒಳಗೆ ತರುತ್ತೀರೋ? ಇಲ್ಲದಿದ್ದರೆ ಕೃಷ್ಣಾ ಜಲಾನಯನ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮಾನಾಂತರವಾಗಿರತಕ್ಕ ಮತ್ತೊಂದು ಪ್ರಾಧಿಕಾರವನ್ನು ನೀವು ಏನು ರಚನೆ ಮಾಡಿದ್ದೀರಿ, ಈ ರಚನೆ ಅನಾವಶ್ಯಕ. ಅನಗತ್ಯ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ ಕೂರಿಸಿದ್ದೀರಿ. ಅವರಿಗೆಲ್ಲ ಸಂಬಳ ಸವಲತ್ತು ಎಲ್ಲವನ್ನು ಕೊಟ್ಟು ಈ ರೀತಿ ಒಬೊಬ್ಬರನ್ನು ರಿಹ್ಯಾಬಿಲಿಟೇಟ್ ಮಾಡುತ್ತೀರೋ ಅಥವಾ ಇಡೀ ಬಾಗಲಕೋಟೆಯನ್ನು ರಿಹ್ಯಾಬಿಲಿಟೇಟ್ ಮಾಡತಕ್ಕ ಎಂಟೈರ್ ಸ್ಕೀಮ್ ಅನ್ನು ಈ ಪ್ರಾಧಿಕಾರದ ಒಳಗಡೆ ತರುತ್ತೀರೋ ಎನ್ನತಕ್ಕ ವಿವರಣೆಯನ್ನು ಕೇಳುತ್ತೇನೆ, ಸಾಧ್ಯವಾದಷ್ಟು ಮಟ್ಟಿಗೆ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. ಇದನ್ನು ನಾನು ನೋಡಿದೆ. ಇದು ಬಹಳ ಇಂಟರೆಸ್ಟಿಂಗ್ ಆಗಿದೆ. ಈ ಪ್ರಾಧಿಕಾರದ ಸದಸ್ಯರುಗಳು ಯಾರ್‍ಯಾರೆಂದು ಹೇಳುತ್ತೇನೆ.

"The Authority shall consist of the following members,

Namely—

(a) Chief Minister ... Chairman

(b) Minister in Charge of
Major and Medium Irrigation ... Vice-Chairman
(c) Minister in charge of
Minor Irrigation ... Member
(d) Minister in charge of ...."

ಒಂದು ಕಾಲದಲ್ಲಿ ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ ಮೇಜರ್‌ಗೆ ಒಬ್ಬರು ಇದ್ದರು. ಮೈನರ್‌ಗೆ ಒಬ್ಬರು ಇದ್ದರು. ಈಗಲೂ ಒಬ್ಬರು ಇದ್ದಾರೆ. ಮುಂದೆ ಮೂರು ಜನ ಆದರೆ ಏನು ಮಾಡುವುದು. ಅವರಿಗೆ ಎಲ್ಲಿ ತರುತ್ತೀರಿ. Therefore, please use a little commonsense in constituting the Committee. Say 'Minister in charge of the Irrigation' ಅಷ್ಟು ಹೇಳಿ. ಮೂರು ಜನವಾದರೂ ಇರಲಿ, ಒಂಭತ್ತು ಜನವಾದರೂ ಇರಲಿ, Minister in charge of agriculture ಹಾಕಿ, ಇವರೆಲ್ಲಾ ಪದ ನಿಮಿತ್ತ ಸದಸ್ಯರು. ಈ ಪದ ನಿಮಿತ್ತ ಸದಸ್ಯರು ಯಾವಾಗ ಬೇಕಾದರೂ ಬದಲಾವಣೆಯಾಗಬಹುದು, ಮಂತ್ರಿಗಳೂ ಬದಲಾವಣೆಯಾಗಬಹುದು, ಮುಖ್ಯಮಂತ್ರಿಗಳೂ ಬದಲಾವಣೆಯಾಗಬಹುದು. ಆದುದರಿಂದ ದಯಮಾಡಿ ಆ ಪ್ರದೇಶದಿಂದ ಬರತಕ್ಕಂಥ ಅಭಿವೃದ್ಧಿ ಪ್ರಾದಿಕಾರದಲ್ಲಿ ಆಸಕ್ತಿ ಇರತಕ್ಕಂಥ, ಈ ರಾಜ್ಯದ ಒಟ್ಟಾರೆ ಹಿತವನ್ನು ಕಾಯತಕ್ಕಂಥ ಅನುಭವಿಗಳನ್ನು, ಕೆಲವು ಖಾಸಾಗಿಯವರನ್ನು ಸದಸ್ಯರನ್ನಾಗಿ ಮಾಡಿ. ಈಗ ಶ್ರೀ ಬಾಳೆಕುಂದ್ರೀ ಎನ್ನುವ ಒಬ್ಬರು ಹೆಸರಾಂತ, ನೀರಾವರಿ ಬಗ್ಗೆ ಹೆಚ್ಚಾಗಿ ತಿಳಿದುಕೊಂಡಿರುವ ನಿಷ್ಠಾವಂತ ಇಂಜಿನಿಯರ್ ಇದ್ದಾರೆ. ಮತ್ತು ಮಾನ್ಯ ಅಂಗಡಿಯವರು ಇದ್ದಾರೆ, ಬೇಕಾದಷ್ಟು ಜನರಿದ್ದಾರೆ. ಅಂತಹ ಅನೇಕ ಜನರನ್ನು ಖಾಸಾಗಿಯಾಗಿ ಹೆಸರಿಸಬಹುದು. ಈ ಹಿಂದೆ ನೀರಾವರಿ ಮಂತ್ರಿಗಳಾಗಿದ್ದ ಶ್ರೀ ನಂಜೇಗೌಡರು ಇರಬಹುದು, ಇನ್ನು ಅನೇಕರು, ನೀರಾವರಿಯಲ್ಲಿ ಆಸಕ್ತಿ ಇರತಕ್ಕಂಥ ಜನರಿದ್ದಾರೆ, ಇದು ಏನಾಗುತ್ತದೆಂದರೆ ಅಧಿಕಾರಿಗಳ ಸಮಿತಿಯಾಗುತ್ತದೆ. ಮುಖ್ಯಮಂತ್ರಿಗಳು ಸಭೆಗೆ ಹೋಗಲಿಲಿಲ್ಲವೆಂದರೆ ಸಭೆ ನಡಯುವ ಹಾಗಿಲ್ಲ, ಉಳಿದ ಅಧಿಕಾರಿಗಳು ತಮಗೆ ಹೇಗೆ ಬೇಕೋ ಹಾಗೆ ಮಾಡುತ್ತಾರೆ. ಇಲ್ಲಿ ಮಿನಿಸ್ಟರ್ ಇನ್‌ಚಾರ್ಜ್ ಆಫ್ ಇರಿಗೇಶನ್ ಎಂದು ಮೇಜರ್, ಮೀಡಿಯಂ, ಮೈನರ್ ಎಂದು ಇವರುಗಳನ್ನೆಲ್ಲಾ ಹೇಳುವುದಕ್ಕೆ ಹೋಗಬೇಡಿ. 5 ಜನರಿರಲಿ, ಒಬ್ಬರೇ ಇರಲಿ, ಅಷ್ಟು ಜನಕ್ಕೆ ಅವಕಾಶ ಮಾಡಿಕೊಡಬೇಕು. ಕೆಲವರನ್ನಾದರೂ ಖಾಸಗಿ ಸದಸ್ಯರನ್ನು ಇಟ್ಟುಕೊಳ್ಳಿ. ಅನಂತರ, ನೀವು ಈ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸುವಾಗಿ, ಇದನ್ನು ಸರ್ಕಾರಿ ಸಮಿತಿ ಎಂದು ಮಾಡಿದ್ದೀರಿ. ಇದು ಸರ್ಕಾರಿ ಸಮಿತಿ ಆಗಬಾರದು. ಒಂದು ಸರ್ಕಾರದ ಸಮಿತಿ, ಉಳಿದವರಿಗೆ ಯಾರಿಗೂ ಆಸಕ್ತಿ ಇಲ್ಲವೇನೋ ಎನ್ನುವಂಥ ಭಾವನೆ ಬರಬಾರದು. ಅದರಲ್ಲಿ ಯಾರೇ ಇರಲಿ, ಇವೊತ್ತು ಚಂದ್ರೇಗೌಡರು ಇರಬಹುದು, ನಾಳೆ ಮಲ್ಲಾರಿಗೌಡ ಪಾಟೀಲರು ಇಲ್ಲಿ ಬಂದು ಕೊರಬಹುದು. ಇಲ್ಲದೆ ಇನ್ನಾರೋ ಬಂದು ಈ ಜಾಗದಲ್ಲಿ ಕೂರಬಹುದು. ಇಲ್ಲಿ ಪ್ರತಿಪಕ್ಷದ ಮುಖಂಡರುಗಳಿಗೆ ಅವಕಾಶ ಮಾಡಿಕೊಡಬೇಕು. ಇಲ್ಲಿ ಭಾಗ ಮಾಡಬೇಡಿ, ರಾಜಕೀಯ ಮಾಡುವುದಕ್ಕೆ ಹೋಗಬೇಡಿ. ರಾಜಕೀಯ ಮಾಡುವುದು ಅನಾವಶ್ಯಕ, ಅನಗತ್ಯ. ಆ ಕಾರಣ ತಾವು ಈ ಸಮಿತಿಯನ್ನು ಸ್ವಲ್ಪ ವಿಸ್ತಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಿಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಪೂರ್ತಿಯಾಗಿ ಕೃಷ್ಣಾ ಜಲಾನಯನದ ವ್ಯಾಪ್ತಿಯಲ್ಲಿ ಬಹತಕ್ಕಂಥ ಎಲ್ಲಾ ನೀರಾವರಿ ಸಮಸ್ಯೆಗಳನ್ನು ಇದರಲ್ಲಿ ತೋರಿಸುವುದಕ್ಕೆ ನಾವು ಪ್ರಯತ್ನ ಮಾಡುವುದಿಲ್ಲ. ಮೂ ಉದ್ದೇಶವೇನೆಂದರೆ, ತುಂಗಾ, ಭದ್ರಾ ನದಿಗಳು ಹುಟ್ಟುವುದು ನಮ್ಮ ಊರಿನಲ್ಲಿಯೇ, ಇವರು 'ನಮ್ಮನ್ನು ಬಿಟ್ಟೆ ಮಾಡುತ್ತೇವೆ' ಎಂದು ಹೇಳುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಆ ತರಹ ನಾವೇನು ಮಾಡುವುದಕ್ಕೆ ಹೊರಟಿಲ್ಲ. ಮಾ ವಿರೋಧಪಕ್ಷದ ನಾಯಕರು ನದಿ ಮೂಲ ಪ್ರಾರಂಭವಾಗತಕ್ಕಂಥ ಪ್ರದೇಶದವರು. ಅವರನ್ನು ಬಿಟ್ಟು ನಾವು ಹೇಗೆ ನಡೆಯುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇಲ್ಲಿ ಇದಕ್ಕಾಗಿಯೇ ಮಲೆನಾಡು ಅಭಿವೃದ್ಧಿ ಬರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಅಭಿವೃದ್ಧಿ ಏತಕ್ಕೆ ಬರುತ್ತದೆಂದರೆ, ನಾವು ಮುಳುಗಿಸಿಕೊಂಡು ನೀರನ್ನು ನಿಮಗೆ ಕೊಡುತ್ತೇವೆ. ನಮ್ಮ ಕರ್ಮ ಏನಾಗಿದೆಯೆಂದರೆ, ನದಿ ಇವರಿಗೆ ವರವಾಗಿ ನಮಗೆ ಶಾಪವಾಗಿದೆ. ತುಂಗಾ, ಭದ್ರಾ, ವಾರಾಹಿ ಮುಂತಾದ ಎಲ್ಲಾ ಪ್ರಾಜೆಕ್ಟ್‌ಗಳಡಿಯಲ್ಲಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗಿನ ಕೆಲವು ಭಾಗಗಳು ಎಲ್ಲಾ ಮುಳುಗಿ ಹೋಗಿವೆ ನಮಗೆ ನೀರೂ ಇಲ್ಲ, ನಮ್ಮ ಬೇರು ಕಿತ್ತುಹೋಗಿದೆ. ಅಲ್ಲದೆ, ನಮಗೆ ಸರಿಯಾಗಿ ಪುನರ್ವಸತಿ ಆಗುತ್ತಿಲ್ಲ, ಅದು ಬೇರೆ ಮಾತು.

ಶ್ರೀ ಸಿ.ಬೈರೇಗೌಡ : ಈಗ ನಿಮ್ಮ ಜಿಲ್ಲೆಗಳೆಲ್ಲಾ ಮುಳುಗಿಹೋಗಿದೆಯೆಂದು ಹೇಳಿದ್ದೀರಿ. ಈಗ ನಿಮ್ಮ ಜಿಲ್ಲೆಯಲ್ಲಿ ಏನೇನು ಕಟ್ಟಿಸ್ತೀರೋ? ಏನೇನು ಮುಳುಗಿಸುತ್ತೀರೋ ಮುಳುಗಿಸಿ. ನಾವು ನಿಮ್ಮನ್ನು ಬೇಡವೆಂದು ಹೇಳುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಮುಳುಗಿ ನಿಮಗೇನಾದರೂ ಸಹಾಯ ಮಾಡೋಣ ಅಂತ. ನೀರಿನಿಂದ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತದೆ, ದೀಪದ ಕೆಳಗೆ ನೆರಳು. ವಿದ್ಯುಚ್ಛಕ್ತಿಯೂ ನಮಗೆ ಕೊಡುವುದಿಲ್ಲ. ವಾರಾಹಿ ಜಲಾನಯನದ ಮುಳುಗಡೆ ಪ್ರದೇಶದ ಜನರೆಂದು ಹೇಳಿ ಸರ್ಕಾರ ಅಲ್ಲಿ ಬ್ಯಾನ್ ಮಾಡಿತು. ನನ್ನ ಕ್ಷೇತ್ರದ ಒಂದು ಭಾಗಕ್ಕೆ ವಿದ್ಯುಚ್ಛಕ್ತಿ ಯೋಗ್ಯವಾಗುವುದಿಲ್ಲವೆಂದು ಒಡೆದು ಹಾಕಿಬಿಟ್ಟರು. ಅದುದರಿಂದ ನೀರು ಕೊಡಿ. ಇಲ್ಲಿ ಮಲೆನಾಡು ಅಭಿವೃದ್ಧಿ ಮಾಡಿದರೆ ನನ್ನ ತಾಲ್ಲೂಕು ಅಭಿವೃದ್ಧಿ ಮಾಡಿ ಅಂತ ಹೇಳುತ್ತೀರಿ (ವಾಟಾಳ್ ನಾಗರಾಜ್‌ರವರನ್ನು ಉದ್ದೇಶಿಸಿ. ಏಕೆಂದರೆ ನೀವು ಗಡಿ ಸಮಸ್ಯೆ ಬಂದರೂ ನನ್ನ ತಾಲ್ಲೂಕು ಇರಲಿ ಎನ್ನುವುದು, ಮಲೆನಾಡು ಬಂದರೂ ನನ್ನ ತಾಲ್ಲೂಕು ಇರಲಿ ಎನ್ನುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ತಾಲ್ಲೂಕನ್ನು ಸೇರಿಸಿಕೊಳ್ಳಿ ಎಂದು ನಾವು ಮನವಿ ಮಾಡಿಕೊಳ್ಳುತ್ತಿದ್ದೇವೆ. ನಮ್ಮ ನಾಯಕರೇ ಹೀಗಾದರೆ ಏನು ? ಇದರಿಂದ ನಮಗೆ ದೂರ ಕಳಿಸುತ್ತೇವೆಂದು ಹೇಳಿದರೆ ಹೇಗೆ? ಇಷ್ಟೊಂದು ಧಾರಾಳವಾಗಿರತಕ್ಕಂಥವರು ನಮ್ಮದೆಲ್ಲಾ ಮುಳುಗಡೆಯಾಗುತ್ತದೆ, ನಾವೆಲ್ಲಾ ತೊಂದರೆಯಲ್ಲಿ ಸಿಕ್ಕಿದ್ದೇವೆಂದು ಹೇಳುವವರು, ತಮಗೆ ಹೇಳುವುದಾದರೆ ಪಕ್ಕದ ಗುಂಡ್ಲುಪೇಟೆ ಮಲೆನಾಡು ಏರಿಯಾಕ್ಕೆ ಸೇರುತ್ತಿದೆ. ನನ್ನ ಕ್ಷೇತ್ರವನ್ನು ಕೂಡ ಮಲೆನಾಡು ಅಭಿವೃದ್ಧಿ ಮಂಡಳಿಗೆ ಸೇರಿಸಬೇಕೆಂದು ಈಗಾಗಲೇ ಸರ್ಕಾರಕ್ಕೆ ಸಂಪೂರ್ಣವಾದಂಥ ವರದಿ ಬಂದಿದೆ. ಅದುದರಿಂದ, ಮಾನ್ಯ ಗೌಡರ ಸಹಕಾರಕ್ಕೆ ನಾವು ನಿಲ್ಲುತ್ತೇವೆ. ಹೆಗಲಿಗೆ ಹೆಗಲು ಕೊಡುತ್ತೇವೆ, ಭುಜಕ್ಕೆ ಭುಜ ಕೊಡುತ್ತೇವೆ. ನೀವೇಕೆ ಹೀಗೆ ಆಡುತ್ತಿದ್ದೀರಿ ?

ಶ್ರೀ ಸಿ. ಬೈರೇಗೌಡ : ಚಾಮರಾಜನಗರವನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ ಸೇರಿಸುವುದರ ಜೊತೆಗೆ ಅದನ್ನು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಕೂಡ ಸೇರಿಸಬೇಕು.

ಡಾ। ಎಸ್.ಬಿ. ನಂಜಪ್ಪ : ಮಲೆನಾಡು ಅಭಿವೃದ್ಧಿ ಮಂಡಳಿಗೆ ಚಾಮರಾಜನಗರವನ್ನು ಸೇರಿಸುವುದರ ಜೊತೆಗೆ ರಾಯಲುಸೀಮೆಗೂ ಸೇರಿಸಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಕೃಷ್ಣಾ ಜಲಾನಯನ ಪ್ರದೇಶದ ನೀರಿನ ಬಳಕೆ ಆಗದೆ ಇರುವುದಕ್ಕೆ ಬಹಳ ಮುಖ್ಯವಾದಂಥ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ. ನಾನು ಅನಗತ್ಯವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಅಥವಾ ಕಾರಂಜೆ ಇರಬಹುದು ಮತ್ತೊಂದು ಇರಬಹುದು ಆ ಪ್ರದೇಶದಲ್ಲಿ ಬರತಕ್ಕ ಬಹುತೇಕ ಯೋಜನೆಗಳು ನಿಲ್ಲಲು ಬಹಳ ಮುಖ್ಯವಾದ ಕಾರಣವೆಂದರೆ ಗುತ್ತಿಗೆದಾರರು ಎನ್ನತಕ್ಕದನ್ನು ತಮ್ಮ ಗಮನದಲ್ಲಿಡಬೇಕು. ಅಲ್ಲಿ ಕೆಲಸವನ್ನು ಮಾಡತಕ್ಕ ಗುತ್ತಿಗೆದಾರರು ಭೂಮಾಲೀಕರನ್ನು ಎತ್ತಿಕಟ್ಟಿ ಭೂಮಿಗೆ ಪರಿಹಾರವನ್ನು ಕೊಡತಕ್ಕದನ್ನು ಕೋರ್ಟಿಗೆ ತಂದುಹಾಕಿ 10 ರೂ. ನಲ್ಲಿ ಆಗತಕ್ಕ ಕೆಲಸಕ್ಕೆ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಸುತ್ತಿದ್ದಾರೆ. ಇದು ಏಕೆ ನಡೆಯುತ್ತಿದೆ ಎಂದರೆ, ಒಂದುಸಾರಿ ಅವನು ಗುತ್ತಿಗೆಗೆ ಅರ್ಜಿಯನ್ನು ಹಾಕುತ್ತಾನೆ. ಯಾವುದೋ ಒಂದು ಭಾಗದ 10–15–20 ಕೋಟಿಯ ಗುತ್ತಿಗೆಗೆ ಅರ್ಜಿಯನ್ನು ಹಾಕುತ್ತಾನೆ. ಅಲ್ಲಿಯ ಭೂಪ್ರದೇಶದವರು ಅದನ್ನು ಅಡ್ಡಿಪಡಿಸಿದರು ಎಂದು ಹೇಳಿ ವ್ಯಾಜ್ಯವನ್ನು ತೆಗೆದುಕೊಂಡು ಹೋಗಿ

ಕೋರ್ಟಿಗೆ ಇಡುತ್ತಾನೆ. ರೈತರಿಗೆ ಹೇಳಿಕೊಟ್ಟು ಹೈಕೋರ್ಟಿಗೆ ಅರ್ಜಿಯನ್ನು ಹಾಕಿಸುತ್ತಾನೆ. ಇಲ್ಲಿ ಅದಕ್ಕೆ ನಮ್ಮ ಕೋರ್ಟಿನವರು ತಡೆಯಾಜ್ಞೆಯನ್ನು ಕೊಡುತ್ತಾರೆ. ಅದನ್ನು ಕೊಡಬೇಕಾಗುತ್ತದೆ. ಇಂಥ ಎಷ್ಟು ಕೇಸ್‌ಗಳಿವೆ? ತಡವಾಗಲು ಕಾರಣ ಏನು ಎನ್ನತಕ್ಕದ್ದು ಬೇಕು. ಇದರ ಪರಿಣಾಮ ಏನು ? ಕಾಸ್ಟ್ ಎಸ್‌ಕಲೇಷನ್ ಹೆಚ್ಚು ಆಗುತ್ತದೆ. 100 ರೂ.ನ ಪ್ರಾಜೆಕ್ಟ್‌ನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯವರು ಯಾವಾಗಲೂ 100 ರೂ.ಗೆ ಮುಗಿಸಿದ್ದೇ ಇಲ್ಲ. ಅದಕ್ಕಿಂತ ನೂರು ಪಟ್ಟು ಸಾವಿರಪಟ್ಟು ಜಾಸ್ತಿಯಾಗುತ್ತದೆ. ಒಂದು ಇರಿಗೇಷನ್ ಪ್ರಾಜೆಕ್ಟ್ ಇರಲಿ, ಪಿ.ಡಬ್ಲ್ಯೂ.ಡಿ. ಪ್ರಾಜೆಕ್ಟ್‌ನಲ್ಲಿ ಯಾವುದಾದರು ಇಲಾಖೆಯವರು ನಿಗದಿತ ಕಾಲಕ್ಕೆ ನಿಗದಿತ ಹಣದಲ್ಲಿ ಮುಗಿಸಿಕೊಟ್ಟಂಥ ಒಂದೇ ಒಂದು ಉದಾಹರಣೆಯನ್ನು ನೀವು ಕೊಟ್ಟರೆ ನಾನು ಯಾವ ಶಿಕ್ಷೆಯನ್ನು ಕೊಟ್ಟರೂ ಅನುಭವಿಸಲು ತಯಾರಾಗಿದ್ದೇನೆ. ಆದುದರಿಂದ ಈ ಅಂತರಂಗ ಇದೆಯಲ್ಲಾ, ಅದಕ್ಕಾಗಿ ನಾನು ನಿಮ್ಮ ಅನುಸೂಚಿ ಒಂದರಲ್ಲಿ ಪ್ರಾಧಿಕಾರ ಮತ್ತು ಗುತ್ತಿಗೆದಾರರು ಅಥವಾ ಮೂರನೆಯ ಪಕ್ಷಕಾರರ ನಡುವಣ ವಿವಾಧಗಳು ಎಂದು ಏನಿದ್ದಾವೆ, ಇದನ್ನು ಬಗೆಹರಿಸುವುದಕ್ಕೆ ಅದರೊಳಗೆ ಒಂದು ಟ್ರಿಬ್ಯೂನಲ್‌ನ್ನು ಮಾಡಿ, ಅದಕ್ಕೆ ಅಪೀಲು ಇಲ್ಲವೆನ್ನತಕ್ಕದನ್ನು ಹೇಳಿ whatever the settlement. ನಾವು ಲೋಕ ಅದಾಲತ್‌ನ ಮೂಲಕ ಏನು ತೀರ್ಪು ಮಾಡುತ್ತೇವೆ ಆ ರೀತಿ ಅಂತಿಮವಾಗಿ ತೀರ್ಪು ಇಂಥ ಗುತ್ತಿಗೆದಾರರು ಯಾರು, ಈ ಒಂದು ವ್ಯವಹಾರದಲ್ಲಿ ಧರವನ್ನು ನಿಗದಿ ಮಾಡುವುದರಲ್ಲಿ ಇರಬಹುದು ಮತ್ತೊಂದು ಇರಬಹುದು ಈ ವ್ಯವಹಾರದಲ್ಲಿ ಯಾರು ಇದ್ದಾರೆ ಇಂಥವರನ್ನು ಗುರುತಿಸಿ ಹೊರಹಾಕಿ ನಿಮ್ಮ ಕಾಲದಲ್ಲಾದರೂ ಕೂಡ ಎರಡು ಸಾವಿರದ ಇಸವಿಯೊಳಗೆ ಅದನ್ನು ಮುಗಿಸಬೇಕೆಂದು ಏನು ಸದಿಚ್ಛೆಯನ್ನು ಇಟ್ಟುಕೊಂಡಿದ್ದೀರಲ್ಲ ಅದನ್ನು 1995ನೇ ಇಸವಿಯಲ್ಲಿ ಮುಗಿಸಿದರೆ ಏನು ಅಪರಾಧವಿಲ್ಲ. ಇದಕ್ಕೆ ವಿಶ್ವಬ್ಯಾಂಕಿನಿಂದ ಹಣ ಬರುತ್ತದೆ, ಎಷ್ಟೇ ದೊಡ್ಡ ಪ್ರಮಾಣದಲ್ಲಿ ಬೇಕಾದರೂ ಹಣ ಬರುತ್ತದೆ ಮತ್ತೊಂದು ತಾಂತ್ರಿಕವಾದ ತೊಂದರೆ. ಇಂಜಿನಿಯರ್‌ಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಾಕಿದರೆ ಯಾರೂ ಕೂಡ ಹೋಗುವುದಿಲ್ಲ. ಚಂದ್ರೇಗೌಡರಿಂದ ವಾಟಾಳ್ ನಾಗರಾಜ್‌ರವರಿಂದ, ಭೈರೇಗೌಡರಿಂದ ಕಾಗದವನ್ನು ಬರೆಸುತ್ತಾರೆ ಆದ್ದರಿಂದ ನಾನು ಹೇಳುತ್ತೇನೆ. Please appoint the Engineers specially for this project. ನಿಮಗೆ ಸಂಬಳವನ್ನು ಕೊಡತಕ್ಕದ್ದು, ನಿಮಗೆ ಕೆಲಸ ಕೊಡತಕ್ಕದ್ದು ಕೃಷ್ಣಾ ಮೇಲ್ದಂಡೆ ಯೋಜನೆಗೆ ಸೀಮಿತವಾಗಿ ಎಂದು ಹೇಳಿ ನೇಮಕ ಮಾಡಿ ನೀವು ಅಲ್ಲಿ ಇರುವುದಿಲ್ಲವೆಂದರೆ ನಿಮ್ಮನ್ನು ಕೆಲಸದಿಂದ ವಜಾ ಮಾಡುತ್ತೇವೆ ಎನ್ನುವ ತೀರ್ಮಾನವನ್ನು ತೆಗೆದುಕೊಂಡರೆ ಇದು ಎರಡು ಮುಖ್ಯವಾದ ಕೆಲಸ ಮಾಡಬೇಕು. ರೈತರು ಎಂದೂ ಕೋರ್ಟಿಗೆ ಬರುವುದಕ್ಕೆ ಹೋಗುವುದಿಲ್ಲ. ಆದುದರಿಂದ ಈ ಎರಡೂ ಕೆಲಸವನ್ನು ನಿಖರವಾಗಿ ಮಾಡಿ. ಇತರ ಪೂರ್ಣ ಜವಾಬ್ದಾರಿಯನ್ನು ಪ್ರಾಧಿಕಾರಕ್ಕೆ ಕೊಡಿ. ಅಗತ್ಯ ಕಂಡರೆ ಪ್ರಾಧಿಕಾರವೆ ಈ ಇಂಜಿನಿಯರುಗಳನ್ನು ನೇಮಕ ಮಾಡತಕ್ಕ ಅಧಿಕಾರವನ್ನು ಕೊಡಿ. ನಿಮ್ಮ duel ಸಂಬಂಧವಿದೆಯಲ್ಲ ನೀರಾವರಿ ಮಂತ್ರಿಗಳು ವರ್ಗಾವಣೆ ಮಾಡತಕ್ಕದ್ದು ಆ ಕೆಲಸ ಬೇಡ. ಅಲ್ಲಿನ ಪ್ರಾಜೆಕ್ಟ್‌ನೊಳಗೆ ವರ್ಗಾವಣೆ ಮಾಡಿಕೊಳ್ಳಲಿ. ಆದುದರಿಂದ ಈ ಕೆಲಸ ಮುಗಿಯುವವರೆಗೆ ಅಲ್ಲಿಂದ ಇಂಜಿನಿಯರ್‌ಗಳನ್ನು ಈಚೆಗೆ ತರುವುದಿಲ್ಲ ಎನ್ನತಕ್ಕದನ್ನು ನಿಖರವಾಗಿ ಈ ಸಭೆಗೆ ಮಾಹಿತಿಯನ್ನು ಕೊಡಬೇಕು. ನಿಮ್ಮ ಕೆಲಸದಲ್ಲಿ ಶ್ರೇಯಸ್ಸು ಸಿಗಲಿ, ನಿಮ್ಮ ಇಚ್ಛೆ ಫಲಿಸಲಿ, ನಮ್ಮೆಲ್ಲರಿಗೂ ಕೂಡ ಸಂತೋಷವಾಗತಕ್ಕ ಕೆಲಸವನ್ನು ನಿಮ್ಮ ಅವಧಿಯಲ್ಲಿ ಮಾಡಿ ಮುಗಿಸಲಿ; ಈ ಪ್ರಾಧಿಕಾರ ನಿಮಗೂ ಈ ರಾಜ್ಯಕ್ಕೂ ಕೀರ್ತಿ ತರಲಿ ಮತ್ತು ಎರಡು ಸಾವಿರದ ಇಸವಿಯೊಳಗೆ ನಮಗೆ ಬಂದಿರತಕ್ಕ ಪಾಲಿನ ನೀರಾದ 905 ಟಿಎಂಸಿ ನೀರನ್ನು ಬಳಕೆ ಮಾಡತಕ್ಕಂಥ ಸಾಮರ್ಥ್ಯ ಈ ಒಂದು ಪ್ರಾಧಿಕಾರಕ್ಕೆ ಬರಲಿ ಎಂದು ಆಶಿಸಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಡಾ। ಎ.ಬಿ. ಮಾಲಕರೆಡ್ಡಿ (ಯಾದಗೀರ್) : ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಭಾರೀ ನೀರಾವರಿ ಸಚಿವರು ಈ ಸದನದ ಮುಂದೆ ಮಂಡಿಸಿದ ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಿಧೇಯಕವನ್ನು ನಾನು ಸ್ವಾಗತಿಸುತ್ತಾ, ಈ ವಿಧೇಯಕದಲ್ಲಿ ಇರತಕ್ಕಂತಹ ಕೆಲವು ಉತ್ತಮ ಗುಣಾಂಶಗಳನ್ನು ಮತ್ತು ಲೋಪದೋಷಗನ್ನು ಸ್ವಲ್ಪ ಬೆಳಕಿಗೆ ತರಲು ನಾನು ಇಚ್ಛೆಸುತ್ತೇನೆ.

ಈ ವಿಧೇಯಕದ ಹಿಂದೆ ಇರತಕ್ಕಂತಹ ಒಂದು ಆತುರತೆ ಅಥವಾ ನಮ್ಮ ಪಾಲಿನ ನೀರನ್ನು ತಕ್ಷಣ ತೀವ್ರವಾಗಿ, ತೀವ್ರಗತಿಯಲ್ಲಿ ಬಳಸಬೇಕೆಂಬ ಏನು ಒಂದು ತವಕ ಸರ್ಕಾರಕ್ಕೆ ಯಾವ ಒಂದು ಮನೋ ನಿರ್ಧಾರವಿದೆ ಅದನ್ನು ಮೆಚ್ಚಬೇಕು. ಇದು ಸಕಾಲಿಕ ಮತ್ತು ಸಮಂಜಸ. ಈಗಾಗಲೇ ನಾವು 1976ನೇ ಇಸವಿಯಲ್ಲಿ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಪಾಲಿಗೆ ಬಂದ ನೀರನ್ನು ಉಪಯೋಗ ಮಾಡಲು ನಾವು ಕಳೆದ 16 ವರ್ಷದಲ್ಲಿ ಎಷ್ಟು ಪ್ರಮಾಣದಲ್ಲಿ ಉಪಯೋಗ ಮಾಡಬೇಕಿತ್ತೋ ಆ ಪ್ರಮಾಣದಲ್ಲಿ ಉಪಯೋಗ ಮಾಡಲಿಲ್ಲ. ನಾವು ಕರ್ತವ್ಯ ಚ್ಯುತಿಯನ್ನು ಮಾಡಿದ್ದೇವೆ. ಇನ್ನು ಉಳಿದ 8 ವರ್ಷದಲ್ಲಿ ನಾವು ಶೀಘ್ರ ಗತಿಯಲ್ಲಿ ಮುಗಿಸಬೇಕಾದರೆ ಈ ಕಾರ್ಯಕ್ರಮವನ್ನು ಪೂರೈಸಬೇಕಾದರೆ ಇಂತಹ ಒಂದು ವಿಧೇಯಕದಿಂದ ಸಾಧ್ಯ. ಆದರೆ, ಇದನ್ನು ಅವಲೋಕಿಸಿದಾಗ ನನಗೆ ಪುನಃ ಅನೇಕ ಸಮಸ್ಯೆಗಳು ಮೂಡುತ್ತವೆ. ಅದನ್ನು ಕ್ರಮೇಣ ನಾನು ಹೇಳುತ್ತಾ ಬರುತ್ತೇನೆ. ಏಕೆಂದರೆ ಕೃಷ್ಣಾ ಜಲಾನಯನ ಪ್ರದೇಶದಿಂದ ಬಂದವನಾದ್ದರಿಂದ ಅಥವಾ ನನ್ನ ಮತ ಕ್ಷೇತ್ರದಲ್ಲಿ ಇರತಕ್ಕಂತಹ 60 ಹಳ್ಳಿಗಳು ಈ ವ್ಯಾಪ್ತಿಯಲ್ಲಿ ಬರುವುದರಿಂದ ನಾನು ಇದನ್ನು ಸ್ವಲ್ಪ ಸೂಕ್ಷ್ಮ ದೃಷ್ಟಿಯಿಂದ ನೋಡಿರುವುದರಿಂದ ಅನೇಕ ಸಮಸ್ಯೆಗಳು ಇದರಿಂದ ಪುನ: ಇದರಲ್ಲಿ ಉದ್ಭವವಾಗುತ್ತದೆ. ಕಾರಣ ಇಷ್ಟೇ, ಮೊದಲನೆಯದಾಗಿ ಸೆಕ್ಷನ್ (5) ಪ್ರಕಾರ ಒಂದು ಅಥಾರಿಟಿ ತಾವು ಮಾಡಿದ್ದೀರಿ. ಇದರಲ್ಲಿ 13 ಜನರ ಸದಸ್ಯತ್ವವುಳ್ಳ ಇದೊಂದು ಪ್ರಾಧಿಕಾರ, ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುವುದು ಸೂಕ್ತ. ಮತ್ತು ನೀರಾವರಿ ಮಂತ್ರಿಗಳು ಉಪಾಧ್ಯಕ್ಷರಾಗಿದ್ದಾರೆ, ಮತ್ತು ಇತರ ಉಳಿದ ಸದಸ್ಯರ ಪಟ್ಟಿ ಏನು ಇದೆ ಅದರಲ್ಲಿ ಸರ್ಕಾರದ ಮಂತ್ರಿಗಳಿದ್ದಾರೆ ಮತ್ತು ಉಳಿದ ಎಲ್ಲಾ ಅಧಿಕಾರಿಗಳಿದ್ದಾರೆ. ಫೈನಾನ್ಸ್ ಸೆಕ್ರೆಟರಿ ಇದ್ದಾರೆ, ಅಗ್ರಿಕಲ್ಚರ್ ಸೆಕ್ರೆಟರಿ ಇದ್ದಾರೆ, ಎನರ್ಜಿ ಸೆಕ್ರೆಟರಿ ಈ ತರಹ ಎಲ್ಲಾ ಸೆಕ್ರೆಟರಿಗಳಿದ್ದಾರೆ. ಮತ್ತು ಇದುವರೆಗೆ ನಮ್ಮ ಅನುಭವದಿಂದ ಆದದ್ದು ಎಂದರೆ ಈ ಕಾರ್ಯಕ್ರಮವನ್ನು ಪೂರೈಸದೇ ಇರತಕ್ಕಂತಹ ಅಧಿಕಾರಿಗಳು ಯಾರು ಇದ್ದಾರೆ ಅದೇ ಅಧಿಕಾರಿಗಳು ಮತ್ತೆ ಇದರಲ್ಲಿ ಬಂದಿದ್ದಾರೆ. ಹೀಗಿರುವಾಗ ಈ ಒಂದು ಪ್ರಾಧಿಕಾರದಿಂದ ಶೀಘ್ರಗತಿಯಲ್ಲಿ ನಾವು ಕೆಲಸವನ್ನು ನಿರೀಕ್ಷೆ ಮಾಡಬಹುದೇ? ನನಗೆ ಗೊತ್ತಿರುವ ಹಾಗೆ ಇದು ತಂತ್ರಜ್ಞರು, ಇದ್ದಾರೆ, ಇರಿಗೇಷನ್ ಸೆಕ್ರೆಟರಿ ಮುಖ್ಯ ಕಂಟ್ರಾಕ್ಟ್‌ದಾರರು, ಇದರಲ್ಲಿ ಒಬ್ಬರೂ ಕೂಡ ತಂತ್ರಜ್ಞರು ಇಲ್ಲ. 13 ಮಂದಿ ಸದಸ್ಯತ್ವವುಳ್ಳ ಈ ಪ್ರಾಧಿಕಾರದಲ್ಲಿ ಒಬ್ಬರೂ ತಂತ್ರಜ್ಞರು ಇಲ್ಲ. ಇಂದೊಂದು ಬಹಳ ಗುರುತರವಾದ ದೋಷದ ಮಹತ್ವವಿದೆಯೆಂದು ನಾನು ತಮಗೆ ತಿಳಿಯಬಯಸುತ್ತೇನೆ. ಅದಕ್ಕಾಗಿ ಇದರಲ್ಲಿ ಸ್ವಲ್ಪ ಮಾರ್ಪಾಡು ಮಾಡುವುದು ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಆ ಮಾರ್ಪಾಡು ಯಾವ ರೀತಿ ಇರಬೇಕೆಂದರೆ ಈ ಅಧಿಕಾರಿಗಳ ಜೊತೆ ಅಧಿಕಾರೇತರ ವರ್ಗವನ್ನು ಇದರಲ್ಲಿ ನಾಮಕರಣ ಮಾಡುವುದಕ್ಕೆ ತಾವು ಅಧಿಕಾರವನ್ನು ಹೊಂದಬೇಕು. ಅದರ ಪ್ರಕಾರ ಸೂಕ್ತವಾಗಿ ಮಾರ್ಪಾಡನ್ನು ಈ ತಿದ್ದುಪಡಿಯನ್ನು ತಾವು ತರಬೇಕು., ಸೆಕ್ಷನ್ (5)ರಲ್ಲಿ ಒಂದು 5 ಜನ ಅದು ಜನ ಆ ಭಾಗದ ಶಾಸಕರಾಗಲಿ ಅಥವಾ ಜನರ ಪ್ರತಿನಿಧಿಗಳಾಗಲೀ ಅಥವಾ ತಂತ್ರಜ್ಞರಾಗಗಲಿ ಎಷ್ಟು ಜನ ರಿಟೈರ್ಡ್ ಇಂಜಿನಿಯರ್‌ಗಳಿದ್ದಾರೆ ಅವರನ್ನು ತೆಗೆದುಕೊಳ್ಳಿ. ಈಗ ಬಾಳಕುಂದ್ರೆಯವರು ಕೃಷ್ಣಾ ಜಲಾನಯದ ವಿಷಯದಲ್ಲಿ ಸಾಕಷ್ಟು ಅವರು ಜಿಜ್ಞಾಸೆಯನ್ನು ಮಾಡಿದ್ದಾರೆ. ಅಂತಹವರನ್ನು ನಾಮಕರಣ ಮಾಡುವುದಕ್ಕೆ ಇವರಿಗೆ ಸ್ಕೋಪ್ ಇಲ್ಲ, ಅಂತಹವರ ಸೇವೆಯನ್ನು ತಾವು ತೆಗೆದುಕೊಳ್ಳಬಹುದು. ದಯವಿಟ್ಟು ಈಗ ತಿದ್ದುಪಡಿಯಲ್ಲಿ ಸುಮಾರು 5–6 ಜನ ಅಧಿಕಾರೇತರ ವರ್ಗದವರನ್ನು ನಾಮಕರಣ ಮಾಡುವುದಕ್ಕೆ ಇದರಲ್ಲಿ ಆಸ್ಪದ ಮಾಡಿಕೊಡಬೇಕು, ಇದು ಮೊದಲನೆಯದು.

ಎರಡನೆಯದಾಗಿ ವಿಸ್ತಾರವಾದ ವ್ಯಾಪ್ತಿಯುಳ್ಳ ಪ್ರಾಧಿಕಾರವನ್ನು ತಾವು ತಂದಿರತಕ್ಕ ಅರ್ಥ ನಮಗಾಗುತ್ತದೆ. ಕಾರಣವಾದರೂ ಇಷ್ಟೇ. ಯಾವುದೇ ಒಂದು ಇಂಥ ಬೃಹತ್ ಯೋಜನೆಯನ್ನು ಜಾರಿಗೆತರುವಾಗ ಸರ್ಕಾರದ ಮಟ್ಟದಲ್ಲಿ ಕೇವಲ ಒಂದು ಇಲಾಖೆಯಿಂದಲ್ಲ ಅನೇಕ ಇಲಾಖೆಗಳಿಂದ ಮಾಹಿತಿಗಳು ಬೇಕಾಗುತ್ತದೆ. 50 ಲಕ್ಷಕ್ಕಿಂತ ಮೇಲ್ಪಟ್ಟು ಯಾವುದೇ ಯೋಜನೆಯಾದರೂ ಅದು ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಹೋಗಬೇಕು. ಸಂಬಂಧಪಟ್ಟ ಇಲಾಖೆಗೆ ಅಥವಾ ನೀರಾವರಿ

ಇಲಾಖೆಗೆ ಅಥವಾ ಲೋಕೋಪಯೋಗಿ ಇಲಾಖೆಗೆ ಹೋಗಲೇಬೇಕು. ಅನಂತರ ಫೈನಾನ್ಸ್ ಕಾರ್ಯದರ್ಶಿಯವರಿಗೆ ಹೋಗಬೇಕು. ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕು. ವಿನಾಕಾರಣ ತಡವಾಗಿ ತಕ್ಕ ಇಂಟರ್ ಡಿಪಾರ್ಟ್‌ಮೆಂಟಲ್ ಫಂಕ್ಷನ್ ನೋಟೀಸ್ ಪ್ರೊಸೀಜರಲ್ ಸ್ಟೆಪ್ಸ್ ಎನಿರುತ್ತದೆ ಅದನ್ನು ಅಬ್ರಿಯೇಟ್ ಮಾಡಿ ನೀವು ಈ ಒಂದು ಪ್ರಾಧಿಕಾರವನ್ನು ರಚನೆ ಮಾಡಿದ್ದೀರಿ, ಇದು ಸ್ವಾಗತಾರ್ಹ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ. ಈಗ ಸೆಕ್ಷನ್ 25 ರಿಂದ 30 ರವರೆಗೆ ಲ್ಯಾಂಡ್ ಅಕ್ವಿಸಿಶನ್ ಬಗ್ಗೆ ತಾವು ಕೆಲವು ಸೆಕ್ಷನ್‌ಗಳನ್ನು ಇಲ್ಲಿ ತಂದಿದ್ದೀರಿ. ಈ ಲ್ಯಾಂಡ್ ಅಕ್ವಿಸಿಷನ್ ಆ್ಯಕ್ಟ್ ಏನಿದೆ ಇದು ಸೆಂಟ್ರಲ್ ಆ್ಯಕ್ಟ್ ಇದರ ಪ್ರಕಾರ ಪ್ರೊಸೀಜರ್‌ನ್ನು ನಾವು ಫಾಲೋ ಮಾಡುತ್ತಿದ್ದೇವೆ. ರೂಲ್ 41, ರೂಲ್ 61, ಜಾಯಿಂಟ್ ಮೆಜರ್ಸ್, ಅನಂತರ ಅವಾರ್ಡ್. ಈ ಎಲ್ಲ ಪ್ರೊಸೀಜರನ್ನೂ ಪೂರೈಸಬೇಕಾದರೆ ಸುಮಾರು 2– $2\frac{1}{2}$ ವರ್ಷವಾಗುತ್ತಿತ್ತು. ಅದನ್ನು ಹೋಗಲಾಡಿಸಲು ತಾವು ಈ ಲ್ಯಾಂಡ್ ಅಕ್ವಿಸಿಜನ್ ಆ್ಯಕ್ಟನ್ನು ತಂದಿದ್ದೀರಿ. ಆದರೆ ಇದು ಸೆಂಟ್ರಲ್ ಆ್ಯಕ್ಟ್ ಆಗಿರುವುದರಿಂದ ತಾವು ಈ ಆ್ಯಕ್ಟನಲ್ಲಿ ಏನಾದರೂ ಡೀವಿಯೇಷನ್ ಮಾಡಿದರೆ, ರಿಲ್ಯಾಕ್ಸೇಷನ್ ಮಾಡಿದರೆ, ಸರಳೀಕರಣ ಅಥವಾ ಸಡಿಲವನ್ನು ಮಾಡಿದರೆ ತಾವು ಈಗ ಏನು ಈ ತಿದ್ದುಪಡಿಯನ್ನು ತಂದಿದ್ದೀರಿ ಇದು ಪುನ: ಕೇಂದ್ರ ಸರ್ಕಾರಕ್ಕೆ ಹೋಗಲೇಬೇಕಾಗುತ್ತದೆ. ಒಂದು ಸಾರಿ ಕೇಂದ್ರ ಸರ್ಕಾರಕ್ಕೆ ಈ ತಿದ್ದುಪಡಿ ಹೋಯಿತೆಂದರೆ ದೇವರೇಗತಿ. ಅದೇ ರೀತಿ ಸೆಕ್ಷನ್ 31 ರಿಂದ 36ರವರೆಗೆ ತಾವು ಸ್ಪೆಷಲ್ ಕೋರ್ಟ್‌ನ್ನು ಕ್ರಿಯೇಟ್ ಮಾಡಲಿಕ್ಕೆ ಕೆಲವು ಪ್ರೊವಿಷನ್‌ಗಳನ್ನು ಇದರಲ್ಲಿ ತಂದಿದ್ದೀರಿ. ಇದರ ಹಣೇಬರಹ ಕೂಡ ಹಾಗೆಯೇ. ತಾವು ಸ್ಪೆಷಲ್ ಕೋಷಲ್ ಕೋರ್ಟನ್ನು ಸೃಷ್ಟಿ ಮಾಡಿದ್ದೀರಿ. ಕಾರಣ ಇಷ್ಟೇ. ಯಾವುದೇ ತಂಟೆ, ತಕರಾರು, ಚರ್ಚೆ, ವ್ಯಾಜ್ಯ ಬಂದಾಗ ರೊಟೀನ್ ಆಗಿ ಸಿವಿಲ್ ಕೋರ್ಟಿನಿಂದ ಬಹಳಷ್ಟು ತಡವಾಗುತ್ತದೆ ಆದುದರಿಂದ ಸ್ಪೆಷಲ್ ಕೋರ್ಟ್ ಇದ್ದರೆ ತಕ್ಷಣ ಇತ್ಯರ್ಥ ಮಾಡಬಹುದೆಂಬ ಉದ್ದೇಶದಿಂದ ತಾವು ಇದನ್ನು ತಂದಿದ್ದೀರಿ. ಆದರೆ ಈ ಸ್ಪೆಷಲ್ ಕೋರ್ಟನ್ನು ರಾಜ್ಯಾಂಗದ ಯಾವ ನಿಯಮದ ಅಡಿಯಲ್ಲಿ ತಂದಿದ್ದೀರಿ? ಕೇಂದ್ರಸರ್ಕಾರದ ಯಾವ ಅಧಿನಿಯಮದ ಪ್ರಕಾರ ಇದನ್ನು ತಂದಿದ್ದೀರಿ? ಕೇಂದ್ರ ಸರ್ಕಾರ ಡಿಸ್ಟರ್ಬ್‌ಡ್ ಏರಿಯ ಆ್ಯಕ್ಟ್ ಪ್ರಕಾರ ತಂದಿದ್ದೀರಿ ಈ ಡಿಸ್ಟರ್ಬ್‌ಡ್ ಏರಿಯಾ ಆ್ಯಕ್ಟ್ ಯಾವಾಗ ಬಂತು ಎಂದರೆ ಕಾಶ್ಮೀರದಲ್ಲಿ, ಅಸ್ಸಾಂನಲ್ಲಿ, ಪಂಜಾಬ್‌ನಲ್ಲಿ ವರ್ಷಾನುಗಟ್ಟಲೆ ಗಲಭೆ, ಗೊಂದಲ, ಹಿಂಸಾಚಾರ ನೆಡೆದಿದ್ದರಿಂದ ಈ ಆ್ಯಕ್ಟ್ ಬಂತು. ಆದರೆ ತಾವು ಇದರ ಕೆಳಗೆ ಆಶ್ರಯ ಪಡೆದು ಈ ಒಂದು ಸ್ಪೆಷಲ್ ಕೋರ್ಟನ್ನು ನಿರ್ಮಾಣ ಮಾಡುತ್ತಿದ್ದೀರಿ. ನೀವು ಈಗ ಯಾವ ಆ್ಯಕ್ಟ್‌ನ ಅಧೀನದಲ್ಲಿ ಇದನ್ನು ತಂದಿದ್ದೀರಿ. ಅದು ಸೆಂಟ್ರಲ್ ಆ್ಯಕ್ಟ್ ಆಗಿರುವುದರಿಂದ ಮತ್ತೆ ಇದನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಲೇಬೇಕಾಗುತ್ತದೆ. ಲ್ಯಾಂಡ್ ಅಕ್ವಿಸಿಷನ್ ಆ್ಯಕ್ಟ್ ಮತ್ತು ಸ್ಪೆಷಲ್ ಕೋರ್ಟ್ ಬಗ್ಗೆ ತಾವು ಬದಲಾವಣೆ ತಂದಿರುವುದರಿಂದ ತಮ್ಮ ಉದ್ದೇಶ ನಿಜವಾಗಿ ಇರಬಹುದು, ಆದರೆ ಇದನ್ನು ಪುನ: ಕೇಂದ್ರ ಸರ್ಕಾರಕ್ಕೆ ಪುನ: ಕಳುಹಿಸಬೇಕಾಗಿರುವುದರಿಂದ ಏನಾಗುತ್ತದೆ ಅಂದರೆ ಈಗ ನಿಮ್ಮ ಕೈಯಲ್ಲಿರತಕ್ಕದ್ದು ಕೇವಲ 8 ವರ್ಷ ಮಾತ್ರ, ಆದರೆ ನನ್ನ ಅನುಮಾನದ ಪ್ರಕಾರ ಈ ತಿದ್ದುಪಡಿ ಸೆಂಟ್ರಲ್ ಗೌರ್ನಮೆಂಟಿಗೆ ಹೋದರೆ ಇನ್ನು 8 ವರ್ಷದವರೆಗೂ ನಿಮಗೆ ಕ್ಲಿಯರೆನ್ಸ್ ಬರುವುದಿಲ್ಲ. ಏಕೆಂದರೆ, ನಾನು ತಮಗೆ ಉದಾಹರಣೆಯನ್ನು ಕೊಡುತ್ತೇನೆ. 1987ರಲ್ಲಿ ರೀ ಹ್ಯಾಬಿಲಿಟೇಷನ್ ಅಂಡ್ ರೀ ಸೆಟಲ್‌ಮೆಂಟ್ ಆ್ಯಕ್ಟನ್ನು ಈ ಸದನದಲ್ಲಿ ಪಾಸ್ ಮಾಡಿದೆವು. ಅದರಲ್ಲಿ ಏನಿತ್ತು ಎಂದರೆ ಯಾವ ವ್ಯಕ್ತಿ ತನ್ನ ಜಮೀನನ್ನು ಕಳೆದುಕೊಳ್ಳುತ್ತಾನೋ ಅವನಿಗೆ ನೇರವಾಗಿ ಹಣವನ್ನು ಕೊಡುವುದಕ್ಕೆ ಬದಲಾಗಿ ಬೇರೆ ರೂಪದಲ್ಲಿ ಅಂದರೆ ಬೇರೆ ಕಡೆ ಜಮೀನನ್ನು ಕೊಡತಕ್ಕದ್ದು ಮನೆ ಕಟ್ಟಿಸಿಕೊಡತಕ್ಕದ್ದು ಅಥವಾ ಬೇರೆ ಉದ್ಯೋಗವನ್ನು ಒದಗಿಸುವುದು ಇಂಥ ರೂಪದಲ್ಲಿ ಅವನಿಗೆ ಸಹಾಯ ಮಾಡಬೇಕೇ ಹೊರತು ನೇರವಾಗಿ ಅವನ ಕೈಗೆ ಹಣವನ್ನು ಕೊಡಬಾರದು ಎಂಬ ಉದ್ದೇಶವಿತ್ತು. ನೀವು ಅವನಿಗೆ ಹಣವನ್ನು ಕೊಟ್ಟರೆ ಅವನು ದುರುಪಯೋಗ ಮಾಡಿಕೊಳ್ಳುತ್ತಾನೆಂಬ ಉದ್ದೇಶ ಇಟ್ಟುಕೊಂಡು ನೀವು ಈ ಆ್ಯಕ್ಟನ್ನು ಮಾಡಿದ್ದೀರಿ. ನಮ್ಮ ಸರ್ಕಾರ ಇದ್ದಾಗ ಇದನ್ನು ಮಾಡಿತ್ತು ಇದಕ್ಕೆ ವಿಶ್ವಬ್ಯಾಂಕ್ ಕೂಡ ಒಪ್ಪಿತ್ತು.

ಆದರ ಒಪ್ಪಿಗೆಯ ಪ್ರಕಾರ ನಾವು ಈ ಅಧಿನಿಯಮವನ್ನು ತಂದೀರಿ ಆದರೆ ಅದರ ಗತಿ ಏನಾಯಿತೆಂದರೆ, ಇವತ್ತಿನವರೆಗೂ ಅದು ಮಾನ್ಯ ರಾಷ್ಟ್ರಪತಿಗಳ ಅನುಮೋದನೆಯಾಗಿ ಬಂದಿಲ್ಲ. 1987 ರಲ್ಲಿ ಈ ಸದನದಲ್ಲಿ ಪಾಸ್ ಆಗಿ ರಾಷ್ಟ್ರಪತಿಗಳಿಗೆ ಹೋದಮೇಲೆ ಅಲ್ಲಿ ಅಧ್ಯಯನ ಮಾಡಿ ಇದರ ಬಗ್ಗೆ ರಿಮಾರ್ಕ್ಸ್ ಕಳುಹಿಸಲು 3 ವರ್ಷವನ್ನು ತೆಗೆದುಕೊಂಡರು. 1990 ರಲ್ಲಿ ಅವರು ತಮ್ಮ ರಿಮಾರ್ಕ್ಸ್ ಜೊತೆಗೆ, ಟಿಪ್ಪಣಿ ಜೊತೆಗೆ ಸರ್ಕಾರಕ್ಕೆ ವಾಪಸು ಕಳುಹಿಸಿಕೊಟ್ಟರು. ಆದರೆ, ನಮ್ಮ ಘನ ಸರ್ಕಾರದವರು ಏನು ಮಾಡಿದರು ಎಂಬುದನ್ನು ನಾವು ನೋಡಬೇಕು. ಅವರು ಯಾವ ಯಾವ ರಿಮಾರ್ಕ್ಸನ್ನು ಮಾಡಿದ್ದರೋ ಅದಕ್ಕೆ ಸ್ಪಷ್ಟೀಕರಣ ಕೊಟ್ಟು ತಕ್ಷಣ ವಾಪಸು ಕಳುಹಿಸಿಕೊಡಲಿಲ್ಲ ಬಹುಶಃ ಇವತ್ತಿನವರೆಗೂ ಆದನ್ನು ಕಳುಹಿಸಿಲ್ಲ ಎನಿಸುತ್ತಧೆ. ಇವತ್ತು ನಾವು 1992ನೇ ಇಸವಿಯಲ್ಲಿದ್ದೇವೆ ನಮ್ಮ ಸರ್ಕಾರ ಕೂಡ ಸ್ಪಷ್ಟೀಕರಣ ಕೊಟ್ಟು ಕಳುಹಿಸಲಿಲ್ಲ ಎಂದರೆ ಅದರ ಗತಿ ಎನಾಯಿತು? ನಿಮ್ಮ ಅಧಿನಿಯಮ ರಾಷ್ಟ್ರಪತಿಗಳಿಂದ ಮಂಜೂರಾಗಿ ಬರಲಿಲ್ಲ ಎಂದರೆ ಅದಕ್ಕೆ ಏನು ಹೇಳಬೇಕು.? ಯಾವುದು ಅಪಾಯಕರವಾದಂತ ಒಂದು ಅಧಿನಿಯಮ. ಪ್ರೆಸಿಡೆಂಟ್ ಆಫ್ ಇಂಡಿಯಾ ಕಡೆಯಿಂದ ಭಾರತದೇಶದ ರಾಷ್ಟ್ರಪತಿಯವರಿಂದ ಮಂಜೂರಾಗಿ ಬರಲಿಲ್ಲ, ಸಿಗ್ನೇಚರ್ ಪಡೆದು ಬರಲಿಲ್ಲವೆಂದ ಮೇಲೆ ಇನ್ನು ಇದು ಡಿಸ್ಟರ್ಬ್ಡ್ ಏರಿಯಾ ಆ್ಯಕ್ಟ್ ಒಳಗೆ ಬಂದು ಸ್ಪೆಷಲ್ ಕೋರ್ಟ್ ತಂದಿದ್ದೀರಿ. ಇದು ಬಹಳ ಮಹತ್ವವಾದದ್ದು ಇದೆ. ಈಗ ಸ್ಪೆಷಲ್ ಕೋರ್ಟ್ ಕ್ರಿಯೇಟ್ ಮಾಡುವ ಟೆಂಟೇಟೀವ್‌ಗೆ ಹೋಗುವುದು ಸೂಕ್ತವೋ ಅಲ್ಲವೋ ಎನ್ನುವ ಒಂದು ಸೂಚನೆಯನ್ನು ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಕಾರಣ ಇಷ್ಟೇ, ಸ್ಪೆಷಲ್ ಕೋರ್ಟ್ ಮಾಡುವುದರಿಂದ ಅದರ ಜ್ಯೂರಿಡಿಕ್ಷನ್ ಏನು ಅದನ್ನು ಶೆಡ್ಯೂಲ್ (1) ಶೆಡ್ಯೂಲ್ (2) ರಲ್ಲಿ ಕೊಟ್ಟಿದ್ದೀರಿ. ಅದೇನೆಂದರೆ Dispute between the authority and the contractory and the third party ಎಂದು ಕೊಟ್ಟಿದ್ದೀರಿ. ಆದರೆ ನಿಮ್ಮದು ಯೋಜನೆ ವಿಶ್ವಬ್ಯಾಂಕ್‌ನಿಂದ ಸಹಾಯ ಪಡೆದಂತ ಯೋಜನೆ ಇದು. ಅದರ ಸಲುವಾಗಿ ಬೇರೆ ಒಪ್ಪಂದ ಮಾಡಿಬಿಟ್ಟಿದ್ದೇವೆ. ಕಂಟ್ರಾಕ್ಟರ್ ಮತ್ತು ಸರ್ಕಾರಕ್ಕೆ ಏನಾದರೂ ವ್ಯತ್ಯಾಸ ಬಂದರೆ ಕೆಲವು ಆರ್ಬಿಟ್ರೇಷನ್ ಇರುತ್ತದೆ. ಆಮೇಲೆ ಕೋರ್ಟ್ ಇರುತ್ತದೆ. ಅವರ ಸಂಗಡ ಒಂದು ಒಪ್ಪಂದ ಬೇರೆ ಮಾಡಿಕೊಂಡಿದ್ದೇವೆ. ಆದರ ಬಗ್ಗೆ ಇಲ್ಲಿ ಸ್ಪಷ್ಟನೆ ಕೊಟ್ಟಿಲ್ಲ. ಇವೆಲ್ಲ ತೊಡಕು ಬರುತ್ತದೆ. ಮತ್ತು the very fact that you are creating it under the Distrubed Areas Act, is very dangerous. You please look into that. What I want to suggest in this regard is, ಈಗ ನಮ್ಮ ಲ್ಯಾಂಡ್ ಅಕ್‌ವಿಷನ್ ಆ್ಯಕ್ಟ್‌ನಲ್ಲಿ ಒಂದು ಪ್ರಾವಿಷನ್ ಇದೆ. ಏನೆಂದರೆ ಮ್ಯೂಚ್ಯುಯಲ್ ಅಗ್ರಿಮೆಂಟ್ ಮಾಡಿಕೊಳ್ಳಬಹುದು. ಇದುವರೆಗೂ ಸುಮಾರು ನನ್ನ ಮಾಹಿತಿ ಪ್ರಕಾರ 20 ಸಾವಿರ ಲ್ಯಾಂಡ್ ಅಕ್ವಿಡಿಷನ್ ಡಿಸ್‌ಪ್ಯೂಟ್ ಇದೆ. ಈ ಯೋಜನೆ ಪೂರ್ತಿಯಾಗಬೇಕಾದರೆ ದೊಡ್ಡ ಆತಂಕವಿದೆ ಎಂದರೆ ಈ ಲ್ಯಾಂಡ್ ಅಕ್ವಿಡಿಷನ್ ಪ್ರಾಬ್ಲಮ್. ಲ್ಯಾಂಡ್ ಅಕ್ವಿಡಿಷನ್ ಕೋರ್ಟಿಗೆ ಹೋಗುವುದು. ಸ್ಟೇ ತರುವುದು. ಮತ್ತೆ ಒಂದೆರಡು ವರ್ಷ ಮುಂದಕ್ಕೆ ಹಾಕುವುದು ಪ್ರೈಸ್ ಎಸ್ಕಲೇಷನ್, ಕಂಟ್ರಾಕ್ಟರ್ ಹಿಂದಿನದನ್ನು ಇಟ್ಟುಕೊಂಡು ಮಾಡಲಿಕ್ಕೆ ತಯಾರಿಲ್ಲ. ಪುನಃ ಕಂಟ್ರಾಕ್ಟರ್ ಹೇಳಿದ ರೇಟಿಗೆ ಕೊಡಲಿಲ್ಲವೆಂದರೆ ಅವನು ಒಬ್ಬ ಆರ್ಬಿಟ್ರೇಷನ್‌ಗೆ ಹಾಕುತ್ತಾನೆ. ಹೀಗಾಗಿ ಸುಮಾರು ನೂರಾರು ಕೋಟಿ ರೂಪಾಯಿ ಹಾಳಾಗಿ ಆ ಪ್ರಾಜೆಕ್ಟ್ ತಯಾರಾಗಲಿಲ್ಲ. ಅದಕ್ಕೆ ಏನು ಮಾಡಬೇಕು? ಬಿ.ಡಿ.ಎ. ದಲ್ಲಿನೇ ಮ್ಯೂಚಿಯಲ್ ಅಗ್ರಿಮೆಂಟ್ ಮಾಡಿಕೊಂಡಿರುತ್ತಾನೆ. ಔಟ್‌ರೇಟ್‌ಗೆ ಪರ್ಚೇಸ್ ಮಾಡಲಿಕ್ಕೆ, ಔಟ್‌ರೇಟಿಗೆ ಪರ್ಚೇಸ್ ನೀವು ಮಾಡಿದರೆ, ಏನು ತೊಂದರೆ ಬರುತ್ತದೆ.? ಇದು ನನಗೆ ಅರ್ಥವಾಗುತ್ತಿಲ್ಲ. ಅದು ಔಟ್‌ರೇಟ್ ಪರ್ಚೇಸ್ ಮಾಡತಕ್ಕಂಥ ಒಂದು ಪ್ರಾವಿಷನ್ ಕೂಡ ಇದರಲ್ಲಿ ಕೊಟ್ಟಿದ್ದೀರಿ., ಇದರಲ್ಲಿ ಇದೆ. ಅಷ್ಟಿದ್ದರೆ ಸಾಕು. ಇದಕ್ಕೆ ಸ್ಪೆಷಲ್‌ಕೋರ್ಟ್ ಏತಕ್ಕೆ ಮಾಡುತ್ತೀರೋ ನನಗೆ ಅರ್ಥವಾಗುತ್ತಿಲ್ಲ. ನನಗೆ ಅಂಜಿಕೆ ಏನಿದೆ ಎಂದರೆ ತೆಲುಗುಗಂಗಾ ಪ್ರಾಜೆಕ್ಟ್ ಬಂದಮೇಲೆ ಈ ಸದನ ಅವಲೋಕನ ಮಾಡತಕ್ಕಂಥ ಸೂಕ್ಷ್ಮವಾಗಿ ಪರಿಗಣನೆ ಮಾಡತಕ್ಕಂಥ ವಿಷಯ ಇದೆ. ತೆಲುಗುಗಂಗಾ ಪ್ರಾಜೆಕ್ಟ್ ಬಂದಮೇಲೆ ಇದು ಕೂಡ ಸೆಂಟ್ರಲಿ ಅಪ್ರೂವ್ಡ್‌ಸ್ಕೀಮ್ ಅಲ್ಲ. ಯಾವರೀತಿ

ನಾಗಾರ್ಜುನಸಾಗರ್ ಪ್ರಾಜೆಕ್ಟನ್ನು ಸೆಂಟ್ರಲ್ ಗೌವರ್ನಮೆಂಟ್ ಕ್ಲಿಯರೆನ್ಸ್ ಇಲ್ಲದೆ ಕಟ್ಟಿ ಸ್ಟೇಟ್ ಅಕೌಂಟ್‌ನಲ್ಲಿ ಮಾಡಿ ಆಮೇಲೆ ಆ ಆರ್ಬಿಟ್ರೇಷನ್‌ಗೆ ಹೋಯಿತು. ಇದು ಕೂಡ ತೆಲಗುಗಂಗಾ ಕೂಡ ಅವರಿಗೆ ಗೊತ್ತು. ಕರ್ನಾಟಕದವರು ನಾವು ಎಷ್ಟು ವೇಗವಾಗಿ ಹೋಗುತ್ತಿರೆಂಬುದು ಅವರಿಗೆ ಗೊತ್ತಾಗಿದೆ. ಅದಕ್ಕೆ ಈಗಾಗಲೇ ತೆಲಗು ಗಂಗಾ ಪ್ರಾಜೆಕ್ಟ್ ಕೆಲಸ ಬಹಳ ಭರ್ಜರಿಯಿಂದ ನಡೆಯುತ್ತಿದೆ ಯಾವ ಕಂಟ್ರಾಕ್ಟರ್ಸ್ ನಮ್ಮಲ್ಲಿ ಕೆಲಸ ತೆಗೆದುಕೊಂಡಿದ್ದಾರೆ ಅದೇ ಕಂಟ್ರಾಕ್ಟರ್ಸ್ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಎಲ್ಲ ತಮ್ಮ ಫ್ಯಾರಪರ್ನಿಯಾವನ್ನೂ ಅಲ್ಲಿಗೆ ಶಿಫ್ಟ್ ಮಾಡಿದ್ದಾರೆ. ಹಣ ನಮ್ಮದು, ಕೊಂಡುಕೊಂಡಿದ್ದು ನಮ್ಮ ಖರ್ಚಿನಿಂದ ಕೊಂಡುಕೊಂಡಿದ್ದ ಮೆಷಿನರಿಯನ್ನೆಲ್ಲ ಅಲ್ಲದೆ ಸಾಗಾಣಿಕೆ ಮಾಡಿದ್ದಾರೆ. ನಮಗೆ ಅಂಜಿಕೆ ಏನು ಎಂದರೆ ಈ ಸೆಂಟ್ರಲ್ ಗೌವರ್ನಮೆಂಟ್‌ನಲ್ಲಿ ಎಲ್ಲ ತೆಲಗು ಆಫೀಸರ್ಸ್ ಇದ್ದಾರೆ. ಇದು ಒಂದು ಪಾಯಿಂಟ್ ಸಿಕ್ಕಿದರೆ ಸಾಕು ಇದು ಡೈರೆಕ್ಟ್ ಆಗಿ ಪ್ರೆಸಿಡೆಂಟ್‌ಗೆ ಹೋಗುವುದು ಸಂಬಂದಪಟ್ಟ ಖಾತೆಗಳಿಗೆ ಹೋಗುತ್ತದೆ. ಅದಕ್ಕಾಗಿ ಟಿಪ್ಪಣಿಹಾಕಬೇಕಾದರೆ ಸುಮಾರು ಮೂರು ವರ್ಷವೇ ತೆಗೆದುಕೊಂಡಿದ್ದಾರೆ. ಇದಕ್ಕೆ ಮೂರುಮರ್ಷವೇ ಅಲ್ಲ, ಆರು ವರ್ಷತೆಗೆದುಕೊಳ್ಳುತ್ತಾರೆ ಟಿಪ್ಪಣಿಹಾಕಿ ಬರಬೇಕಾದರೆ. ಆದ್ದರಿಂದ ನಾವು ಯೋಚನೆ ಮಾಡಬೇಕಾಗಿದೆ. ಕೆಲವು ಜನರಿಗೆ ಕಿವಿಗೆ ಇಂಪಾಗಿ ಇಂಥದೊಂದು ಪ್ರಾಧಿಕಾರ ಮಾಡಿದ್ದೇವೆ ಏನೋ ಬೇಗ ಆಗುತ್ತದೆಂದು ತಿಳಿದುಕೊಂಡು ಮಾಡಿದ್ದ ಹೊರತಾಗಿ ಸಫಲ ಆಗುವುದಿಲ್ಲ. ಮುಂದೆ ಆಗತಕ್ಕಂಥ ಅಡಚಣೆಗಳು ಯಾವುದು ಬರಬಹುದೆನ್ನುವುದನ್ನು ಹಿಂದಿನ ಅನುಭವದಿಂದ ತಮ್ಮ ಗಮನಕ್ಕೆ ತಂದೆ. ಈಗ ಇದರಲ್ಲಿ ಸೆಕ್ಷನ್ 40–41 ನಾನು ಆಗಲೇ ಹೇಳಿದೆ. ಬಾಟಲ್‌ನೆಕ್ ಎನೆಂದರೆ ಅನೇಕ ಖಾತೆಗಳನ್ನು ಮಂಜೂರಿ ಪಡೆಯುವುದು. ಲ್ಯಾಂಡ್ ಅಕ್ವಷನ್ ಬಗ್ಗೆ ನಾನು ಹೇಳಿದೆ. ಮ್ಯೂಚುಯಲಿ ಅಗ್ರಿಮೆಂಟಿಗೆ ಸ್ಪೆಷಲ್ ಕೋರ್ಟ್ ಬೇಕಾಗುವುದಿಲ್ಲ. ನೀವು ಯಾವ ಆಫೀಸರ್ ಇರುತ್ತಾರೆ ಅವರಿಗೆ ಮ್ಯೂಚ್ಯುಯಲ್ ಅಗ್ರಿಮೆಂಟ್ ಮಾಡುವ ಪ್ರಾವಿಷನ್ ಕೊಟ್ಟಿರುವುದು ಸರಿ. ಆದರೆ ಮಾರ್ಕೆಟ್ ರೋಟಿನಂತೆ ಕೊಂಡುಕೊಳ್ಳುವಂತೆ ಮಾಡ್ರಿ. ಆ ಪದ ಇಲ್ಲ ಇದರಲ್ಲಿ ಮ್ಯೂಚ್ಯುಯಲ್ ಅಗ್ರಿಮೆಂಟ್‌ನೊಳಗೆ it should not exceed the market rate ಎಂದು ಬರೆದು ಮಾಡಬೇಕು. ಇಲ್ಲದಿದ್ದರೆ ಅರ್ಬಿಟ್ರೇಟರ್ ಮನಸ್ಸಿಗೆ ಬಂದಂತೆ ಏನುಬೇಕಾದರೂ ಮಾಡಬಹುದು.

ಮಾರ್ಕೆಟ್ ರೇಟ್ ಎಂದರೆ ಸಾಕು, ಏತಕ್ಕೆಂದರೆ ಇರಿಗೇಟರ್ ಖರಿಯಾದಲ್ಲಿ ಯಾವ ರೇಟ್ ಇರುತ್ತದೆ ಅದು ಗುರುತಿರುತ್ತದೆ. ಮಾರ್ಕೆಟ್‌ರೇಟ್ ಏನಿದೆ ಚಾಲ್ತಿ ರೇಟ್ ಆ ರೇಟಿನ ಪ್ರಕಾರ ಕೊಡಬೇಕೆಂದು ಅದು ಮ್ಯೂಚಿಯಲಿ ಅಗ್ರಿಮೆಂಟ್‌ನಲ್ಲಿ the amount paid to the landholder should not exceed the market rate. ಎಂದಿರಬೇಕು ಅದನ್ನು ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕು. ಸೆಕ್ಷನ್ 40–41 ಏನಿದೆ? ಡಿಸ್‌ಪ್ಯೂಟ್ ಬಗ್ಗೆ ಯಾರೂ ಕೋರ್ಟಿಗೆ ಹೋಗತಕ್ಕದ್ದಲ್ಲ ಅಥಾರಿಟಿ ಏನು ನಿರ್ಣಯ ತೆಗೆದುಕೊಳ್ಳುತ್ತಾರೆ ಅದು ಫೈನಲ್ ಎಂಬುದು ಒಂದು. Section 40 reads thus:

"No order passed or proceedings taken by an officer or Authority under this Act, shall be called in question in any court, in any suit or application and no injunction shall be granted by any court in respect of any action taken or about to be granted by any court in respect of any action taken or about to be taken by such officer or Authority in pursuanc¶ of any power conferred by or under this Act." ಸೆಕ್ಷನ್ 41ರಲ್ಲಿ ಸರ್ಕಾರಕ್ಕೆ ರೂಲ್ಸ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದೆ. ಇದರಲ್ಲಿ ಒಂದು ಅಂಶವನ್ನು ಸೇರಿಸಬೇಕು. ನಿಮ್ಮ ಪ್ರಾಧಿಕಾರದ ಅಡಿಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿ ಬಗ್ಗೆಯಾಗಲಿ, ಕಂಟ್ರಾಕ್ಟರ್ ಬಗ್ಗೆಯಾಗಲಿ ಡಿಸಿಪ್ಲಿನರಿ ಆ್ಯಕ್ಷನ್ ಏನು ತೆಗೆದುಕೊಳ್ಳುತ್ತೀರಿ, ಕರ್ತವ್ಯ ಚ್ಯುತಿ ಆದಾಗ ಅಥವಾ ಕಂಟ್ರಾಕ್ಟರ್ ಸಬ್‌ಸ್ಟ್ಯಾಂಡರ್ಡ್ ಕೆಲಸ ಮಾಡಿದಾಗ, ಏನು ಆ್ಯಕ್ಷನ್ ತೆಗೆದುಕೊಳ್ಳುತ್ತೀರಿ, ಅದನ್ನು

ಕ್ಲಿಯರ್ ಆಗಿ ಸೂಚಿಸಬೇಕು. ಇಲ್ಲದಿದ್ದರೆ ಡಿಸಿಪ್ಲೀನ್ ಎನ್‌ಫೋರ್ಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲಸ ಮಾಡತಕ್ಕ ಅಧಿಕಾರಿಗಳು, ಇಂಜಿನೀಯರ್ಸ್ ನಿರ್ಲಕ್ಷ್ಯತನದಿಂದ ಅಸಡ್ಡೆತನದಿಂದ ಮಾಡುತ್ತಾರೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ನೀಡಿದಾಗ ಮನಸ್ಸಿಗೆ ವೇದನೆ ಆಗುತ್ತದೆ. ಕೇವಲ ಲೈನ್ ಎಸ್ಟಿಮೇಟ್ ಮಾಡಿದಾಗ ಕಂಟ್ರಾಕ್ಟರ್ ಟೆಂಡರ್ ಹಾಕಿದ್ದಾನೆ. ಆ್ಯಕ್ಚುಯಲ್ ಎಸ್ಟಿಮೇಟ್ ಮಾಡಿದಾಗ ಕಾಸ್ಟ್ ಹೆಚ್ಚಾಗುತ್ತದೆ. ಆಗ ಕಂಟ್ರಾಕ್ಟರ್ ಕೆಲಸ ಮಾಡುವುದಕ್ಕೆ ತಯಾರಿರುವುದಿಲ್ಲ. ಹೀಗಾಗಿ 30–40 ಕೋಟಿ ರೂಪಾಯಿ ವಿನಾಕಾರಣ ಹಾಳಾಗಿದೆ. ಯಾವುದೇ ಅಧಿಕಾರಿ ವಿರುದ್ಧ ಅಥವಾ ಯಾವುದೇ ಕಂಟ್ರಾಕ್ಟರ್ ವಿರುದ್ಧ ಅಧಿಕಾರಿಗಳ ವಿರುದ್ಧ ಏನೇ ಕ್ರಮ ತೆಗೆದುಕೊಳ್ಳಿ ಅದಕ್ಕೂ ಸೆಕ್ಷನ್ 40–41 ಅಪ್ಲೈ ಆಗಬೇಕು. ಸೂಕ್ತವಾಗಿ ಏನೇನು ಚೇಂಜಸ್ ಮಾಡಬೇಕಾಗಿದೆ ಅದನ್ನು ತರಬೇಕು. ನನ್ನ ಕೊನೆಯ ಸೂಚನೆ, ತಾವು ಪ್ರಾಧಿಕಾರಕ್ಕೆ ಸಾಕಷ್ಟು ಅಧಿಕಾರ ಕೊಟ್ಟಿದ್ದೀರಿ. ಅದಕ್ಕೆ ಕೇವಲ ಕೃಷ್ಣಾ ನದಿ ಅಲ್ಲ, ಕೃಷ್ಣ ನದಿಯ ಉಪನದಿಗಳು ಎಂದು ಸಹ ಸೇರಿಸಿದ್ದೀರಿ. ಉಪನದಿಯಲ್ಲಿ ಅನೇಕ ಸಣ್ಣ ಪುಟ್ಟ ಯೋಜನೆಗಳು ಪೂರ್ತಿ ಆಗಬೇಕಾದರೆ ಮೀಡಿಯಂ ಇರಿಗೇಷನ್ ಅಡಿಯಲ್ಲಿ, ಸಣ್ಣ ನೀರಾವರಿ ಅಡಿಯಲ್ಲಿ 1500 ಎಕರೆ ಎಂದು ಮಾಡಿದ್ದಾರೆ. ಅಲ್ಲಿಯೂ ಲ್ಯಾಂಡ್ ಅಕ್ವೈರ್ ಸಮಸ್ಯೆ ಆಗಿದೆ. ಅಲ್ಲಿಯೂ ಅಕ್ವೈರ್ ಮಾಡಬೇಕಾಗುತ್ತದೆ. ನನ್ನ ಸೂಚನೆ ಏನೆಂದರೆ ಒಂದು ಸಾವಿರ ಎಕರೆ ಮೇಲೆ ಯಾವ ಆಯಕಟ್ಟು ಬರುತ್ತದೆ ಅವನ್ನು ಮೀಡಿಯಂ ಇರಿಗೇಷನ್ ವ್ಯಾಪ್ತಿಯಲ್ಲಿ ತಂದೆ ತಕ್ಷಣ ಕಾರ್ಯಕ್ರಮವನ್ನು ಕಂಪ್ಲೀಟ್ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇದನ್ನು ಮಂತ್ರಿಗಳು ತರಬೇಕು. ಈ ಪ್ರಾಧಿಕಾರವನ್ನು ರಚನೆ ಮಾಡುವುದಕ್ಕೆ ಏನು ಅಧಿನಿಯಮ ತಂದಿದ್ದೀರಿ ಅದನ್ನು ಸ್ವಾಗತ ಮಾಡಿ, ನನ್ನ ಸಲಹೆ ಸೂಚನೆಗಳನ್ನು ಅನುಷ್ಠಾನಕ್ಕೆ ತರುತ್ತೀರೆಂದು ನಂಬಿ, ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ. (ಬೈಲಹೊಂಗಲ) :– ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ತಂದಿರತಕ್ಕ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ಇದರ ಬಗ್ಗೆ ಹಿರಿಯ ಸದಸ್ಯರು ಮಾತನಾಡಿದ್ದಾರೆ. ನಾನು ಹೆಚ್ಚಿಗೆ ವೇಳೆ ತೆಗೆದುಕೊಳ್ಳದೆ ಕೇವಲ 3 ಸಲಹೆಗಳನ್ನು ಮಾತ್ರ ತಮ್ಮ ಮೂಲಕ ಕೊಡಬಯಸುತ್ತೇನೆ. ಮೊದಲನೆಯದಾಗಿ, ಸೆಕ್ಷನ್ (5)ರ ಪ್ರಕಾರ, ಈಗಾಗಲೇ ಹಿರಿಯ ಸದಸ್ಯರು ಹೇಳಿದ ಪ್ರಕಾರ ಆ ಪ್ರಾಧಿಕಾರದಲ್ಲಿ ಮಂತ್ರಿಗಳನ್ನು, ಅಧಿಕಾರಿಗಳನ್ನು ಮಾತ್ರ ಸದಸ್ಯರನ್ನಾಗಿ ಹಾಕಿದ್ದೀರಿ. ರಾಜ್ಯದಲ್ಲಿ ಹಿರಿಯ ತಜ್ಞರು, ಅನುಭವವುಳ್ಳ ನಿವೃತ್ತ ಇಂಜಿನಿಯರುಗಳು, ಬಹಳ ಮಂದಿ ಇದ್ದಾರೆ. ಶ್ರೀಮಾನ್ ಬಾಳೆಕುಂದ್ರಿಯವರು, ಚಿಕ್ಕಣ್ಣನವರು, ಅಂಗಡಿಯವರು ಇನ್ನೂ ಮುಂತಾದವರು ಇದ್ದಾರೆ. ಮಹಾನ್ ತಜ್ಞ ಇಂಜಿನಿಯರ್‌ಗಳು ಇದ್ದಾರೆ ಅಂಥವರನ್ನು ಈ ಪ್ರಾಧಿಕಾರದಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಆ ಭಾಗದಲ್ಲಿ ಬರತಕ್ಕ ಶಾಸಕರನ್ನು ಎಂಎಲ್‌ಎ, ಎಂಎಲ್‌ಸಿ) ತೆಗೆದುಕೊಳ್ಳಬೇಕು. ಏಕೆಂದರೆ ಅವರು ಸಲಹೆ ಕೊಡಲು ಯೋಗ್ಯರಾಗಿರುತ್ತಾರೆ. ಇವತ್ತಿನ ದಿವಸ, "Meetings of the Authority" -'The meetings of the Authority shall be held at such times and places and subject to sub-section(2) and (3)." ಎಂದು ಮಾಡಿದ್ದೀರಿ.

ಇದಕ್ಕೆ ಕಾರಣ ಈಗಾಗಲೇ ತಮಗೆ ಗೊತ್ತಿರಬಹುದು. ಕೆಲವು ಕಡೆ ಮುಖ್ಯ ಮಂತ್ರಿಗಳು ಅಧ್ಯಕ್ಷರು ಇದ್ದಾಗ ಒಂದೆರಡು ವರ್ಷ ಮೀಟಿಂಗ್‌ಗಳು ಆಗುವುದಿಲ್ಲ. ಅದಕಾರಣ, ಕೊನೇಪಕ್ಷ 4 ತಿಂಗಳಿಗೊಮ್ಮೆಯಾದರೂ ಒಂದು ಮೀಟಿಂಗ್ ಆಗಬೇಕೆಂದು ಇದರಲ್ಲಿ ಸೇರಿಸಬೇಕು. ಹಾಗೆ ಸೇರಿಸುವುದರಿಂದ ಜರೂರು ಕೆಲಸಗಳು ಆಗುತ್ತವೆಂದು ಹೇಳಬಯಸುತ್ತೇನೆ. ಅನಂತರ ತಾವು ಇವತ್ತಿನ ದಿವಸ ಅಪಾಯಿಂಟಿಂಗ್ ಆಫೀಸರ್ಸ್ – Section 14:

"Appointment of the Chief Executive -- (1) The State Government shall appoint and Officer who shall be the Chief Executive and Administrative Officer for the Authority." ಎಂದು ಮಾಡಿದ್ದೀರಿ.

Now who is this person? Whether he is a qualified person? ಚೀಫ್ ಎಗ್ಸಿಕ್ಯುಟೀವ್ ಆಫೀಸರ್ ಎಂದರೆ ಇವತ್ತಿನ ದಿವಸ ತಾವು ಏನೂ ಕ್ಲಾರಿಫೈ ಮಾಡಿಲ್ಲ. ಕ್ವಾಲಿಫೈಡ್ ಪರ್ಸನ್ಸ್ ಎದರೆ ಚೀಫ್ ಇಂಜಿನಿಯರ್ ಗ್ರೇಡ್‌ನವನೋ ಅಥವಾ ಅವರಿಗಿಂತ ಹೆಚ್ಚಿನ ಗ್ರೇಡ್‌ನಲ್ಲಿದ್ದಾರೋ, ಐ.ಎ.ಎಸ್. ಆಫೀಸರೋ ಐ.ಪಿ.ಎಸ್. ಆಫೀಸರೋ ಅಥವಾ ಐ.ಎಫ್.ಎಸ್. ಆಫೀಸರೋ? ಏಕೆಂದರೆ ಇವತ್ತಿನ ದಿವಸ ಪ್ರತಿಯೊಂದರಲ್ಲಿ ನೇಡುತ್ತೇವೆ. ಈ ಐ.ಎ.ಎಸ್. ಮತ್ತು ಐ.ಪಿ.ಎಸ್. ಆಫೀಸರ್‌ಗಳನ್ನು ಎಲ್ಲೆಲ್ಲಿ ಪ್ರೊಮೋಷನ್ ಬೇಕೋ ಪ್ರತಿಯೊಂದು ಡಿಪಾರ್ಟ್‌ಮೆಂಟಿಗೂ ಬರುತ್ತಾರೆ, ಯೂತ್ ಸರ್ವಿಸಸ್ ತೆಗೆದುಕೊಳ್ಳಿ, ಕನ್ನಡ ಅಂಡ್ ಕಲ್ಚರ್ ತೆಗೆದುಕೊಳ್ಳಿ, ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿ, ತಮಗೆ ಸಂಬಂಧ ಇಲ್ಲದ ಡಿಪಾರ್ಟ್‌ಮೆಂಟಿನಲ್ಲಿ ಐ.ಎ.ಎಸ್. ಆಫೀಸರ್‌ಗಳು, ಐ.ಪಿ.ಎಸ್. ಆಫೀಸರುಗಳು ಪ್ರಮೋಷನ್ ಸಲುವಾಗಿ ಬರುತ್ತಾರೆ. ಆದಕಾರಣ ಇವತ್ತಿನ ದಿವಸ ಅಟ್‌ಲೀಸ್ಟ್ ಇಂಥ ಒಂದು ಕ್ವಾಲಿಫೈಡ್ ಪರ್ಸನ್ಸ್ ಅಪಾಯಿಂಟ್ ಮಾಡುತ್ತೇವೆ. ಎಂದು ತೋರಿಸದೆ ಇದು ಹೇಗೆ ಸರಿ ಎಂದು ಕೇಳುತ್ತೇನೆ. ಆದಕಾರಣ ಇವತ್ತಿನ ದಿವಸ ಪವರ್ಸ್ ಪ್ರತಿಯೊಂದಕ್ಕೂ ಇದೆ. Planning, administration, settlements and acquisition and all the powers have been given to this person. He is as good as the Chief Secretary to Government of Karnataka. ಅಷ್ಟೊಂದು ಪವರ್ಸ್ ಇದ್ದಂಥ ಮನುಷ್ಯ ಯಾರು? ಅಟ್‌ಲೀಸ್ಟ್ ನಾಲೆಡ್ಜ್ ಇರಬೇಕು. ಏಕೆಂದರೆ ಇವತ್ತಿನ ದಿವಸ ಪ್ಲಾನಿಂಗ್ ಮಾಡಬೇಕಾಗುತ್ತದೆ. ಅಡ್ಮಿನಿಸ್ಟ್ರೇಷನ್ ನಡೆಸಬೇಕಾಗುತ್ತದೆ. ಎಸ್ಟಿಮೇಟ್ ಅಪ್ರೂವ್ ಮಾಡಬೇಕಾಗುತ್ತದೆ. ಆ ಕಾರಣದಿಂದ ಟೆಕ್ನಿಕಲ್ ಗೈಡೆನ್ಸ್ ಇದ್ದಂಥ ಚೀಫ್ ಇಂಜಿನಿಯರ್ ಗ್ರೇಡ್ ಅಥವಾ ಅವರಿಗಿಂತ ಸುಪೀರಿಯರ್ ಗ್ರೇಡ್‌ನಲ್ಲಿರುವಂಥ ಆಫೀಸರ್ಸ್ ಮಾಡಬೇಕೆಂದು ತಾವು ನಮೂದು ಮಾಡಬೇಕು. ಇದು ಬಹಳ ಮಹತ್ವವಾದುದು. ಇದನ್ನು ಅಲಕ್ಷ್ಯ ಮಾಡಬಾರದು ಎಂದು ನಾನು ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಹಾಕಿದ್ದೇವೆ. ಮುಂದಿನ ಪೇಜ್‌ನಲ್ಲಿದೆ. ತಾವು ನೋಡಬಹುದು 9ನೇ ಪೇಜ್‌ನಲ್ಲಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ :– ಇಲ್ಲ. ಓದಿ.

ಚೇರ್ಮನ್ :– ಮಂತ್ರಿಗಳೇ, ತಾವು ರಿಪ್ಲೈ ಮಾಡುವಾಗ ಹೇಳಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ :– ನನಗೆ ಕೊಟ್ಟಿರುವುದರಲ್ಲಿ ಇಲ್ಲ. ಅವರ ಕಡೆ ಇರುವುದರಲ್ಲಿ ಪ್ರಿಂಟ್ ಮಾಡಿಕೊಂಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಮಾಡಿಕೊಂಡಿದ್ದರೆ ಬಹಳ ಸಂತೋಷ. ನಿನ್ನೆ ಓದುವುದಕ್ಕೆ ನನಗೆ ಟೈಂ ಸಿಕ್ಕಿತು, ನೋಡಿದ್ದೇನೆ. ಏಕೆಂದರೆ ಮಾನ್ಯ ಮಂತ್ರಿಗಳು ತಮ್ಮ ಮನಸ್ಸು ಹರಿಸಿದ್ದಾರೆಂದು ತೋರಿಸುತ್ತದೆ. ಇದರಲ್ಲಿ ಇಲ್ಲ. ಇನ್ನೊಂದು "Finance, Accounts and Audit, - Powers of the borrower" ಇದರಲ್ಲಿ ಡಿಬೆಂಚರ್ಸ್ ಬಗ್ಗೆ ಬರೆದಿದ್ದಾರೆ. ಡಿಬೆಂಚರ್ಸ್, ಇರಿಗೇಷನ್ ಬಾಂಡ್ಸ್ ಇದರ ಬಗ್ಗೆ ಕೇಂದ್ರ ಸರ್ಕಾರ ಈಗಾಗಲೇ ಯಾವುದೇ ಒಪ್ಪಿಗೆ ಕೊಡುತ್ತಿಲ್ಲ. ಇಂಥ ಕ್ಲಾಸ್ ಹಾಕುವುದರಿಂದ ಮಲಕರೆಡ್ಡಿಯವರು ಹೇಳಿದಂತೆ ಮೇಲಾಧಿಕಾರಿಗಳ ಅಸೆಂಟ್ಸ್ ಸಿಗುವುದಿಲ್ಲ. ಆದ್ದರಿಂದ ಇಂಥ ಕ್ಲಾಸ್ ಹಾಕಬಾರದು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಮತ್ತು ಇನ್ನೊಂದು ಸೆಕ್ಷನ್ 31– Constitution of the special Courts" ಇದರಲ್ಲಿ ಏನು ಹೇಳಿದ್ದಾರೆಂದರೆ since the judge is given the rank of Civil Judge, the order passed by him shall be final ಎಂದು ಹೇಳಿದ್ದಾರೆ. ಇದಕ್ಕೆ ಅಪೀಲ್ ಪ್ರಾವಿಷನ್ ಇಟ್ಟಿಲ್ಲ. ಅದು ಇರದೇ ಇದ್ದರೆ ಮತ್ತೆ ರಿಟ್ ಮಾಡಬೇಕಾಗುತ್ತದೆ. ಇದು ವಿಚಾರ ಮಾಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಆದಕಾರಣ ಇವತ್ತು ಇದನ್ನು ತರಾತುರಿಯಿಂದ ತಂದಿದ್ದೀರಿ. ಒಳ್ಳೆಯ ಕೆಲಸ ಮಾಡಬೇಕು ಎಂದು ತಮಗೆ ಮನಸ್ಸು ಇದೆ, ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ ಸೆಕ್ರೆಟರಿ–1 ಮತ್ತು 2 ಆದನಂತರ ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ

ಒಳ್ಳೆಯ ಕೆಲಸ ನಡೆದಿದೆ. ಅದರ ಬಗ್ಗೆ ನಮಗೆ ಯಾವುದೂ ಇಲ್ಲ. 2000 ಇಸವಿಯೊಳಗೆ ಈ ಸ್ಕೀಮ್ ಮುಗಿಸಬೇಕು ಎಂಬ ಸದುದ್ದೇಶ ಇದೆ. ಆದರೆ ಆ ಸದುದ್ದೇಶದ ಕೆಳಗೆ ಇಂಥದ್ದು ಆಗದಹಾಗೆ ನೋಡಿಕೊಳ್ಳಬೇಕು. ಮತ್ತು ಇನ್ನೂ ಹೆಚ್ಚಿನ ಹಣ ಒದಗಿಸಬೇಕು. ಪ್ಲಾನಿಂಗ್‌ನಲ್ಲಿ ಇರುವ ಹಣ ಮಾತ್ರ ಟ್ರಾನ್ಸ್‌ಫರ್ ಮಾಡಿದ್ದೀರಿ. ಆದಕಾರಣ ನೀವು ಇವತ್ತಿನ ದಿವಸ ತಂದಿರುವ ಮಸೂದೆಯನ್ನು ಸ್ವಾಗತಿಸಿ ನಾನು ಕೊಟ್ಟಿರುವ ಸಲಹೆಯನ್ನು ಅಳವಡಿಸಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.. ಬೈರೇಗೌಡ (ವೇಮಗಲ್ ಕ್ಷೇತ್ರ) :— ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಸರ್ಕಾರ ಒಂದು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಹೊರಟಿದೆ. ಈ ಸಂದರ್ಭದಲ್ಲಿ ಸರ್ಕಾರ ತಂದಿರತಕ್ಕ ಈ ಮಸೂದೆಗೆ ಸ್ವಾಗತವನ್ನು ಬಯಸುವುದಕ್ಕಿಂತ ಮೊದಲು ನಾನು ಸರ್ಕಾರವನ್ನು ಅಂಭಿನಂದಿಸಬೇಕಾಗುತ್ತದೆ. ಕಾರಣ ಎಂದರೆ, ನಾನು ಒಬ್ಬ ರೈತನಾಗಿರುವುದರಿಂದ ವ್ಯವಸಾಯಕ್ಕೆ ಅತಿ ಮುಖ್ಯವಾಗಿ ಬೇಕಾಗಿರತಕ್ಕದ್ದು ನೀರು. ಈ ನೀರು ಇಲ್ಲದೇ ವ್ಯವಸಾಯ ಮಾಡುವುದಕ್ಕೆ ಸಾಧ್ಯವಿಲ್ಲ. ಈ ನೀರಿನ ವಿಚಾರದಲ್ಲಿ ರಾಜ್ಯದ ಯಾವುದೇ ಭಾಗದಲ್ಲಿ ನೀರನ್ನು ಸಂಗ್ರಹಿಸಿಟ್ಟು ರೈತರಿಗೆ ಅದನ್ನು ಸರಬರಾಜು ಮಾಡುತ್ತೇವೆನ್ನುವ ಕೆಲಸವನ್ನು ಯಾವುದೇ ಪಕ್ಷದ ಸರ್ಕಾರ ಮಾಡಿದರೂ ಅದನ್ನು ಸ್ವಾಗತ ಮಾಡತಕ್ಕದ್ದು ನನ್ನ ಕರ್ತವ್ಯ. ಆ ದೃಷ್ಟಿಯಿಂದ ನಾನು ಮತ್ತೊಮ್ಮೆ ಇದನ್ನು ಸ್ವಾಗತಿಸುತ್ತಿದ್ದೇನೆ. ಆದರೆ ಸರ್ಕಾರ ಈ ರೀತಿಯ ಒಂದು ಕಾನೂನನ್ನು ಕಾಗದದ ಮೇಲೆ ತಂದು, ಪುಸ್ತಕದಲ್ಲಿ ಇಟ್ಟಿದ್ದೇವೆಂದು ಹೇಳಿದರೆ ಆಗುವುದಿಲ್ಲ. ಈ ಕಾನೂನು ತರಬೇಕೆಂಬ ಉದ್ದೇಶ ಏನಿದೆ ಇದರಿಂದ ನೀರು ಪೂರ್ತಿಯಾಗಿ ಎಲ್ಲಾ ರೈತರಿಗೆ ಸಿಗುತ್ತದೆನ್ನುವ ನಂಬಿಕೆ ಕೂಡಾ ನನಗಿಲ್ಲ. ಏಕೆಂದರೆ, ಇವತ್ತು ಪಕ್ಕದ ರಾಜ್ಯಗಳನ್ನು ನೋಡುವಾಗ ನಮ್ಮ ರಾಜ್ಯದಲ್ಲಿ ಶೇಕಡಾ 17ರಷ್ಟು ನೀರಾವರಿಯಾಗಿದೆ. ಆದರೆ ಆಂಧ್ರಪ್ರದೇಶದಲ್ಲಿಯಾಗಲೀ, ತಮಿಳುನಾಡಿನಲ್ಲಾಗಲೀ ಇವತ್ತು ಅಲ್ಲಿ ಶೇಕಡಾ 35ರಷ್ಟು ನೀರಾವರಿ ಆಗಿದೆ. ನನಗೆ ತಿಳಿದಮಟ್ಟಿಗೆ ಅವರು ಯಾವತ್ತೂ ಕೂಡಾ ಈ ರೀತಿಯಾದ ಕಾನೂನನ್ನು ತಂದಿಲ್ಲ. ತಮಿಳುನಾಡಿನಲ್ಲಿ ಹಾಗೂ ಆಂಧ್ರದಲ್ಲಿ ಯಾವುದೇ ವ್ಯಾಲಿ ಅಥಾರಿಟಿ ಇಲ್ಲ. ಆದರೆ ಅವರು ನೀರಾವರಿಯನ್ನು ನಮಗಿಂತಲೂ ಹೆಚ್ಚು ಮಾಡಿರತಕ್ಕದ್ದು ನಮಗೆ ಅಂಕಿಅಂಶದಿಂದ ಗೊತ್ತಾಗುತ್ತದೆ. ಎಲ್ಲಿ ಇಚ್ಛಾಶಕ್ತಿ ಇರುತ್ತದೋ, ರೈತರಿಗೆ ನೀರು ಕೊಡಬೇಕೆಂದು ಇರುತ್ತದೋ ಅಲ್ಲಿ ಯಾವುದೂ ಕೂಡಾ ಅಡ್ಡಿ ಬರುವುದಿಲ್ಲ. ಈ ರೀತಿಯಾದ ಕಾನೂನು ಅವಶ್ಯಕ ಇಲ್ಲ. ಇಚ್ಛಾಶಕ್ತಿ, ದೂರದೃಷ್ಟಿ ಈ ರಾಜ್ಯದಲ್ಲಿ ಬಂದಂತಹ ಸರ್ಕಾರಗಳಿಗೆ ಇರಲಿಲ್ಲ ಎನ್ನತಕ್ಕದ್ದು. ನಮ್ಮ ಸರ್ಕಾರ ಇರಬಹುದು ಅಥವಾ ನಮಗಿಂತಲೂ ಹಿಂದೆ ಇದ್ದ ಸರ್ಕಾರ ಇರಬಹುದು ಈ ಇಚ್ಛಾಶಕ್ತಿ ಇರಲಿಲ್ಲ ಎಂದು ಇವತ್ತು ಒಬ್ಬ ರೈತನಾಗಿ ಬಹಳ ವ್ಯಥೆಯಿಂದ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಕಾವೇರಿಗೆ ಬಂದಿರತಕ್ಕ ಗತಿ, ಕಾವೇರಿ ಆದನಂತರ ಇವತ್ತಿನದಿವಸ ಕೃಷ್ಣಾಗೆ ಅದೇ ಗತಿ ಕಾಯುತ್ತಿದೆ. ಇದನ್ನು ಕೇಳಿದಾಗ ಖಂಡಿತವಾಗಿ ನಮ್ಮನ್ನು ನಾವು ಶಪಿಸಿಕೊಳ್ಳುವ ಜೊತೆಗೆ ಈ ವ್ಯವಸ್ಥೆಯನ್ನು ನಾವು ಶಪಿಸಬೇಕಾದಂತಹ ಪರಿಸ್ಥಿತಿ ಇವತ್ತು ಒದಗಿಬಂದಿದೆ. ನಮಗೆ ಪ್ರಾಕೃತಿಕವಾಗಿ ಸಿಗತಕ್ಕದ್ದು ನೀರು. ಆ ನೀರನ್ನು ಬಳಸಿಕೊಳ್ಳದ ಪರಿಸ್ಥಿತಿಗೆ ಹೋದರೆ ಅರ್ಥ ಏನು ಆಗುತ್ತದೆ.? ಈ ವ್ಯವಸ್ಥೆಯಲ್ಲಿ ನಾವಿದ್ದೇವೆ ಎನ್ನುವುದಕ್ಕೆ ಅರ್ಥವಿಲ್ಲ. ಇವತ್ತು ನಂಬಿಕೆ ಏನೆಂದರೆ, ಈ ರೀತಿಯಾದ ಕಾನೂನು ಬಂದಮೇಲಾದರೂ ಕೂಡಾ ಇವತ್ತು ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವುದಕ್ಕೆ ನಾವು ಮುಂದಾಗಬೇಕು. ಮುಂದೆ ಇದು ಆಗುವುದಕ್ಕೆ ಸಹಕಾರಿ ಆಗಬಹುದೆಂಬ ನಂಬಿಕೆ ನನಗಿದೆ. ಈಗಾಗಲೇ ಮಾತನಾಡಿದ ಮಾನ್ಯ ಸ್ನೇಹಿತರು ಹೇಳಿದ್ದಾರೆ. ಆಂಧ್ರಪ್ರದೇಶದಲ್ಲಿ ಅವರ ಪಾಲಿನ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡಿದ್ದಾರೆ. ಅದನ್ನು ಉಪಯೋಗಿಸಿಕೊಂಡು ಇವತ್ತು ತೆಲುಗು–ಗಂಗಾ ಯೋಜನೆಯನ್ನು ಕೇವಲ 1200 ಕ್ಯೂಸೆಕ್ಸ್ ನೀರು ಹೋಗಬೇಕಾಗಿರುವ ಕಡೆ ಸುಮಾರು 11 ಸಾವಿರ ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗತಕ್ಕ ತೆಲುಗು–ಗಂಗಾ ಕಾಮಗಾರಿ ಕೆಲಸವನ್ನು ಅವರು ನಾಗಾಲೋಟದಿಂದ ನಡೆಸುತ್ತಿದ್ದಾರೆ. ಕಾರಣ ಏನೆಂದರೆ ಅಲ್ಲಿನ ಇಚ್ಛಾಶಕ್ತಿ. ಅಲ್ಲಿ ಇರುವ ರೈತರ ಭೂಮಿಗೆ ನೀರು ಕೊಡುವ ಇಚ್ಛಾಶಕ್ತಿ ಆ ಸರ್ಕಾರಕ್ಕೆ ಇರುವುದರಿಂದ ಇದು

ಸಾಧ್ಯವಾಯಿತು. ಆದರೆ ಅದು ನಮ್ಮಲ್ಲಿ ಇಲ್ಲ. ಆ ಕೆಲಸ ನಮ್ಮಲ್ಲಿ ಆಗಲಿಲ್ಲ. ಇದನ್ನು ಬಹಳ ವ್ಯಥೆಯಿಂದ ಹೇಳಬೇಕಾಗುತ್ತದೆ. ಇವತ್ತು ನಮ್ಮ ಪ್ರದೇಶದ ಕತೆಯೇ ಬೇರೆಯೇ ಆಗಿದೆ. ನಮ್ಮ ಪ್ರದೇಶ ಆ ಕಡೆ ಕೃಷ್ಣಾ ಜಲಾನಯನ ಪ್ರದೇಶದಲ್ಲೂ ಇಲ್ಲ, ಈ ಕಡೆ ಕಾವೇರಿ ಜಲಾನಯನ ಪ್ರದೇಶದಲ್ಲೂ ಕೂಡಾ ಇಲ್ಲ. ಎರಡಕ್ಕೂ ತಪ್ಪಿರತಕ್ಕ ಒಂದು ರೀತಿಯ ಇಬ್ಬಂದಿ ಪರಿಸ್ಥಿತಿ ಇವತ್ತು ನಮ್ಮದಾಗಿದೆ, ಈ ರಾಜ್ಯದಲ್ಲಿ. ಇವತ್ತು ನಾವು ಕುಡಿಯುವುದಕ್ಕೆ ನೀರು ಇಲ್ಲ. ಮಾನ್ಯ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿದ್ದರು ಅವರು ಹೈದರಾಬಾದ್ ಕರ್ನಾಟಕ ಏರಿಯಾದಿಂದ ಬಂದವರು. ಅವರು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿ ಅದಕ್ಕೆ ಪ್ರತಿ ವರ್ಷ 6 ಕೋಟಿ ಬಜೆಟ್‌ನಲ್ಲಿ ಇಟ್ಟಿದ್ದಾರೆ. ಅದೇರೀತಿಯಲ್ಲಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿ ಬಂದರು, ಅವರು ಮಲೆನಾಡುಪ್ರದೇಶದಿಂದ ಬಂದವರು. ಅವರು ಮಲೆನಾಡು ಅಭಿವೃದ್ಧಿ ಬೋರ್ಡ್ ಎಂದು ಮಾಡಿ ಅದಕ್ಕೆ 350 ಕೋಟಿ ರೂಪಾಯಿಯನ್ನು ಪ್ರತಿವರ್ಷ ಬಜೆಟ್‌ನಲ್ಲಿ ಇಟ್ಟಿದ್ದಾರೆ. ಆದರೆ ಇವೆರಡಕ್ಕೂ ಹೊರತುಪಡಿಸಿರತಕ್ಕದ್ದು ನಮ್ಮ ಬಯಲು ಪ್ರದೇಶಗಳಾದ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ಆ ಜಿಲ್ಲೆಗಳನ್ನು ಒಂದು ರೀತಿಯಲ್ಲಿ ಮಲತಾಯಿ ಧೋರಣೆಯಿಂದ ಕಾಣುತ್ತಿದ್ದಾರೆಂದು ನಾನು ವ್ಯಥೆಯಿಂದ ಹೇಳಬೇಕಾಗಿದೆ. ನಾನು ಈ ಮಸೂದೆಯ ಬಗ್ಗೆ ಹೇಳುವುದಾದರೆ, ಈ ಅಥಾರಿಟಿಗೆ ಯಾರ್ಯಾರು ಸದಸ್ಯರಿದ್ದಾರೆಂದು ಹೇಳಿದ್ದಾರೆ. ದೊಡ್ಡ ದೊಡ್ಡ ಜನರನ್ನು ಸದಸ್ಯರನ್ನಾಗಿ ಇಟ್ಟಿದ್ದಾರೆ. ಈ ವಿಚಾರದಲ್ಲಿ ನಾವು ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ನಾವು ಸಂಪೂರ್ಣವಾಗಿ ಇದಕ್ಕೆ ಬೆಂಬಲವನ್ನು ಕೊಡುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಆದರೆ ಇಲ್ಲಿ ನೋಡಿದಾಗ, ಈ ಮಸೂದೆಯನ್ನು ನಾನು ಮೊದಲೇ ನೋಡಿದ್ದರೆ ನಾವು ಬೇರೆ ತೀರ್ಮಾನಕ್ಕೆ ಬರಬೇಕಾಗುತ್ತಿತ್ತು, ಆ ರೀತಿಯಾಗಿ ನಾವು ಮಾತಿಗೆ ಕಟ್ಟು ಬೀಳುವುದಕ್ಕೆ ಆಗುತ್ತಿಲ್ಲ. ಈ ಕಡೆಯಿಂದ ಯಾರೂ ಕೂಡ ಸದಸ್ಯರು ಇಲ್ಲ. ಇದೊಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮತ್ತೊಂದು ಪರ್ಯಾಯ ಸರ್ಕಾರ ಎನ್ನತಕ್ಕ ರೀತಿಯಲ್ಲಿ ಸರ್ಕಾರೀಕರಣ ಮಾಡುವುದಕ್ಕೆ ಹೊರಟಿದ್ದಾರೆ. ಈ ಕಡೆಯಿಂದ ವಿರೋಧಪಕ್ಷಕ್ಕೆ ಸಂಬಂಧಪಟ್ಟಂತೆ ಸದಸ್ಯರು ಯಾರಿದ್ದಾರೆ ಅವರಿಗೆ ಯಾರಿಗೂ ಕೂಡ ಅರ್ಹತೆ ಇಲ್ಲವೆ? ಆ ಕಡೆ ಕುಳಿತುಕೊಂಡಿರತಕ್ಕ ಜನರನ್ನು ಯಾವರೀತಿಯಾಗಿ ಜನ ಚುನಾಯಿಸಿ ಕಳುಹಿಸಿದ್ದಾರೋ ಅದೇರೀತಿಯಾಗಿ ನಮ್ಮನ್ನು ಜನ ಚುನಾಯಿಸಿ ಕಳುಹಿಸಿದ್ದಾರೆನ್ನುವುದನ್ನು ಸರ್ಕಾರ ಅರಿತುಕೊಳ್ಳಬೇಕಾಗುತ್ತದೆ. ಕೊನೆಯ ಪಕ್ಷ ರಾಜ್ಯಮಟ್ಟದಲ್ಲಿ ಯಾವ್ಯಾವ ರಾಜಕೀಯ ಪಕ್ಷಗಳಿವೆ, ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಆ ಪಕ್ಷಗಳ ಸದಸ್ಯರು ಆ ಮನೆಯಲ್ಲಾಗಲೀ ಈ ಮನೆಯಲ್ಲಾಗಲೀ ಇರತಕ್ಕ ಸದಸ್ಯರನ್ನು ಇದಕ್ಕೆ ಸದಸ್ಯರನ್ನಾಗಿ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಮಾತನಾಡುತ್ತಾ ಹೇಳಿದ್ದಾರೆ. ನೀವು ಏನಾದರೂ ಅಮೆಂಡ್‌ಮೆಂಟ್ ಸೂಚಿಸುವುದಾದರೆ ನಾವು ಅಲ್ಲೇ ಒಪ್ಪಿಕೊಳ್ಳುತ್ತೇವೆನ್ನತಕ್ಕ ಉದಾರವಾದ ಮಾತನ್ನು ಹೇಳಿದ್ದಾರೆ. ತಾವು ಕೂಡ ಇದ್ರಿ ನಿನ್ನೆ ನಡೆದ ಸಭೆಯಲ್ಲಿ. ತಾವಾದರೂ ಬಂದು ತಿದ್ದುಪಡಿಯನ್ನು ತರಬೇಕು ಅಥಾರಿಟಿ ಆಫ್ ಮೆಂಬರ್ಸ್ ಮಾಡುವುದಕ್ಕೆ ಸೆಕ್ಷನ್ (5)ರ ಪ್ರಕಾರ ಅವಕಾಶವಿದೆ ಅದನ್ನು ಮಾಡಬೇಕೆಂದು ಒತ್ತಿ ಒತ್ತಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಲ್ಲಿ ಬೇರೆ ಬೇರೆ ಕಾನೂನುಗಳನ್ನು ತಂದಿದ್ದಾರೆ. ಉದಾಹರಣೆಗೆ ಮೀನುಗಾರಿಕೆ ಇಲಾಖೆಯ ಕಾನೂನು. ಇವತ್ತು ನಮ್ಮ ರಾಜ್ಯದಲ್ಲಿ ಒಂದು ಕಾನೂನು ಕೂಡ ಇದೆ. ಬೇರೆ ಕಾನೂನು ಕೂಡ ಇದೆ. ಇಲ್ಲಿರತಕ್ಕ ಮೀನುಗಾರಿಕೆಗೆ ಸಂಬಂದಪಟ್ಟಿರತಕ್ಕ ಕಾನೂನು ಏನಿದೆ ಅದನ್ನು ನಾನು ನೋಡುವುದಕ್ಕೆ ಹೋಗಿಲ್ಲ. ಅಲ್ಲಿರತಕ್ಕ ಕೆಲವು ಅಂಶಗಳು ಏನಿವೆ, ಇಲ್ಲಿ ಕೊಟ್ಟಿರತಕ್ಕ ಕೆಲವು ಅಂಶಗಳು ಏನಿವೆ ಅವು ಒಂದಕ್ಕೊಂದು ವ್ಯತಿರಿಕ್ತವಾಗಬಹುದು ಎನ್ನುವ ಒಂದು ಅನುಮಾನವಿದೆ. ಅದನ್ನು ದಯವಿಟ್ಟು ಬಗೆಹರಿಸಬೇಕು. ಅದೇರೀತಿಯಲ್ಲಿ ನಮ್ಮಲ್ಲಿ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಅಂತ ಇದೆ ಅಲ್ಲಿ ಯಾವರೀತಿಯಾಗಿ ಕೆಲಸ ಮಾಡಬೇಕು. . . .

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಭೈರೇಗೌಡರೇ ಬೇರೆಯವರು ಮಾತನಾಡಬೇಕು. ಪೊಲ್ಯೂಷನ್ ಬೋರ್ಡ್, ಮಲೆನಾಡುಬೋರ್ಡ್, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಅದೆಲ್ಲ ಏಕೆ?

ಚೇರ್ಮನ್ : ಅವರು ಮಾತನಾಡುವಾಗ ಅಡ್ಡಿ ಮಾಡಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ : ನಾವು ಕೃಷ್ಣ ಬೇಸಿನ್ ಏರಿಯಾದಿಂದ ಬಂದಿರತಕ್ಕವರು ನಾವು ಮಾತನಾಡಬೇಕು.

ಚೇರ್ಮನ್ : ಅವರು ಇಷ್ಟುಹೊತ್ತಿಗೆ ಭಾಷಣ ಮುಗಿಸುತ್ತಾ ಇದ್ದರು.

ಶ್ರೀ ಸಿ. ಭೈರೇಗೌಡ : ಮಾನ್ಯ ರಾಯರೆಡ್ಡಿಯವರಿಂದ ನಾನು ಪಾಠ ಕಲಿಯಬೇಕಾಗಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ.

ಚೇರ್ಮನ್ : ಮಾನ್ಯ ರಾಯರೆಡ್ಡಿಯವರೇ ದಯವಿಟ್ಟು ಡಿಸ್ಟರ್ಬ್ ಮಾಡಬೇಡಿ.

ಶ್ರೀ ಸಿ. ಭೈರೇಗೌಡ : ಇಂತಹ ರಾಯರೆಡ್ಡಿಯವರಿಂದ ನಿಮ್ಮಂತಹವರಿಂದ ನಾನು ಪಾಠ ಕಲಿಯಬೇಕಾಗಿಲ್ಲ. ಯು ಮೈಂಡ್ ಇಟ್.

ಶ್ರೀ ಬಸವರಾಜ ರಾಯರೆಡ್ಡಿ : ನಾನು ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಅವರೆಲ್ಲರಿಂದ ನಾನು ಪಾಠ ಕಲಿಯಬೇಕಾಗಿದೆ. ಅದಕ್ಕೆ ನಾವು ಇಲ್ಲಿ ಕುಳಿತುಕೊಂಡಿದ್ದೇನೆ.

ಶ್ರೀ ಸಿ. ಭೈರೇಗೌಡ : ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸೆಕ್ಷನ್ (8) ಓದಿದ್ದರೆ ನೀವು ಮಾತನಾಡುತ್ತಿರಲಿಲ್ಲ. ಓದೇ ಇಲ್ಲ. ಇಲ್ಲಿ ಸುಮ್ಮನೆ ಬುಡಬುಡಿಕೆ ಅಲ್ಲಾಡಿಸುವುದಕ್ಕೆ ಬರುತ್ತಿರಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಒಳ್ಳೇ ಕತೆ ಆಯಿತಲ್ಲಾ. ನೀವು ಒಬ್ಬರೇನೇ ಓದಿರುವವರು ನಾವು ಓದಿಲ್ಲವಾ?

ಶ್ರೀ ಸಿ. ಭೈರೇಗೌಡ : ಸೆಕ್ಷನ್ (8) ಸಬ್ ಸೆಕ್ಷನ್ 3ರಲ್ಲಿ ಏನು ಹೇಳಿದ್ದಾರೆ ಎಂದರೆ
"To prevent pollution of water under its control and to take all measures to prevent discharges into such waters, affluents which are all close to water supply and irrigation and public health and fish life."
ಅಂದರೆ ಇದರ ಅರ್ಥವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ :— ತಾವು ಮಾತನಾಡಿ. ಶ್ರೀ ಭೈರೇಗೌಡರು ಹಿರಿಯ ಸದಸ್ಯರು, ಅನುಭವಸ್ತರು, ಬಹುಶಃ 1971ನೇ ಇಸವಿಯಿಂದ ಒಂದು ಪಾರ್ಟಿಯ ಲೀಡರ್ ಆಗಿದ್ದಾರೆ, ಫ್ಲೋರ್ ಲೀಡರ್ ಆಗಿದ್ದಾರೆ. ಅವರು ಬರೀ ಕೋಲಾರಜಿಲ್ಲೆ ಬಗ್ಗೆ ಅಥವಾ ವೇಮಗಲ್ ಕ್ಷೇತ್ರದ ಬಗ್ಗೆ ಮಾತನಾಡಬೇಕೆಂದು ನಾವಾಗಲೀ, ಸರ್ಕಾರವಾಗಲೀ ಯಾರೂ ಅಪೇಕ್ಷೆ ಮಾಡುವುದಿಲ್ಲ. ನಾನು ಹೇಳುತ್ತೇನೆ, ನಿಮ್ಮ ಬಗ್ಗೆ ಹೆಮ್ಮೆ ಇದೆ, ಗೌರವ ಇದೆ. ವಿರೋಧ ಪಕ್ಷದಲ್ಲಿದ್ದು ಹೋರಾಟ ಮಾಡಿದ್ದೀರಿ. ಮಾರ್ಕಿಸ್ಟ್ ಬ್ಯಾಕ್‌ಗ್ರೌಂಡ್ ಇರತಕ್ಕಂಥವರು ನೀವು. ನೀವಲ್ಲದೆ ಇನ್ನಾರು ಮಾತನಾಡಬೇಕು? ಹತ್ತು ಗಂಟೆಯವರೆಗೆ ಕುಳಿತುಕೊಳ್ಳೋಣ. ಅದಕ್ಕಲ್ಲ ಅವರು ಹೊಸದಾಗಿ ಸದನಕ್ಕೆ ಬಂದಿದ್ದಾರೆ. ಈಗ ಎರಡನೇ ಸಾರಿ ಬಂದಿದ್ದಾರೆ. ಆಗ ಆಡಳಿತ ಪಕ್ಷದಲ್ಲಿದ್ದರು. ಸಹಜವಾಗಿ ಮಾತನಾಡಲಿಕ್ಕೆ ಅವಕಾಶ ಆಗಲಿಲ್ಲ. ಈಗ ವಿರೋಧ ಪಕ್ಷದಲ್ಲಿದ್ದಾರೆ. ನಮ್ಮ ಪಾರ್ಟಿಯ ಚೀಫ್ ವಿಪ್ ಇದ್ದಾರೆ, ಮಾತನಾಡಬೇಕೆಂದು ಅವರಿಗೆ ಆಸೆ ಇದೆ. ಅವರ ಭಾಗದ ಜನರು ನಿರೀಕ್ಷೆ ಮಾಡುತ್ತಾರೆ. ಏನಪ್ಪ ನಮ್ಮ ರಾಯರೆಡ್ಡಿಯವರು ಮಾತನಾಡಲಿಲ್ಲ ಎಂದು ಅವರು ಹೇಳುತ್ತಾರೆ. ತಾವು ಮಾತನಾಡಿ. ಆದರೆ ಈ ಬುಡಬುಡಿಕೆ ಎಂದು ಹೇಳಿದ್ದನ್ನು ದಯವಿಟ್ಟು ತೆಗೆದುಹಾಕಬೇಕು. ಒಬ್ಬೊಬ್ಬರಿಗೆ ಒಂದೊಂದು ಭಾಷೆ ಇರುತ್ತದೆ. ಆದರೆ ಶ್ರೀ ಭೈರೇಗೌಡರು ಈ ಭಾಷೆಯನ್ನು ಉಪಯೋಗಿಸತಕ್ಕದ್ದು ಸಲ್ಲದು.

(ಗೊಂದಲ)

ಚೇರ್ಮನ್ :— ಅವರು ಇಷ್ಟುಹೊತ್ತಿಗೆ ತಮ್ಮ ಭಾಷಣವನ್ನೇ ಪೂರೈಸುತ್ತಿದ್ದರು.

ಶ್ರೀ ಸಿ. ಬೈರೇಗೌಡ :— ಮಾನ್ಯ ರಾಯರೆಡ್ಡಿಯವರು . . . .

(ಗೊಂದಲ)

ಚೇರ್ಮನ್ :— ಬೈರೌಗೌಡರೇ, ನೀವು ಅವರಿಗೆ ಉತ್ತರ ಕೊಡಬೇಕಾಗಿಲ್ಲ. ದಯಮಾಡಿ ಮುಂದುವರೆಸಿ.

ಶ್ರೀ ಸಿ ಬೈರೇಗೌಡ :— ಇದನ್ನು ಅವರು ಅರ್ಥಮಾಡಿಕೊಳ್ಳಬೇಕು.

ಶ್ರೀ ಬಸವರಾಜ ರಾಯರೆಡ್ಡಿ :— ಅದು ನಿಮಗೆ ಅರ್ಥವಾಗಬೇಕು.

ಶ್ರೀ ಸಿ. ಬೈರೇಗೌಡ :— ಹಾಗಾದರೆ ನಾನು ಶ್ರೀ ಸಿಂಧ್ಯ ಅವರು ಹೇಳಿದ ಮಾತನ್ನು ಮತ್ತೊಂದು ಸಾರಿ ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ :— ಬೈರೇಗೌಡರು ವಯಸ್ಸಿನಲ್ಲಿ ಹಿರಿಯರಾದ ಕಾರಣಕ್ಕೆ ಏನು ಬೇಕಾದರೂ ಹೇಳಬಹುದಾ ? ಬುಡಬುಡಿಕೆ ಎಂದು ಹೇಳಿದರೆ ಹೇಗೆ?

(ಗೊಂದಲ)

ಚೇರ್ಮನ್ : ನಾನು ಕರೆಯದೇ ಇದ್ದವರ ಮಾತು ಕಡತಕ್ಕೆ ಹೋಗುವುದು ಬೇಡ. ಬೈರೇಗೌಡರೇ, ಮುಂದುವರಿಸಿ.

ಶ್ರೀ ಸಿ. ಬೈರೇಗೌಡ : ಸಹಕಾರ ಸಂಘಕ್ಕೆ ಸಂಬಂಧಪಟ್ಟಿದು ಕೂಡ ಇದೆ ಎಂಟನೇ ಕಾಲಮ್‌ನಲ್ಲಿದೆ. ನನಗೆ ಅನುಮಾನ ಇರತಕ್ಕದ್ದು ಏನೆಂದರೆ, ಕಾನೂನುಗಳಲ್ಲಿ ಓವರ್ ರೈಡಿಂಗ್ ಎಫೆಕ್ಟ್ ಏನಾದರೂ ಇದೆಯೇ ಅಂತ. ಇಲ್ಲಿರತಕ್ಕಂಥ ಸಂಬಂಧಪಟ್ಟ ವಿಧಿಗಳು ಏನಿವೆ, ಅದು ಸಹಕಾರ ಸಂಘ ಕಾನೂನು ಇರಬಹುದು, ಅಥವಾ ಪೊಲ್ಯುಷನ್ ಕಂಟ್ರೋಲ್ ಇರಬಹುದು ಅಥವಾ ಫಿಶರೀಸ್‌ಗೆ ಸಂಬಂಧಪಟ್ಟಂತೆ ಇರಬಹುದು, ವಾಟರ್‌ಸಪ್ಲೈಗೆ ಸಂಬಂಧಪಟ್ಟಿದ್ದು ಇರಬಹುದು ಇವೆಲ್ಲವೂ ಕೂಡ ಓವರ್‌ರೈಡಿಂಗ್ ಎಫೆಕ್ಟ್ ಆಗತಕ್ಕದ್ದು ಇದೆಯೇ ಎಂದು ಸಂಶಯ ನನಗೆ ಇದೆ. ಏಕೆಂದರೆ ಒಂದು ಒಳ್ಳೆಯ ಕೆಲಸ ಮಾಡಬೇಕು ಎಂದಾಗ ಒಂದಕ್ಕೊಂದು ವಿರುದ್ಧ ಇರತಕ್ಕಂಥ ತದ್ವಿರುದ್ಧವಾಗಿ ಇರತಕ್ಕಂಥ ರೀತಿಯಲ್ಲಿ ಮಾಡುವುದಕ್ಕೆ ಹೋಗುವುದು ~~ಬೇಡ.~~ ಡಾ. ಮಲಕಾರೆಡ್ಡಿಯವರು ಕೆಲವು ಕಲಮುಗಳ ಬಗ್ಗೆ ಹೇಳಿದ್ದಾರೆ. ಅದೇನಾದರೂ ಒಂದು ಕೋರ್ಟಿನಲ್ಲಿ ಹೋಗಿಬಿತ್ತು ಎಂದರೆ, ಯಾರೋ ಒಬ್ಬ ರಿಟ್ ಹಾಕಿಬಿಟ್ಟ ಎಂದರೆ ನೀವು ಯಾವ ದಾರಿಯಲ್ಲಿ ಹೋಗಬೇಕಾಗುತ್ತದೆ ಅದಕ್ಕೆ ಅಡ್ಡಿ ಬರುತ್ತದೋ ಏನೋ ಎನ್ನುವ ಸಂಶಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಸರ್ಕಾರ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಬೇಕು. ತಾವೇನೋ ಒಳ್ಳೆಯ ಉದ್ದೇಶದಿಂದ ಈ ಕಾನೂನನ್ನು ತಂದಿದ್ದೀರಿ. ಈ ಉದ್ದೇಶ ಸರಿಯಾದ ದಾರಿಯಲ್ಲಿ, ದಿಕ್ಕಿನಲ್ಲಿ ಹೋಗಬೇಕಾದ ಕಾರಣದಿಂದ ಈ ಕಲಮುಗಳು ಏನೇನಿವೆ, ಜೊತೆಗೆ ಡಾ. ಮಲಕಾರೆಡ್ಡಿಯವರು ಕೂಡ ಏನೇನು ಹೇಳಿದ್ದಾರೆ ಅವುಗಳನ್ನು ಸರಿಪಡಿಸತಕ್ಕದ್ದು ಮತ್ತು ನಮ್ಮ ಅನುಮಾನ ಏನಿದೆ, ಅದನ್ನು ಬಗೆಹರಿಸತಕ್ಕಂಥ ಕೆಲಸವನ್ನು ತಾವು ದಯವಿಟ್ಟು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಈ ರಾಜ್ಯದ ರೈತನಿಗೆ, ಆತ ಯಾವುದೇ ಭಾಗದಲ್ಲಿ ಇರಬಹುದು. ಆ ರೈತನಿಗೆ ಒಂದು ಹನಿ ನೀರು ಕೂಡ ಸಿಕ್ಕಿದರೆ ಅದು ನನಗೆ ಸಂತೋಷ ತರತಕ್ಕದ್ದು. ಈ ದಿಕ್ಕಿನಲ್ಲಿ ಈ ಮಸೂದೆ ಕಿಂಚಿತ್ತಾದರೂ ಸಹಕಾರಿ ಆಗುವುದಾದರೆ ನಾನು ಅತ್ಯಂಥ ಸಂತೋಷದಿಂದ ಹೃತ್ಪೂರ್ವಕವಾಗಿ ಇದನ್ನು ಸ್ವಾಗತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಪ್ರಾಧಿಕಾರ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಇದು ನಿಜವಾಗಿಯೂ ಅತಿ ಮುಖ್ಯವಾಗಿ ಬೇಕಾಗಿರತಕ್ಕ ವಿಧೇಯಕ ಇವತ್ತು ಈ ವಿಧೇಯಕ ತರುವುದರಿಂದ ಅಥವಾ ಪ್ರಾಧಿಕಾರ ರಚನೆಯಿಂದ ನಾವು ತೃಪ್ತಿಪಡುವದಾಗಿಲ್ಲ. ಬಚಾವತ್ ತೀರ್ಪಿನ ಪ್ರಕಾರ, ಎರಡು ಸಾವಿರ ಇಸ್ವಿಯೊಳಗೆ ಸಮಗ್ರವಾಗಿ ಇದರ ಕಾರ್ಯಗಳನ್ನು ಮುಗಿಸಬೇಕಾಗಿದೆ. ನಾವು ಎಷ್ಟು ಹಣವನ್ನು ಒದಗಿಸುತ್ತೇವೆ ಎನ್ನುವುದರ ಮೇಲೆ ಹಾಗೂ ನಮ್ಮ ಚೈತನ್ಯ, ನಮ್ಮ ಧೈರ್ಯದ ಮೇಲೆ ಇದು ನಿಂತಿದೆ. ಸರ್ಕಾರ ಪ್ರಾಧಿಕಾರ

ರಚನೆ ಮಾಡಿ, ಸಮಿತಿ ರಚನೆ ಮಾಡಿ, ನಿಯಮಗಳನ್ನು ರಚನೆ ಮಾಡಿ, ಈ ಪ್ರಾಧಿಕಾರ ಹಣಕಾಸಿನ ತೊಂದರೆಯಿಂದ ಕುಂಟುತ್ತಾ ಹೋದರೆ, ನಾವು ಬಹಳ ಅಪಾಯಕ್ಕೆ ಸಿಕ್ಕುತ್ತೇವೆ. ಈಗಾಗಲೇ ಹೆಜ್ಜೆಹೆಜ್ಜೆಗೂ ಅಪಾಯದಲ್ಲಿ ಸಿಕ್ಕಿದ್ದೇವೆ. ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕಾವೇರಿ ಮತ್ತು ಕೃಷ್ಣಾ ಈ ಎರಡು ಪ್ರದೇಶಗಳ ಅಭಿವೃದ್ಧಿ ವಿಚಾರದಲ್ಲಿ ನಾವು ಮುಂದೆ ಮಾಡಬೇಕಾದ ಕಾರ್ಯಕ್ರಮಗಳ ಬಗ್ಗೆ ಸರ್ಕಾರದವರು ಶ್ವೇತಪತ್ರವನ್ನು ಹೊರಡಿಸಬೇಕು. ನಾವು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ, ಎಷ್ಟೆಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇನೆ, ಎಷ್ಟು ಹಣವನ್ನು ಪ್ರಾಮಾಣಿಕವಾಗಿ ಇಟ್ಟಿದ್ದೇವೆ, ನಮ್ಮಲ್ಲಿ ಬಂಡವಾಳ ಎಷ್ಟಿದೆ, ಇದು ನಮ್ಮ ಪ್ರಮುಖವಾದ ಪ್ರಶ್ನೆ. ಸುಮ್ಮನೆ ಬಂಡವಾಳವಿಲ್ಲದೆ, ಬಡಾಯಿ ಕೊಚ್ಚಿಕೊಂಡು, ಪ್ರಾಧಿಕಾರ ರಚನೆ ಮಾಡಿ, ಯಾವುದೇ ಕೆಲಸ ಕಾರ್ಯ ಆಗಲಿಲ್ಲವೆಂದು ಹೇಳಿದರೆ, ನಿಜವಾಗಿಯೂ ನಾವು ಅಪಾಯಕ್ಕೆ ಸಿಗುತ್ತೇವೆ. ಇವತ್ತು ತೆಲುಗು ಗಂಗಾ ಯೋಜನೆ, ಇದು ಈ ಸರ್ಕಾರ ಬಂದಾಗ ಆದುದಲ್ಲ, ಹಿಂದಿನ ಸರ್ಕಾರ ಇದ್ದಾಗ, ತೆಲುಗು ಗಂಗಾ ಯೋಜನೆಗೆ ಒಪ್ಪಿಗೆ ಕೊಟ್ಟರು. ನನಗನಿಸುತ್ತದೆ, ತೆಲುಗು ಗಂಗಾ ಯೋಜನೆಗೆ ಆಗಲೇ ಕರ್ನಾಟಕ ಸರ್ಕಾರ ತೀವ್ರವಾದ ಪ್ರತಿಭಟನೆ ಮಾಡಬೇಕಾಗಿತ್ತು. ಈ ತೆಲುಗು ಗಂಗಾ ಯೋಜನೆಗೆ ನಾವು ಒಪ್ಪಿಕೊಳ್ಳಬಾರದಿತ್ತು. ಅಂದಿನ ಮುಖ್ಯಮಂತ್ರಿ ಶ್ರೀಮಾನ್ ಎನ್.ಟಿ. ರಾಮರಾವ್ ಅವರ ಕೃಪೆಗೋಸ್ಕರ, ಅವರ ಸ್ನೇಹಕ್ಕೋಸ್ಕರ ಈ ತೆಲುಗು ಗಂಗಾ ಯೋಜನೆಗೆ ಒಪ್ಪಲಾಯಿತು. ಒಂದು ವೇಳೆ ಈ ರೀತಿ ನಮ್ಮ ಒಪ್ಪಿಗೆ ಇಲ್ಲದೇ ಅವರು ಕಾಲುವೆ ತೋಡುತ್ತಾ ಇರಲಿಲ್ಲ, ಈಗ ಅವರು ಕಾಲುವೆ ಮಾಡಿಕೊಳ್ಳುತ್ತಿದ್ದಾರೆ, ನಾವೇನು ಮಾಡುತ್ತಿದ್ದೇವೆ....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಹಿಂದಿನ ಸರ್ಕಾರವೂ ಒಪ್ಪಿಲ್ಲ, ನಾವೂ ಒಪ್ಪಿಲ್ಲ, ಅದರ ಬಗ್ಗೆ ಏಕೆ ಯೋಚನೆ.

ಚೇರ್ಮನ್ : ಏನು ಮಾಡಬೇಕಾಗಿತ್ತು ಎಂಬುದನ್ನೂ ಹೇಳಿ.....

ಶ್ರೀ ವಾಟಾಳ್ ನಾಗರಾಜ್ : ಅವರೂ ಒಪ್ಪಿಲ್ಲ, ತಾವೂ ಒಪ್ಪಿಲ್ಲ. ಆದರೂ ಅವರು ಕಾಲುವೆ ತೆಗೆಸುತ್ತಿದ್ದಾರೆ. ಅವರು ಕಾಲುವೆ ತೋಡುತ್ತಿದ್ದಾರೆ, ಇಲ್ಲಿ ನೀವು ಒಪ್ಪಿಲ್ಲವೆಂದು ಹೇಳಿದರೆ ಏನು ಬಂತು. ಅವರ ಕೆಲಸ ನಿಲ್ಲಿಸಿ, ಆ ಶಕ್ತಿ ನಿಮಗಿದೆಯೇ? ಇಲ್ಲ.......

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಏನು ಮಾಡಬೇಕಾಗಿತ್ತು ಎಂದು ಸಭಾಧ್ಯಕ್ಷರು ಕೇಳುತ್ತಿದ್ದಾರೆ, ತಾವು ಇಷ್ಟು ಮಾಡಬಹುದು. ನಾನು ಹೇಳಿದ್ದೇನೆ, ಎನ್.ಟಿ. ರಾಮರಾವ್ ಇದ್ದಾಗಲೂ ಹೇಳಿದ್ದೇನೆ. ಈ ಸರ್ಕಾರಗಳು ಹೇಳಲಿಲ್ಲ. ಮತ್ತೆ ನೀವೇನು ಹೇಳಬೇಕು, ನೀವು ಕಾಲುವೆ ಎಷ್ಟು ಬೇಕಾದರೂ ತೋಡಿಕೊಳ್ಳಿ, ಆದರೆ ಅದು ಒಣಗಿರುತ್ತದೆ ಎಂದು ಹೇಳಬೇಕು. ಇಲ್ಲಿ ನಿಮ್ಮ ಬಗ್ಗೆ ಗುಮಾನಿ ಇದೆ, ನಾನು ಹೇಳುತ್ತೇನೆ, ಅವರ ಭೂಮಿಯಲ್ಲಿ ಏನು ಬೇಕಾದರೂ ತೋಡಿಕೊಳ್ಳಲಿ. ಆದರೆ, ನೀವು ಒಂದು ಹನಿ ನೀರು ಬಿಡುವುದಿಲ್ಲವೆಂದು ಹೇಳಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಪ್ರೊಫೆಸರ್‌ರವರು ಗುರುತರವಾದ ವಿಷಯವನ್ನು ಹೇಳುತ್ತಿದ್ದಾರೆ, ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತೀರಿ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾವು ಪ್ರತಿಯೊಂದಕ್ಕೂ ಉತ್ತರ ಕೊಡಬೇಕೆಂದರೆ ಹೇಳುತ್ತೇವೆ. ಪ್ರೊ. ನಂಜುಂಡಸ್ವಾಮಿಯವರು, ಅವರ ವಿಶೇಷವಾದ ಅನಿಸಿಕೆಯನ್ನು ಹೇಳಿದ್ದಾರೆ. ಅದೇ ರೀತಿ ಸರ್ಕಾರ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆ, ತಾವೆಲ್ಲರೂ ಸಹಕಾರ ಕೊಡುತ್ತಿದ್ದೀರಿ, ನಾವು ಆ ರೀತಿ ಕೆಲಸ ಮಾಡೋಣ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಹಾಗೆಯೇ ಮಾನ್ಯ ಸಭಾಧ್ಯಕ್ಷರೇ, ತುಂಗಭದ್ರಾಕ್ಕೆ ಸಮಾನಾಂತರ ಕಾಲುವೆಯನ್ನು ಆ ಕಡೆಯಿಂದ ಕರ್ನಾಟಕದ ಗಡಿಯವರೆಗೆ ಅವರು ತೋಡಿ ಆಗಿದೆ. ಈಗ ನಾವು ಯೋಚನೆ ಮಾಡಿದ್ದೇವೆ, ಬಳ್ಳಾರಿ ತಾಲ್ಲೋಕಿನ ಆ ಕೊನೆಯ ಹಳ್ಳಿಯಿಂದ ನಾವು ಚಳುವಳಿ ಪ್ರಾರಂಭ ಮಾಡುತ್ತೇವೆ. ಅಲ್ಲಿಂದ ಒಂದು ಅಡಿ ಕರ್ನಾಟಕದ ಒಳಗೆ ನಾಳೆ ಬರಬಾರದು ಎಂದು ನಾವು ಚಳುವಳಿ ಪ್ರಾರಂಭ ಮಾಡುತ್ತಿದ್ದೇವೆ. ಅದರ ಬಗ್ಗೆ ಹೇಳುತ್ತಾರೆಯೇ ಕೇಳಿ ಅವರು. ಈಗಾಗಲೇ ಆ ಕಾಲುವೆ ಬಂದಿದೆ, ಕರ್ನಾಟಕದ ಗಡಿಯವರೆಗೆ ಅವರು ತೋಡಿ ಆಗಿದೆ

L.A. Vol- VII

ಪುಟ್ಟಪರ್ತಿಯಲ್ಲಿ ಕಿವಿಮಾತು ಆಗಿರುವುದು ಅದೇ ಸಂದರ್ಭದಲ್ಲಿ. ಇದರ ಬಗ್ಗೆ ನನಗೆ ಸ್ಪಷ್ಟವಾದ ಹೇಳಿಕೆ ಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಮಗೆ ನಾನು ಏನು ಹೇಳುತ್ತಿದ್ದೇನೆ ಎಂದರೆ ಇತಿಹಾಸದಲ್ಲಿ ತಮ್ಮನ್ನು ಆರೋಪಿ ಸ್ಥಾನದಲ್ಲಿ ಅಥವಾ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕೆಂದು ನಮ್ಮ ಉದ್ದೇಶ ಅಲ್ಲ. ಸ್ವಲ್ಪ ಎಚ್ಚರಿಕೆ ಕೊಡುತ್ತಿದ್ದೇವೆ. ನೀವು ಕರ್ನಾಟಕದ ನಾಲ್ಕೂವರೆ ಕೋಟಿ ಕನ್ನಡಿಗರ ಕೈಗೆ ತಿಪಟೂರು ಚಿಪ್ಪು ಕೊಡುವುದಕ್ಕೆ ಹೋಗಬೇಡಿ. ನಾಳೆ ಕೊಟ್ಟೀರಿ, ನಿಮ್ಮನ್ನು ನಂಬಿ ಜನ ಕುಳಿತಿದ್ದಾರೆ, ಅದು ಆಗಬಾರದು, ಎಷ್ಟೋ ಎಚ್ಚರಿಕೆಯನ್ನು ಈ ಸದನದಲ್ಲಿ ಕೊಟ್ಟಿದ್ದೂ ಆಯಿತೂ, ನ್ಯಾಯಿ ಮಂಡಳಿ ಬೇಡ ಎಂದದ್ದೂ ಆಯಿತು, ಕಾವೇರಿ ಬಗ್ಗೆ ಒಳಗೆ ಹೊರಗೆ ಇಡೀ ರಾಜ್ಯದ ಉದ್ದಗಲಕ್ಕೂ ಕೂಗಿದ್ದೂ ಆಯಿತು. ಕೊನೆಗೆ ನೀವು ಏನು ಮಾಡಿದಿರಿ, ಈ ಸದನದಲ್ಲೇ ನೀವು ನ್ಯಾಯಮಂಡಲಿ ಒಪ್ಪಿಕೊಂಡಿರಿ. ತಮಗೆ ನಾವು ಏನು ಹೇಳುತ್ತಿದ್ದೇವೆ ಎಂದರೆ ಸರ್ಕಾರದ ನಿಲುವಿನಲ್ಲಿ ರಾಜ್ಯದ ಜನತೆಗೆ ಅನ್ಯಾಯ ಆಗದ ರೀತಿಯಲ್ಲಿ ಎಚ್ಚರಿಕೆ ವಹಿಸಬೇಕು, ಎಚ್ಚರಿಕೆ ವಹಿಸುವುದರಲ್ಲಿ ತಾವು ಜಾಗೃತರಾಗಿರಬೇಕು. ಇದರ ಬಗ್ಗೆ ತಮ್ಮ ಬಂಡವಾಳ ಎಷ್ಟು? ಎಷ್ಟು ಖರ್ಚು ಮಾಡುತ್ತೀರಿ? ಈ ಪ್ರಾಧಿಕಾರ ರಚನೆಯಾಗುತ್ತಿದೆ, ಇದಕ್ಕೆ ಒಂದು ವರ್ಷಕ್ಕೆ ಇಷ್ಟು ಖರ್ಚು ಮಾಡುತ್ತೇವೆ ಎಂದು ಸೇರಿಸಿ ಇದರಲ್ಲಿ. ನಿಮ್ಮ ಪ್ರಾಧಿಕಾರದ ನಿಯಮದಲ್ಲಿ ಸೇರಿಸಿ, ನಾವು ಇಷ್ಟು ವರ್ಷದೊಳಗೆ ಪ್ರತಿ ವರ್ಷ ಇಷ್ಟು ಹಣವನ್ನು ಖರ್ಚು ಮಾಡೇ ಮಾಡುತ್ತೇವೆ ಎಂಬುದನ್ನು ನಮೂದಿಸಿ ನಾವು ವರ್ಷಕ್ಕೆ ಇಷ್ಟು ನೂರು ಕೋಟಿ ರೂಪಾಯಿಗಳನ್ನು ಇದಕ್ಕೆ ಖರ್ಚು ಮಾಡುತ್ತೇವೆ ಎಂದು ಹೇಳಿ, ಇದು ನಿಮ್ಮ ಕೆಲಸ, ಇದನ್ನು ತೋರಿಸಿ, ಇಲ್ಲಿ ನೀವು ಯಾರು ಯಾರನ್ನೋ ಹಾಕಿ ಬರೀ ರೂಪುರೇಷೆಗಳನ್ನು ಕೊಟ್ಟಿದ್ದೀರಿ, ಯವರೀತಿ ನಡೆಯಬೇಕು, ಯಾವರೀತಿ ಮಾಡಬೇಕೆಂದು ರೂಪುರೇಷೆಗಳನ್ನು ಕೊಟ್ಟಿದ್ದೀರಿ. ನಾನು ಹೇಳುತ್ತಿದ್ದೇನೆ ಎರಡು ಸಾವಿರದ ಇಸ್ವಿಯೊಳಗೆ ಕೃಷ್ಣಾ ಯೋಜನೆಯನ್ನು ಸಂಪೂರ್ಣವಾಗಿ ಮುಗಿಸತಕ್ಕಂಥ ಶಕ್ತಿ. ನಮಗೆ ಇದೆ ಎನ್ನುವುದಕ್ಕೆ ನೀವು ಈ ಒಂದು ಪ್ರಾಧಿಕರದಲ್ಲಿ ವರ್ಷಕ್ಕೆ ಇಷ್ಟು ಹಣ ಖರ್ಚು ಮಾಡುತ್ತೇವೆ ಎಂಬುದನ್ನು ಸ್ಪಷ್ಟವಾಗಿ ಹೇಳಿ ಬಿಡಿ. ಅದು ಇದರಲ್ಲಿ ಬಂದುಬಿಡಲಿ, ಏತಕ್ಕೆಂದರೆ ಕಾರ್ಯಾಲಯ ಒಂದು ಕಡೆ, ಸಭೆ ಒಂದು ಕಡೆ. ವ್ಯವಸ್ಥೆ ಒಂದು ಕಡೆ ಆದರೆ, ಹಣಕಾಸೇ ಇಲ್ಲ ಎಂದರೆ ಪರಿಸ್ಥಿತಿ ಸರಿಹೋಗುವುದಿಲ್ಲ ನಾಳೆ ನಿಮ್ಮ ಸರಕಾರ ಇರಬಹುದು ಇನ್ನೊಂದು ಸರಕಾರ ಬರಬಹುದು, ಅದೆಲ್ಲಕ್ಕೂ ಇದು ಮಾರ್ಗಸೂಚಿಯಾಗಲಿ, ಆದುದರಿಂದ ನಾನು ಸರಕಾರಕ್ಕೆ ಹೇಳುತ್ತಿದ್ದೇನೆ, ಒಂದು ವರ್ಷಕ್ಕೆ ನಾವು ಇಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎಂಬ ನಿರ್ಧಾರ ಕೈಗೊಳ್ಳಿ. ಇದರ ಜೊತೆಗೆ ಕೃಷ್ಣಾ ಪ್ರಾಧಿಕಾರ ಮಾಡಿಬಿಟ್ಟಿರಿ ಅದೇರೀತಿ ಕಾವೇರಿಗೂ ಪ್ರಾಧಿಕಾರ ಮಾಡಿ ಎಂಬ ಕೂಗೂ ಇದೆ. ಅದ್ದರಿಂದ ನೀವು ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯ ಇಲ್ಲ. ತಪ್ಪೇನೂ ಇಲ್ಲ ಕೃಷ್ಣಾ ಪ್ರಾಧಿಕಾರ ಮಾಡಿದ್ದೀರಿ, ಸಂತೋಷ ನೀವು ಕಾವೇರಿ ಬಗ್ಗೆಯೂ ಪ್ರಾಧಿಕಾರ ಮಾಡಿ. ಮಾಡಿಬಿಟ್ಟು ಅದರಲ್ಲಿ ಸಹ ಇದೇ ರೀತಿ ನಿಯಮಗಳನ್ನು ತಂದು ಅದಕ್ಕೂ ನೀವು ಇಷ್ಟಿಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎನ್ನತಕ್ಕಂಥಾ ಒಂದು ಧೈರ್ಯ, ಶಕ್ತಿ ಸ್ಥೈರ್ಯ ತೋರಿಸಿ, ಆಗ ಜನರಲ್ಲೂ ಒಂದು ನಂಬಿಕೆ ಬರುತ್ತದೆ. ಕೃಷ್ಣಾಕ್ಕೆ ಮಾಡಿದರು, ಕಾವೇರಿಗೆ ಏತಕ್ಕೆ ಮಾಡಲಿಲ್ಲ ಎಂಬ ಅನುಮಾನಗಳು ನಿಮ್ಮ ಮೇಲೆ ಉದ್ಭವವಾಗುತ್ತದೆ. ಕೆಟ್ಟಹೆಸರು ತೆಗೆದುಕೊಳ್ಳುವುದಕ್ಕೆ ಹೋಗುತ್ತೀರಿ. ಆದುದರಿಂದ ತಮಗೆ ನಾನು ಹೇಳುತ್ತಿದ್ದೇನೆ ಇದರ ಜೊತೆಗೇ ಕಾವೇರಿ ಪ್ರಾಧಿಕಾರ ಮಾಡಿ, ಸ್ವಾಗತ ಮಾಡುತ್ತೇವೆ, ಇವತ್ತು ಈ ಸಭೆಯಲ್ಲಿ ಮಾಡುವುದಕ್ಕೆ ಆಗಲಿಲ್ಲ ಎಂದರೆ, ಸುಗ್ರೀವಾಜ್ಞೆ ಮೂಲಕ ತಾವು ಕೂಡಲೇ ಮಾಡಿ, ನಿಮ್ಮನ್ನು ಜನ ಮೆಚ್ಚುತ್ತಾರೆ, ಜೊತೆಗೆ ಕಾವೇರಿಯ ಪ್ರಶ್ನೆ ನಮಗೆ ಸಂತೋಷವಾಗಿ ಮುಗಿದಿದೆ ಎಂದು ಯಾರೂ ಅಂದುಕೊಳ್ಳುವರಾಗೆ ಇಲ್ಲ, ನಮ್ಮ ಕರ್ನಾಟಕದ ಕನ್ನಡಿಗರ ತಲೆಯಮೇಲೆ ಕತ್ತಿ ಆಡುತ್ತಿದೆ, ಯಾವ ಗಳಿಗೆಯಲ್ಲಿ ನಮ್ಮ ಕತ್ತಿಗೆ ಆ ಕತ್ತಿ ಬೀಳುತ್ತದೋ ಗೊತ್ತಿಲ್ಲ, ಆದುದರಿಂದ ಎಚ್ಚರವಹಿಸಿ ನೀವು ಈ ಕಾರ್ಯವನ್ನು ಮಾಡಬೇಕು ಮತ್ತು ವಿರೋಧ ಪಕ್ಷದ ನಾಯಕರು ಏನು ಮಾತನಾಡಿದ್ದಾರೆ ಅದಕ್ಕೆ ನನ್ನದೂ ಒಂದು ಧ್ವನಿಯನ್ನು ಸೇರಿಸುತ್ತಿದ್ದೇನೆ. ಈ ಪ್ರಾಧಿಕಾರದ ರಚನೆ

ಮಂತ್ರಿಮಂಡಲದ ಉಪಸಮಿತಿ ಇದ್ದಹಾಗೆ ಇದೆ. 4 ಜನ ಮಂತ್ರಿಗಳು. ಮುಖ್ಯಮಂತ್ರಿಗಳು ಸೇರಿ ನೀವು ನೀವೇ ಇದರಲ್ಲಿ ಇದ್ದೀರಿ ಇದು ನಿಮ್ಮ ಮನೆ ಸ್ವಂತ ಸ್ವತ್ತು ಅಂತ ಹೇಳಿ ನೀವು ನೀವೇ ಮಾಡಿಕೊಂಡಿದ್ದೀರಿ. ಇದು ಸರಿಯಲ್ಲ ಆದ್ದರಿಂದ ಇದರಲ್ಲಿ ಎಲ್ಲರನ್ನು ಸೇರಿಸಿ ಇದನ್ನು ಸಮಗ್ರ ಕರ್ನಾಟಕ ರಾಜ್ಯದ ಎಲ್ಲಾ ಜನತೆಯ ಸ್ವತ್ತು ಎನ್ನತಕ್ಕಂಥಾದ್ದನ್ನು ಮಾಡಬೇಕಾದರೆ ಈ ಸದನದ ವಿರೋಧಪಕ್ಷದ ನಾಯಕರನ್ನೊಳಗೊಂಡು ಎಲ್ಲಾ ಪಕ್ಷಗಳ ಈ ಸದನದ ಮುಖಂಡರುಗಳನ್ನು ನೀವು ಅದರಲ್ಲಿ ಸೇರಿಸಿ, ಸೇರಿಸಿ ಒಂದು ವ್ಯವಸ್ಥಿತವಾದಂಥ ಪ್ರಾಧಿಕಾರವನ್ನು ತಾವು ಮಾಡಿ. ಪ್ರಾಧಿಕಾರ ನಿಜವಾಗಿಯೂ ಬಹಳ ಮುಖ್ಯವಾಗಿ ಆಗಬೇಕಾಗಿದೆ. ಅದರ ಬಗ್ಗೆ ನಿಜವಾಗಿ ನಾನು ಮುಕ್ತಕಂಠದಿಂದ ನಿಮ್ಮನ್ನು ಅಂಬಿನಂದಿಸುತ್ತೇನೆ. ಇದರ ಜೊತೆಗೆ ನಾನು ಮೊದಲೇ ತಮಗೆ ತಿಳಿಸಿದ ಪ್ರಕಾರ ತಾವು ಇದರಲ್ಲಿ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೆ ಈ ಕೂಡಲೇ ಕಾವೇರಿ ಬಗ್ಗೆ ಪ್ರಾಧಿಕಾರ ತರುವುದಕ್ಕೆ ಮಂತ್ರಿಮಂಡಲದ ಸಭೆಯಲ್ಲಿ ಅಥವಾ ನಿಮ್ಮ ಮಾತುಕತೆಯಲ್ಲಿ ತಂದುಬಿಡಿ, ಇಲ್ಲದಿದ್ದರೆ ಅಪವಾದಕ್ಕೆ ಗುರಿಯಾಗುತ್ತೀರಿ. ಈ ಮಾತನ್ನು ನಾನು ಹಿಂದೆಯೇ ಹೇಳಿದ್ದೇನೆ. ಸುಮ್ಮಸುಮ್ಮನೆ ನೀವು ಕೆಟ್ಟ ಹೆಸರು ತೆಗೆದುಕೊಂಡು ಅಪವಾದಕ್ಕೆ ಗುರಿಯಾಗತ್ತೀರಿ. ಆದ್ದರಿಂದ ಕೂಡಲೇ ತಂದು ಇದನ್ನು ಸಹ ಒಂದು ರೀತಿಯಾಗಿ ಪ್ರಾಧಿಕಾರ ಮಾಡಿ ಕಾವೇರಿಗೆ ಇಷ್ಟು ಹಣ ಕೃಷ್ಣಾಗೆ ಇಷ್ಟು ಹಣ ಅಂತ ಇರಬೇಕು. ನೀವು ಇಷ್ಟು ಬಂಡವಾಳ ಇಟ್ಟು ಮಾಡುತ್ತೇವೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿದರೆ, ನನಗೆ ಬಹಳ ಸಂತೋಷವಾಗುತ್ತದೆ ಅಂತ ಹೇಳಿ, ನಾನು ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

ಪ್ರೊ . ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) :— ಮಾನ್ಯ ಸಭಾಧ್ಯಕ್ಷರೇ ಈಗಾಗಲೇ ಈ ಮಸೂದೆ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಸವಿಸ್ತಾರವಾಗಿ ಮಾತನಾಡಿದ್ದಾರೆ. ಆ ಕಾರಣಕ್ಕಾಗಿ ನಾನು ಈ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟಂತೆ ತೆಲುಗು ಗಂಗಾ ಸಮಸ್ಯೆ ಆಗಲಿ ತುಂಗಭದ್ರಾ ಸಮಾನಂತರ ಕಾಲುವೆ ಸಮಸ್ಯೆ ಆಗಲಿ ಅಥವಾ ಸಂಪನ್ಮೂಲಗಳ ಸಂಗ್ರಹಣೆಯಲ್ಲಿ ಆಗಲಿ ಸರ್ಕಾರದಿಂದ ಕೆಲಸ ಮಾಡಿಲ್ಲದೆ ಇರುವ ಬಗ್ಗೆ ಆಗಲಿ ನಾನು ಮಾತನಾಡುವುದಿಲ್ಲ. ಆದರೆ ಈ ಮಸೂದೆಯಲ್ಲಿರತಕ್ಕಂಥ ಒಂದು ಅವಿವೇಕತನದ ಮಾತು ಅದರ ಬಗ್ಗೆ ಮಾತನಾಡಬೇಕು ಅಂತ ನಾನು ಇಚ್ಛೆಪಡುತ್ತೇನೆ. Statement of objects and Reasons ನಲ್ಲಿ Before 2000 A.D. ಅಂತ ಏತಕ್ಕೆ ಹಾಕಬೇಕಾಗಿತ್ತೋ ನನಗೆ ಗೊತ್ತಿಲ್ಲ. ಬಚಾವತ್ ತೀರ್ಪಿನಲ್ಲಿರಬಹುದು. ಆದರೆ ಯಾವುದೇ ನ್ಯಾಯಮಂಡಲಿ ತೀರ್ಪಿನಲ್ಲಿರುವ ಅವಿವೇಕಿ ಅಂಶಗಳನ್ನು ಒಪ್ಪುವಂತಹ ಅವಿವೇಕಿ ಸರ್ಕಾರ ನಾವು ಆಗಬಾರದು. ಇಂತಹ ಅವಿವೇಕತನ ಮಾಡುತ್ತಾರೆ, ಈ ನ್ಯಾಯಮಂಡಲಿಗಳು. ಆ ಕಾರಣ ನ್ಯಾಯಮಂಡಲಿಗಳನ್ನೇ ನಾವು ಒಪ್ಪಬಾರದು ಎಂದು ಕಾವೇರಿ ವಿವಾದದ ಪ್ರಾರಂಭ ಆದಾಗಿನಿಂದ ನಾನು ಈ ಸದನಕ್ಕೆ ಹೇಳುತ್ತಲೇ ಇದ್ದೇನೆ. ಆ ಕಾರಣ ಕೇವಲ ಕಾನೂನು ಕಲಿತ ನ್ಯಾಯಾಧೀಶರಿಗೆ ನೀರಾವರಿ ಬಗ್ಗೆ ಒಂದು ಚೂರು ಜ್ಞಾನ ಇರುವುದಿಲ್ಲ. ಆ ಕಾರಣಕ್ಕೆ ಕಾವೇರಿ ಮಧ್ಯಂತರ ತೀರ್ಪಿನಲ್ಲಿ ಒಂದು ಕ್ಯಾಲೆಂಡರ್ ಕೊಟ್ಟಿದ್ದಾರೆ ಆದರೆ ಮಳೆ ನದಿ ನೀರು ಇದು ಕ್ಯಾಲೆಂಡರ್ ಪ್ರಕಾರ ಹರಿಯುವಂತಹ ನೀರು ಅಲ್ಲ. ಆ ಕ್ಯಾಲೆಂಡರ್ ಇರುವಂತ ರೀತಿಯಲ್ಲಿಯೇ ಮಧ್ಯಂತರ ತೀರ್ಪನ್ನು ಜಾರಿಗೆ ಕೊಡುವುದಕ್ಕಾಗುವುದಿಲ್ಲ. ಆ ಕಾರಣ ಜಾರಿಗೆ ಕೊಡುವುದಕ್ಕೆ ಆಗದೆ ಇರುವಂತಹ ಯಾವುದಾದರೂ ಆಜ್ಞೆ, ಅದು ಎಂದು ಕರೆಯುವುದಕ್ಕಾಗುವುದಿಲ್ಲ ಇದು ಸಾಮಾನ್ಯ ಕಾನೂನು ಸಿದ್ಧಾಂತ. An order which cannot be impleme"ted, cannot be called an order. That is simple logic or Jurisprudence.

ಆ ಕಾರಣ ಬಚಾವತ್‌ರವರು ಇಷ್ಟು ಅವಿವೇಕಿತನವನ್ನು ತೀರ್ಪನ್ನು ನೀಡುವಾಗ ಮಾಡಿದ್ದಾರೆ. ಕ್ರಿ.ಶ. ಎರಡು ಸಾವಿರ ಇಸವಿಗೆ ಇವೆಲ್ಲ ಪೂರೈಸಬೇಕು. ಕೇವಲ ಕಾನೂನು ಕಲಿತವರಿಗೆ ನೀರಾವರಿ ಯೋಜನೆ ಅಂದರೆ ಏನು? ಎನ್ನುವ ಬಗ್ಗೆ ಕಲ್ಪನೆ ಇರುವುದಿಲ್ಲ. ಮತ್ತೆ ಅದಕ್ಕೆ ಎಷ್ಟೆಷ್ಟು ರಾಜಕೀಯ ಆರ್ಥಿಕ ಕಾರಣಗಳು ಪ್ರಭಾವ ಬೀರುತ್ತವೆ ಎನ್ನುವುದರ ಬಗ್ಗೆ ಕಲ್ಪನೆ ಇರುವುದಿಲ್ಲ ಒಂದು ನ್ಯಾಟನಿ

ಷೋನಲ್ಲಿ ಬೇಕಾದರೆ ಮದುವೆ ಆಗಿ ಮಗು ಆಗುತ್ತದೆ ಮೊಮ್ಮಗು ಆಗುತ್ತದೆ. 3 ಗಂಟೆ ಒಳಗಡೆ. ಆದರೆ, ಈ ಬಚಾವತ್ ನ್ಯಾಯಮಂಡಲಿ ಅಥವಾ ಈಗಿನ ಕಾವೇರಿ ನ್ಯಾಯಮಂಡಲಿಯಲ್ಲಿ ಇವರು ಸಿನಿಮಾ ಎಂದು ತಿಳಿದುಕೊಂಡಿದ್ದಾರೆ. ಮ್ಯಾಟನಿ ಷೋ, ನೀರಾವರಿ ವಿಷಯ ನಾನು ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ ಮಾನ್ಯ ಸಭಾಧ್ಯಕ್ಷರೇ ಉದಾಹರಣೆಗೆ ಕಳೆದ 10 ವರ್ಷಗಳಿಂದ ರಾಜಕೀಯ ಕಾರಣಗಳು ಎಷ್ಟೆಷ್ಟು ಅಡ್ಡಿಯಾಯಿತು ನೀರಾವರಿ ಯೋಜನೆಗಳಿಗೆ ಅನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ಈಗ 10 ವರ್ಷದಿಂದ ಕೇಂದ್ರದಲ್ಲಿ ಯಾವುದೋ ಪಕ್ಷದ ಸರ್ಕಾರ, ರಾಜ್ಯದಲ್ಲಿ ಯಾವುದೋ ಪಕ್ಷದ ಸರ್ಕಾರ. ಈ 10 ವರ್ಷಗಳಿಂದ ನಮ್ಮ ಕರ್ನಾಟಕ ಅನುಭವಿಸಿರುವುದು ಅದರ ಮೇಲೆಯೋ ಯೋಜನಾಮಂಡಲಿಯ ತೀರ್ಮಾನಗಳು, ಹಣಕಾಸಿನ ಮಂಡಲಿ ತೀರ್ಮಾನಗಳು, ಎಲ್ಲಾ ಅವಲಂಬಿತವಾಗಿವೆ. ಅದರ ಜೊತೆಗೆ ನಾವೇ ನೋಡಿದ್ದೇವೆ. ಕಳೆದ ಆರೇಳು ವರ್ಷದಿಂದ ಬರಗಾಲ ಇದೆ. ಬರಗಾಲದಿಂದ ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆ ಮೇಲೆ ಎಷ್ಟು ಪರಿಣಾಮ ಆಗುತ್ತದೆ? ಈ ಎಲ್ಲಾ ಕಾರಣಗಳಿಂದ ನನಗೆ ಚೆನ್ನಾಗಿ ಗೊತ್ತಿದೆ. ಕ್ರಿಸ್ತಶಕ 2000ನೇ ಇಸವಿಗೆ ಯಾವುದೇ ಸರ್ಕಾರ ಈ ಕೃಷ್ಣಾ ಜಲಾನಯನ ಯೋಜನೆಗಳನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲ. ಆ ಕಾರಣ ನಾವು ಉತ್ತರ ಕರ್ನಾಟಕದಲ್ಲಿ ಪ್ರತಿ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ರೈತರ ಮೂಲಕ ಠರಾವು ಮಾಡಿಸುತ್ತಿದ್ದೇವೆ. ಈ ಕ್ರಿಸ್ತಶಕ ಎರಡು ಸಾವಿರದ ಇಸವಿ ಏನಿದೆ, ಈ ಬಚಾವತ್ ವರದಿಯಲ್ಲಿ ಇದನ್ನು ನಾವು ಕರ್ನಾಟಕದ ರೈತರು ತಿರಸ್ಕರಿಸುತ್ತಿದ್ದೇವೆ ಎನ್ನುಲ ನಿರ್ಣಯವನ್ನು ಪ್ರತಿ ತಾಲ್ಲೂಕಿನಲ್ಲಿ ಮಾಡಿಸುತ್ತಿದ್ದೇವೆ. ಧೈರ್ಯ ಇದ್ದರೆ, ಸರ್ಕಾರ ಅಂಥಾ ಹೇಳಿಕೆಯನ್ನು ಇವತ್ತೇ ಕೊಡಬೇಕು. Otherwise you have no right to commit us for this date.

ನೀರಾವರಿ ವಿಷಯದಲ್ಲಿ ತಾರೀಖು, ಕ್ಯಾಲೆಂಡರ್ ಕೆಲಸ ಮಾಡಲ್ಲ. ಆ ಕಾರಣ ಈ ತಾರೀಖನ್ನು ನಿಮ್ಮ Statement of objects and Reasons ನಿಂದ ತೆಗೆದುಹಾಕಬೇಕು. ನಮ್ಮ ಹಕ್ಕನ್ನು ಮಾರಾಟ ಮಾಡುವುದಕ್ಕೆ ನಿಮಗೆ ಹಕ್ಕಿಲ್ಲ ಎರಡು ಸಾವಿರ ಇಸವಿಯೊಳಗೆ ಈ ಕೆಲಸ ಪೂರೈಸುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ. ಆದೂ ಎಂಥಾ ಇಂಜನೀಯರ್‌ಗಳನ್ನು ಇಟ್ಟುಕೊಂಡಿದ್ದೀರಿ? ಬರೀ ಸಿಮೆಂಟ್, ಕಬ್ಬಿಣ ತಿನ್ನೋ ಇಂಜಿನೀಯರ್‌ಗಳು ಇದ್ದಾರೆ ಅಲ್ಲಿ. ಯಾರೋ ಹೇಳುತ್ತಿದ್ದರು, ತೆಲುಗುಗಂಗಾ ಪ್ರಾಜೆಕ್ಟ್‌ಗೆ ನಮ್ಮ ಅಪ್ಪರ್ ಕೃಷ್ಣಾ ಸಿಮೆಂಟ್, ಕಬ್ಬಿಣ ಹೋಗುತ್ತವೆ ಒಂದೇ ಕಂಟ್ರಾಕ್ಟರ್ ಮೂಲಕ ಇದನ್ನೆಲ್ಲಾ ಸರಿಪಡಿಸುವಂಥ ಒಂದೂ ಪ್ರಯತ್ನ ನಡೆದಿಲ್ಲ. ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಸಿಮೆಂಟ್ ರಾಜಾಜಿನಗರದಲ್ಲಿ ಕೊತ್ತಂಬರಿ ಸೊಪ್ಪಿನ ತರಹ ಮಾರಾಟವಾಗುತ್ತಿದೆ. ಅರ್ಧ ಮೂಟೇ ಬೇಕಾ? ಕಾಲು ಮೂಟೆ ಬೇಕಾ? ಎಂದು ಕೇಳುತ್ತಿದ್ದಾರೆ. ಗೊತ್ತಿರಬೇಕು ನೀರಾವರಿ ಮಂತ್ರಿಗಳಿಗೆ. ಇವತ್ತೂ ತೋರಿಸುತ್ತೇನೆ ಬೇಕಾದರೆ. ಇಂಥಾ ಒಂದು ಸಿಬ್ಬಂದಿ ಇಟ್ಟುಕೊಂಡು 2 ಸಾವಿರನೇ ಇಸವಿಗೆ ಇದನ್ನು ಪೂರೈಸುವುದಿಲ್ಲ. ಮುಂದೆ ಏನಾಗುತ್ತೋ ನೋಡೋಣ Before 2000 A.D. ಅಂತ ಏನಿದೆ ಅದನ್ನು ದಯವಿಟ್ಟು ತೆಗೆದುಹಾರಿ. ಇದೊಂದು ಕೆಲಸ ಮಾಡಿದರೆ ಅಲ್ಲಿ 50 ಲಕ್ಷ ಎಕರೆ ಪ್ರದೇಶದ ನೀರಾವರಿ ರೈತರು ಏನಿದ್ದಾರೆ? ಅವರ ಹಕ್ಕನ್ನು ಅವರೇ ರಕ್ಷಣೆ ಮಾಡಿಕೊಳ್ಳುತ್ತಾರೆ. ಆ ಹಕ್ಕನ್ನು ಪರಭಾಷೆ ಮಾಡುವಂಥ ಅಧಿಕಾರ ಸರ್ಕಾರಕ್ಕಿಲ್ಲ ಅದೇ ಅವಶ್ಯಕತೆ ಕೂಡ ಇಲ್ಲ. ಈ ಮಸೂದೆ ಬಗ್ಗೆ ನಾನು ಹೇಳಬೇಕಾಗಿದ್ದುದು ಅದು ಒಂದೇ ವಿಚಾರ. ಮಿಕ್ಕ ತೆಲುಗು ಗಂಗಾ ಬಗ್ಗೆ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ ಅದಕ್ಕೆ ಮತ್ತೇ ನಾನು ಸೇರಿಸಬೇಕಾದ ಅವಶ್ಯಕತೆ ಇಲ್ಲ. ಆದರೆ ನೀರಾವರಿ ಮಂತ್ರಿಗಳಿಂದ ಮತ್ತು ಈ ಸರ್ಕಾರದಿಂದ ಏನು ಕೇಳತಕ್ಕಂಥ ಒಂದು ಆಶ್ವಾಸನೆ, ತೆಲುಗು ಗಂಗಾಗೆ ಏನು ನಾವು ಒಪ್ಪಿಗೆ ಕೊಟ್ಟಿದ್ದೇವೆ, 5 ಟಿ.ಎಂ.ಸಿ.ಎಫ್.ಟಿ. ನಮ್ಮಿಂದ 5ಟಿ.ಎಂ.ಸಿ.ಎಫ್.ಟಿ. ಯಷ್ಟು ಮಹಾರಾಷ್ಟ್ರದಿಂದ, 5 ಟಿ.ಎಂ.ಸಿ.ಎಫ್.ಟಿ ಯಷ್ಟು ಆಂಧ್ರದಿಂದ, ಮದ್ರಾಸಿಗೆ ಕೇವಲ ಕುಡಿಯುವ ನೀರಿಗೋಸ್ಕರ ಏನು 15 ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರು ಕೊಡಬೇಕಾಗಿದೆ. ಅದು ಕೇವಲ ವರ್ಷದಲ್ಲಿ 4 ತಿಂಗಳಲ್ಲಿ ಮಾತ್ರ. ಇದನ್ನು ಬಿಟ್ಟು ಒಂದು ಹನಿ ನೀರನ್ನು ನಾವು ಕೊಡುವುದಿಲ್ಲ ಎನ್ನುವ ಆಶ್ವಾಸನೆಯನ್ನು ಕರ್ನಾಟಕದ ಜನತೆ

ನಿಮ್ಮಿಂದ ಅಪೇಕ್ಷಿಸುತ್ತಿದ್ದಾರೆ. ಅದರ ಜೊತೆಗೆ ತುಂಗಭದ್ರ ಸಮಾನಾಂತರ ಕಾಲುವೆ ಏನಿದೆ ಇದು ಹಿಸು ಮಾತಿನಲ್ಲಿ ಜನಾರ್ಧನರೆಡ್ಡಿಯವರಿಗೆ ಆಶ್ವಾಸನೆ ಕೊಡುವಂಥ ಮನೆವಾರ್ತೆ ವ್ಯವಹಾರ ಅಲ್ಲ ಇದು. ಆ ಕಾರಣ ನಮ್ಮ ಗಡಿಯ ಎಲ್ಲಿಯವರೆಗೆ ಕಾಲುವೆ ತೋಡಿದ್ದಾರೆ ಅಲ್ಲಿಂದ ಈಚೆಗೆ ಒಂದು ಅಡಿ ನಾಲೆ ತೋಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ ಎನ್ನುವಂಥ ಆಶ್ವಾಸನೆ ಕರ್ನಾಟಕದ ಜನಕ್ಕೆ ಇವರು ಕೊಡಬೇಕು. ನಾನು ಅಷ್ಟೇ ಮಾತನಾಡುವುದು ನಮಸ್ಕಾರ ಸಭಾಧ್ಯಕ್ಷರಿಗೆ.

ಶ್ರೀ ನಾರಾಯಣ ರಾವ್ ಮನಳ್ಳಿ (ಬಿದರ್) ಸನ್ಮಾನ್ಯ ಸಭಾಧ್ಯಕ್ಷರೆ, ಕೃಷ್ಣಾ ಜಲಾನಯನ ಪ್ರಾಧಿಕಾರ ರಚಿಸಿ, ಸರ್ಕಾರದವರು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆಂದು ನಾನಂತೂ ಭಾವಿಸುತ್ತಿದ್ದೇನೆ. ಕರ್ನಾಟಕದ ಬಹಳಷ್ಟು ಜಿಲ್ಲೆಗಳು, ಈ ಜಲಾನಯನ ಪ್ರದೇಶದಿಂದ ಲಾಭಾನ್ವಿತವಾಗುವಂಥಾದ್ದು ನಮಗೆಲ್ಲರಿಗೂ ಗೊತ್ತಿರುವಂಥ ಸಂಗತಿ. ಪ್ರಾಧಿಕಾರ ಮಾಡಿದ್ದಾರೆ ಎಂದು ಇಷ್ಟಕ್ಕೇ ಸಮಾಧಾನ ಪಟ್ಟುಕೊಂಡರೆ ಬಹುಶಃ "ಉಪ್ಪರ್ ಶೇರ್‌ವಾನಿ ಅಂದರ್ ಪರೇಶಾನಿ" ಎಂಬ ಗಾದೆ ಮಾತಿನ ಹಾಗೆ ಆಗುತ್ತದೆ. ಮೇಲೆ ಮಾತ್ರ ಶೇರ್‌ವಾನಿ ಇರುತ್ತದೆ ಆದರೆ ಒಳಗೆ ಏನೇನೂ ಇಲ್ಲ ಎನ್ನುವ ಹಾಗೆ ಈ ಪ್ರಾಧಿಕಾರದ ಪರಿಸ್ಥಿತಿ ಆಗಬಾರದು. ಯಾಕೆಂದರೆ ಇದಕ್ಕೆ ಎಷ್ಟು ಹಣ ಬೇಕೋ, ಈ ಪ್ರಾಜೆಕ್ಟ್ ಮುಗಿಸುವ ಸಲುವಾಗಿ, ಆ ಹಣದ ವ್ಯವಸ್ಥೆ ಹೇಗೆ ಮಾಡುತ್ತೇವೆ ಎಂಬುದನ್ನು ಸರಿಯಾಗಿ ತೋರಿಸಿಲ್ಲ. ನಮ್ಮ ನಿಯೋಗವೊಂದು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದಾಗ ಕಾವೇರಿ ಮತ್ತು ಕೃಷ್ಣ ಜಲಾನಯನ ಪ್ರದೇಶದಲ್ಲಿ ಈ ಪ್ರಾಜೆಕ್ಟ್‌ಗಳು ಮುಗಿಯ ಬೇಕಾದರೆ ಪ್ರತಿವರ್ಷ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ನೀವು ಕಾದಿರಿಸಬೇಕೆಂದು ಹೇಳಿ, ನಾವು ಹೇಳಿದ್ದೇವೆ. ಹಾಗೆಯೇ ಇದಕ್ಕಾಗಿಯೇ ಒಬ್ಬ ಪ್ರತ್ಯೇಕವಾದ ಮಂತ್ರಿಯೂ ಇರಬೇಕು.

ಶ್ರೀ ಧರ್ಮಸಿಂಗ್ :— ಈ ಪ್ರಾಜೆಕ್ಟ್ ಮಾಡಬೇಕಾದರೆ ಪ್ರತ್ಯೇಕವಾಗಿ ಒಬ್ಬ ಸಚಿವರನ್ನು ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಮುಖ್ಯಮಂತ್ರಿಗಳು ಈಗಾಗಲೇ ಕೊಟ್ಟಿದ್ದಾರೆ.

ಶ್ರೀ ನಾರಾಯಣ ಮನಹಳ್ಳಿ :— ಹಾಗಾದರೆ ಮಾತ್ರ ಈ ಪ್ರಾಜೆಕ್ಟ್ ಸರಿಯಾಗಿ ಮುಗಿಯುವ ಹಾಗೆ ಆಗುತ್ತದೆ ಎಂದು ನಾನು ಭಾವಿಸುತ್ತೇನೆ. ಅದಲ್ಲದೆ ಈ ಕೃಷ್ಣಾ ಜಲಾನಯನ ಪ್ರಾಧಿಕಾರ ಆಯಿತು, ನಮ್ಮ ಬೀದರ್‌ನ ಸ್ವಲ್ಪ ಭಾಗವನ್ನು ಬಿಟ್ಟು ಬಿಟ್ಟಿದ್ದಾರೆ. ಅದು ಗೋದಾವರಿ ಜಲಾನಯನ ಪ್ರದೇಶದಲ್ಲಿ ಆ ಭಾಗ ಬರುತ್ತದೆ. ಅದಕ್ಕೋಸ್ಕರ ಮಾನ್ಯ ಸಚಿವರು ಕೌನ್ಸಿಲ್‌ನಲ್ಲಿ ಉತ್ತರ ಕೊಡುವಾಗ ಆ ಗೋದಾವರಿ ಜಲಾನಯನ ಪ್ರದೇಶದಲ್ಲಿ ನಾವು 22.37 ಸಿಎಫ್‌ಟಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕು, ಆದರೆ ನಾವು ಈಗ ಉಪಯೋಗ ಮಾಡುತ್ತಿರುವಂಥ ನೀರು ಎಷ್ಟು ಅಂದರೆ, ಕೇವಲ 6.1 ಸಿಎಫ್‌ಟಿ ಮಾತ್ರ. ಹೀಗಾಗಿ ಮುಂದೆ ನಾವು ಪೂರ್ಣ ನೀರನ್ನು ಬಳಸಿಕೊಳ್ಳಬೇಕಾದರೆ ತಾವುಗಳು ಕೊಟ್ಟಂಥ ಅಂಕಿಅಂಶಗಳ ಪ್ರಕಾರ 270 ಕೋಟಿ ರೂಪಾಯಿಗಳು ಅದಕ್ಕೆ ಬೇಕಾಗುತ್ತದೆ. ಅದು ಈಗಿನ ಅಂದಾಜಿನ ಪ್ರಕಾರ, ಮುಂದೆ ಅದು ಎಷ್ಟಾಗುತ್ತದೋ ಏನೋ ಗೊತ್ತಿಲ್ಲ ಆದ್ದರಿಂದ ಈ ಪ್ರಾಧಿಕಾರದ ಅಡಿಯಲ್ಲಿಯೇ ಕೃಷ್ಣಾ ಗೋದಾವರಿ ಬೇಸಿನ್ ಪ್ರಾಧಿಕಾರ ಎಂದು ಮಾಡಿದರೆ ಅದು ಚೆನ್ನಾಗಿ ಆಗುತ್ತದೆಂದು ನಾನು ಸಲಹೆಯನ್ನು ಕೊಡುತ್ತೇನೆ. ಗೋದಾವರಿ ಬೇಸನ್ ಕೂಡ ಇದರಲ್ಲಿ ಅಳವಡಿಸಿಕೊಂಡು, ಈ ಕೆಲಸವನ್ನು ತ್ವರಿತಗತಿಯಿಂದ ಮಾಡಬೇಕು, ಮತ್ತು ಹಣಕಾಸಿನ ವ್ಯವಸ್ಥೆಯನ್ನು ಇದಕ್ಕಾಗಿ ಪ್ರತ್ಯೇಕವಾಗಿ ಮಾಡಿ ಈ ಪ್ರಾಧಿಕಾರವನ್ನು ಯಶಸ್ವಿಯಾಗಿ ಕಾರ್ಯಾನುಷ್ಠಾನಗೊಳಿಸುತ್ತೇವೆ ಎಂಬಂಥ ಅಂಶವನ್ನು ಇದರಲ್ಲಿ ತೋರಿಸಿ, ಈ ಪ್ರಾಧಿಕಾರವನ್ನು ಮಾಡಿದ್ದಾಕ್ಕಾಗಿ ನಾನು ಸ್ವಾಗತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಹಿರಿಯೂರು) :— ಮಾನ್ಯ ಅಧ್ಯಕ್ಷರೇ ಈ ಸಭೆಯ ಮುಂದಿರುವ ಕೃಷ್ಣಾ ಪ್ರಾಧಿಕಾರ ಮಸೂದೆ ಏನಿದೆ ಅದನ್ನು ಸ್ವಾಗತಿಸಿ ಇದರ ಬಗ್ಗೆ ನಾಲ್ಕು ಮಾತುಗಳನ್ನು ಆಡಲು ಇಚ್ಛಿಸುತ್ತೇನೆ. ಮಾನ್ಯ ನಂಜುಂಡಸ್ವಾಮಿಯವರು ಮಾತನಾಡುತ್ತಾ Statement of object and Reason ಬಗ್ಗೆ ಒಂದು ಮಾತನ್ನು ಹೇಳಿದರು. ನಾನು ಅವರು ಈ ಬಿಲ್‌ನ ಬಗ್ಗೆ ಏನಾದರು ಹೇಳುತ್ತಾರೆ ಎಂದುಕೊಂಡಿದ್ದೆ. ಅವರು ರಾಜಕೀಯ ಉತ್ತರವನ್ನು ಹೇಳಿಬಿಟ್ಟರು. ನಾನು ಬಹಳ

ಕುತೂಹಲದಿಂದ ಈ ಮಸೂದೆಯನ್ನು ನೋಡಿದ್ದೇನೆ. ನಮ್ಮ ನೀರಾವರಿ ಮಂತ್ರಿಗಳು ಒಳ್ಳೆಯವರು, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಅಭಿಪ್ರಾಯ ಕೊಟ್ಟರೋ ಅದನ್ನು ನಾನು ಕೇಳಲಿಲ್ಲ. ಹಾಗೆಯೇ ಬೇರೆ ಮಾನ್ಯ ಸದಸ್ಯರುಗಳು ಕೂಡ ಈ ಬಗ್ಗೆ ಮಾತನಾಡಿದ್ದಾರೆ. ವಾಟಾಳ್ ನಾಗರಾಜ್ ಅವರು ಬೆಂಬಲ ಕೊಡುತ್ತೇವೆ ಎಂದು ಕೂಡ ಹೇಳಿದ್ದಾರೆ.

ಅಥಾರಿಟಿ ಎನ್ನುವ ಮಾತೇನಿದೆ, ಬೆಂಬಲ ಕೊಡಬೇಕು ಅನಿಸುತ್ತದೆ. ಆದರೆ ನಾನು ನೋಡುವಾಗ ಇದರಲ್ಲೇನಾದರೂ ಇದೆಯೇ, ಸರ್ಕಾರ 2000ನೇ ಇಸವಿಯೊಳಗೆ ಇದನ್ನು ಪೂರಾ ಮಾಡಬೇಕೆಂದು ಏನು ಉದ್ದೇಶ ಮಾಡಿಕೊಂಡಿದೆ ಅದಕ್ಕೆ ಅನುಕೂಲವಾದ ಯಾವುದಾದರೂ ಕಲಮು ಇದೆಯೇ ಎಂದು ನಾನು ನೋಡುತ್ತಿದ್ದೇನೆ. ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ, ಯಾವ ಕಲಮೂ ಇದರಲ್ಲಿಲ್ಲ. ಬಹಳ ಮಟ್ಟಿಗೆ ಹಿಂದೆ ಒಂದು ಅಥಾರಿಟಿ ಎಂದು ಇತ್ತು, ಅದು ದಾಮೋದರ್ ವ್ಯಾಲ್ ಅಥಾರಿಟಿ ಎಂದು ಇತ್ತು. ಅದನ್ನು ಮಾನಸ್ಸಿನಲ್ಲಿಟ್ಟುಕೊಂಡು ಇದನ್ನು ತಂದಿದ್ದಾರೆ. ಬಹಳಮಟ್ಟಿಗೆ ಇದನ್ನು ಯಾವ ಉದ್ದೇಶದಿಂದ ತಂದಿದ್ದಾರೆಂದು ಇದರಲ್ಲಿ ಏನೂ ಹೇಳಲಿಕ್ಕೆ ಸಾಧ್ಯವಿಲ್ಲ. ಒಂದು ಮಾತು ಬಿಟ್ಟರೆ In the statement of Objects and Reasons, it is stated, "it is proposed to establish the Krishna Basin Development Authority to expedite decisions and resolve problems like Land Acquisition. etc.,"

ಆ ಚಾರ್ಟನ್ನು ನಾನು ನೋಡಿದೆ, ತಾವು ಗಮನಿಸಬಹುದು ಲ್ಯಾಂಡ್ ಅಕ್ವಿಸೆಶನ್ ಬಾಸ್ಟರ್ 6 ಅಂತ ಕಾಣಿಸುತ್ತದೆ ಅದೂ ಕೂಡ ಅಷ್ಟು ಸಹಾಯವಾಗಿಲ್ಲ ಭೂಮಿಯನ್ನು ಈ ಕೆಲಸ ತ್ವರಿತವಾಗಿ ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಪ್ಲೈ ಮಾಡಿಕೊಳ್ಳುವುದಕ್ಕೆ ಆ ಕಲಮುಗಳು ಕೂಡ ಅನುಕೂಲವಾಗಿಲ್ಲ. ಇದು ಬಹಳಮಟ್ಟಿಗೆ ನನಗನ್ನಿಸುತ್ತದೆ ಒಂದು ಥರಾ ಅವಸರದಲ್ಲಿ ಹಡೆದ ಕೂಸಿದ್ದದ್ದಾಗಿದೆ ಇದು. ಸರಿಯಾಗಿ ಇದರಲ್ಲಿ ಏನಾಗಬೇಕು ಉದ್ದೇಶ ನಮಗೆ ಏನಿರಬೇಕು ಹಾಗೆಂದು ಗಮನಿಸಿಲ್ಲ. ಆಯಿತು, ಹಣ ಮೊಬಲೈಸ್ ಮಾಡಲು ಏನಾದರೂ ಇದೆಯೋ ಸಾಲ ತರಬಹುದೂ ಎಂದು ಒಂದು ಕಲಮು ಇದೆ, ಇನ್ನು ಬಾಕಿಯದೆಲ್ಲ ನಿಮ್ಮ ಹಣ ಅದಕ್ಕೆ ಹಾಕುತ್ತೀರಿ, ಕೇಂದ್ರದಿಂದ ಪ್ಲಾನ್‌ನಲ್ಲಿ ಬರುವ ಹಣವನ್ನು ಅದಕ್ಕೆ ಕೊಡುತ್ತೀರಿ ಇನ್ನು ಸಾಲ ಮಾಡ್ತೀವಿ ಅಂತ ಹೇಳಿದ್ದೀರಿ. ಸರ್ಕಾರದ ಗ್ಯಾರಂಟಿಯಿಂದ ಸಾಲ ಮಾಡೋದೇನು? ಸರ್ಕಾರವೇ ಮಾಡ್ತಾ ಇದ್ದುದೇನು? ಇವತ್ತು ಈ ಆಕ್ಟ್ ಬಂದಮೇಲೆ ನಮಗೆ ಮೇಜರ್ ಇರಿಗೇಷನ್ ಮಂತ್ರಿ ಬೇಕಾಗಿಲ್ಲ ಮೈನರ್ ಇರಿಗೇಶನ್ ಮಂತ್ರಿ ಬೇಕಾಗಿಲ್ಲ, ಇಷ್ಟಿದೆಯೇ ವಿನಃ ಇದರಲ್ಲಿ ಇನ್ನು ಅದಕ್ಕೆ ಸಹಾಯಕವಾಗುವುದು ಏನೂ ಇಲ್ಲ. ಇವತ್ತು 2000 ಇಸವಿಗೆ ಮಾಡ್ತೀವಿ ಅಂತ ದೊಡ್ಡ ಮಾತನ್ನು ಆಡಿದ್ದೇವೆ. ನನಗೆ ಕೃಷ್ಣಾ ಬೇಸಿನ್ ನದಿ ಬಗ್ಗೆ ಕೆಲವು ಘಟನೆಗಳು ಈ ಸದನದಲ್ಲಿ ಏನು ನಡೆದಿದೆ ಅದರ ನೆನಪಿದೆ. 1951ರಲ್ಲಿ ಕರ್ನಾಟಕಕ್ಕೆ ದೊಡ್ಡ ಅನ್ಯಾಯವಾಯಿತು. ಕಾರಣಾಂತರದಿಂದ ಕೃಷ್ಣಾ ಕಣಿವೆಯಲ್ಲಿರುವ ತುಂಗಾ, ಭದ್ರ ಎರಡು ಬಿಟ್ಟರೆ ಕೃಷ್ಣ ನಮ್ಮಲ್ಲಿರಲಿಲ್ಲ ಹೀಗಾಗಿ ದಿವಂಗತ ಕೆ.ಸಿ. ರೆಡ್ಡಿಯವರ ಕಾಲದಲ್ಲಿ 1951ರಲ್ಲಿ ಈ ವಿಚಾರ ಬಂದಾಗ ಅದರ ಕಡೆ ಅವರು ಗಮನ ಕೊಡದೆ ನಮಗೆ ಅದರ ನೀರು ಪಾಲು, ಅದು ಬಿಟ್ಟು ಹೋಗಿತ್ತು ಹೀಗಾಗಿ 1962ರಿಂದ ನಾವು ಹೋರಾಟ ಮಾಡಿ ಇವತ್ತು ನಾವು ದಿವಂಗತ ಹೆಚ್.ಎಂ. ಚನ್ನಬಸಪ್ಪನವರನ್ನು ನೆನಸಿಕೊಳ್ಳಬೇಕು ಅದರ ಪ್ರಯತ್ನದಿಂದ ನಮಗೆ ಕೃಷ್ಣ ಕಣಿವೆಯಲ್ಲಿ ಹೆಚ್ಚು ನೀರು ಬರುವ ಅನುಕೂಲವಾಯಿತು. ಆದರೆ ನಾವು ಮಾತಿನಲ್ಲಿ ಬಹಳ ಶೂರರು, ಕರ್ನಾಟಕದ ಜನ ಅದರಲ್ಲಿಯೂ ಜವಾಬ್ದಾರಿ ಸ್ಥಾನದಲ್ಲಿರುವವರು ನಾವೇನಿದ್ದೇವೆ ನಮ್ಮಂಥೋರೆಲ್ಲ ಬರೀ ಮಾತಾಡುವುದು, ಒಂದು ಹನೀನ್ನೂ ನಾವು ಬಿಡೋದಿಲ್ಲ ಅಂತ ಹೇಳ್ತೇವೆ ವಿನಃ ಮಳೆ ಬಂದು ನೀರು ಜಾಸ್ತಿಯಾದರೆ ನೀರು ಹರಿದುಕೊಂಡೇ ಹೋಗುತ್ತೆ. ಕಾವೇರಿ ಕಣಿವೇಲಿ ಅದನ್ನೇ ಮಾತಾಡಿದ್ದೇವೆ, ಕೃಷ್ಣ ಕಣಿವೇಲೂ ಅದೇ ಮಾತಾಡಿದ್ದೇವೆ ಹಿಂದಿದ್ದ ಸರ್ಕಾರ ತಪ್ಪು ಮಾಡ್ತು ಅಂತ ಆಪಾದನೆ ಮಾಡಿ ನಾವು ಬಂದುವು, ನಾವು ಬಂದ ಮೇಲೆ ಏನು ಮಾಡಿದ್ದೇವೆ? ಹೊಸದಾಗಿ ಎಷ್ಟು ಎಕರೆಗೆ ನೀರು ಕೊಡಲು ನಮಗೆ ಸಾಧ್ಯವಾಗಿದೆ? 2 ವರ್ಷದಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೇವೆ? ಈ ಸದನದಲ್ಲೇ ಒಂದು ಪ್ರಶ್ನೆ

ಬಂದಿತ್ತು, ಪ್ರಶ್ನೆಗೆ ಉತ್ತರವಾಗಿ 1557 ಕೋಟಿ ನಿಗದಿಯಾಗಿರುವ ಹಣದಲ್ಲಿ ಖರ್ಚು ಮಾಡಿರುವುದು 900 ಚಿಲ್ಲರೆ ಕೋಟಿ ಇನ್ನೂ 600 ಕೋಟಿಯಷ್ಟು ಹಣವನ್ನು ನಾವು ಖರ್ಚು ಮಾಡಲಿಲ್ಲ, ಈ ನೀರಾವರಿ ಅದರಲ್ಲೂ ಕೃಷ್ಣ ಕಣಿವೆಯಲ್ಲಿರುವ ಎಲ್ಲ ನದಿಗಳ ಕಾಮಗಾರಿಗಳಿಗೂ ಕೂಡ ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್‌ನ ಅನುಮತಿ ಇದೆ. ಅದರಿಂದ ಹಣ ತರುತ್ತೇವೆ. ಅದರಿಂದ ಹಣ ಬರುತ್ತದೆ. ರಾಜ್ಯ ಸರ್ಕಾರದ ಹಣವನ್ನು ನಾವು ಹೆಚ್ಚಿಗೆ ಖರ್ಚು ಮಾಡಬೇಕಾದ ಅಗತ್ಯವಿಲ್ಲ. ಕಾವೇರಿ ವ್ಯಾಲಿಯಲ್ಲಿ ಆ ಪರಿಸ್ಥಿತಿ ಇಲ್ಲ ನಮಗೆ. ವ್ಯಾಜ್ಯದ ಫಲವಾಗಿ ನಾವು ನಮ್ಮದೇ ಹಣವನ್ನು ಅಲ್ಲಿ ಖರ್ಚು ಮಾಡಿ ಕೆಲಸ ಮಾಡತಕ್ಕಂಥ ಪರಿಸ್ಥಿತಿ ಇದೆ. ಆದರೆ ಕೃಷ್ಣ ಬೇಸಿನ್‌ನಲ್ಲಿ ಆ ಪರಿಸ್ಥಿತಿ ಇಲ್ಲ. ಹೀಗಾಗಿರುವಾಗ ನಾವು ಜವಾಬ್ದಾರಿಯಿಂದ, ಕಳಕಳಿಯಿಂದ ಆ ಭಾಗದ ನೀರಾವರಿಯನ್ನು ಮಾಡುವುದಕ್ಕೆ ನಾವು ಪ್ರಯತ್ನ ಪಟ್ಟಿದ್ದೇವೆಯೇ ಹೇಗೆ ? ವಿಫಲರಾಗಿದ್ದೇವೆ, ಆಯಿತು, ಮುಂದೆ ಮಾಡಬೇಕು ಎಂದು ಹೇಳಿ ಮನಸ್ಸು ಮಾಡಬೇಕಾದರೆ ಇಂಥ ಒಂದು ಬಿಲ್ ಮಡಿಕೊಂಡು, ಆ್ಯಕ್ಟ್ ಪಾಸ್ ಮಾಡಿಕೊಂಡರೆ ಆಗುವುದಿಲ್ಲ. ಇದನ್ನು ಮಾಡುವುದಕ್ಕೆ ಏನು ಮಾಡಿದ್ದೇವೆ. ನಾನು ನೋಡುತ್ತಿದ್ದೇನೆ, ಬಹಳ ಕುತೂಹಲದಿಂದ ಪ್ರತಿ ಕಾಲಂನ್ನು ಪ್ರತಿ ಸೆಕ್ಷನನ್ನು ಕ್ಲಾಸನ್ನು ಕೂಡಾ ನೋಡಿದ್ದೇನೆ, ಯಾವುದಾದರೂ ಒಂದು ಕ್ಲಾಸನ್ನು ಮಾನ್ಯ ಮಂತ್ರಿಗಳು ತೋರಿಸಿದರೆ ನನಗೆ ಈ ಕ್ಲಾಸ್‌ನಿಂದ ಇದರಿಂದ ಸಹಾಯವಾಗುತ್ತದೆ, ಎರಡು ಸಾವಿರ ಇಸವಿಯೊಳಗೆ ಭದ್ರಾದಲ್ಲಿ, ತುಂಗಾದಲ್ಲಿ, ತುಂಗಭದ್ರಾದಲ್ಲಿ ಮತ್ತೆ ಅದಕ್ಕೆ ಸೇರತಕ್ಕಂಥ ಉಪನದಿಗಳಲ್ಲಿ ಯಾವುದೇ ಕಾಮಗಾರಿಗಳಲ್ಲಿ ನಾವು ಹೊಸದಾಗಿ ಸೇರಿಸಿಕೊಂಡು ಮಾಡಲಿಕ್ಕೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುವುದಾದರೆ ನಾನು ಬಹಳ ಸಂತೋಷಪಡುತ್ತೇನೆ. ಸ್ವಾಮಿ, ಇಲ್ಲಿ ಏನು ಇದೆ? ಈಗ ಇದನ್ನು ಮಾಡುತ್ತೀರಿ. ಈ ಎಲ್ಲಾ ಜವಾಬ್ದಾರಿಯನ್ನು ಅಥಾರಿಟಿಗೆ ವಹಿಸುತ್ತೀರಿ. ಇವತ್ತು ಮಾನ್ಯ ಮಲ್ಲಾರಿಗೌಡರ ಬದಲಾಗಿ ಒಂದು ಅಥಾರಿಟಿ ಬರುತ್ತದೆ. ಅದರ ಅಧ್ಯಕ್ಷರು ಮುಖ್ಯಮಂತ್ರಿಗಳಾಗುತ್ತಾರೆ. ಇವರು ಅದರ ಸದಸ್ಯರಾಗುತ್ತಾರೆ. ಮೈನರ್ ಇರಿಗೇಷನ್ ಮಂತ್ರಿಗಳು ಸದಸ್ಯರಾಗಿರುತ್ತಾರೆ, ಸೆಕ್ರೆಟರಿಯವರು ಸದಸ್ಯರಾಗಿರುತ್ತಾರೆ. ಅವರಿಗೆ ಈ ಎಲ್ಲಾ ಅಧಿಕಾರ ಬರುತ್ತದೆ. It becomes a Corporate body. ಅದರಲ್ಲಿದೆ. ಈ ಸಂಬಂಧಪಟಂಥ ಆಸ್ತಿಯೆಲ್ಲಾ ಅವರಿಗೆ ಹೋಗುತ್ತದೆ. ಎಲ್ಲಿಯವರೆಗೆ ಏತಕ್ಕೋಸ್ಕರ, ಉದ್ದೇಶ ಏನು ಎನ್ನುವುದನ್ನು ಹೇಳಿದ್ದಾರೆ. ನಾವು ಗಮನಿಸಬೇಕು ಸ್ವಾಮಿ. ಮತ್ತೆ ಪ್ಲಾನ್, ಇನ್‌ವೆಸ್ಟಿಗೇಷನ್ ಎಲ್ಲಾ ಕ್ಲಾಸ್ (7) ಆ ಕ್ಲಾಸ್ (8) ಆ ಕ್ಲಾಸ್ (7) ಕ್ಲಾಸ್ (8) ಕೂಡಾ ಓವರ್‌ಲ್ಯಾಪ್ ಆಗತಕ್ಕಂಥ ಕ್ಲಾಸ್‌ಗಳು. ಎಲ್ಲಿಯವರೆಗೆ ಎಂದು ಹೇಳಿದರೆ CADA- that become defunct. K.P.C. that becomes defunct. ಇವತ್ತು ಕೆಪಿಎನ್‌ಸಿ ಅಧ್ಯಕ್ಷರಾಗಿ ಮುಖ್ಯಮಂತ್ರಿಗಳೇ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಅನುಕೂಲ ಏನು ಇದೆ ಎಂದು ಹೇಳಿದರೆ ಅಥಾರಿಟಿ ಹೆಸರಿನಲ್ಲಿ ರೆಸಲ್ಯೂಷನ್ ಮಾಡಿದ್ದೇವೆ, ನಮಗೆ ಈ ಅಧಿಕಾರ ಬರುತ್ತದೆ ಎಂದು ಹೇಳಿ to mis-use the pouers to mis-sue the funds of the state.ಇದಕ್ಕೆ ಸಾಕಷ್ಟು ಅಧಿಕಾರವನ್ನು ಇಲ್ಲಿ ಪಡೆದುಕೊಂಡಿದ್ದಾರೆ, ಇದರ ವಿನಃ ನಾವು ಕೆಲಸವನ್ನು ಮಾಡುವುದಕ್ಕೆ ಏನೂ ಅಧಿಕಾರವನ್ನು ತೆಗೆದುಕೊಂಡಿಲ್ಲ. ನನಗನ್ನಿಸುತ್ತದೆ, ನಾನು ಮಾತನಾಡುವಾಗ, ಪದಗಳನ್ನು ಬಳಸುವಾಗ ಸ್ವಲ್ಪ ಜವಾಬ್ದಾರಿಯಿಂದಲೇ ಬಳಸುತ್ತಿದ್ದೇನೆ ಮಂತ್ರಿಮಂಡಲ ಇದರ ಬಗ್ಗೆ ತನ್ನ ಮನಸ್ಸು ಕೊಟ್ಟಿಲ್ಲ. ಇಡೀ ಮಂತ್ರಿ ಮಂಡಲವೇ ಇದರ ಬಗ್ಗೆ ಮನಸ್ಸು ಕೊಟ್ಟಿದ್ದರೆ ಮಂತ್ರಿ ಮಂಡಲದ ಸಭೆಯಲ್ಲಿ ಈ ಬಿಲ್ ಬಂದಾಗ ಪ್ರತಿಯೊಂದುಕಲಂನ್ನು ಅದು ಗಮನಿಸಿದ್ದರೆಇಂಥ ಒಂದು ದೊಡ್ಡಅನಾಹುತವಾಗುತ್ತಿರಲಿಲ್ಲ ಎಂದು ನನ್ನ ಭಾವನೆ. ನಾನು ಟೀಕೆ ಮಾಡಬೇಕು ಎಂದು ಮಾಡುತ್ತಿಲ್ಲ. ನಾಳೆ ಇಲ್ಲಿ ಬಂದಮೇಲೆ ಏನು ಪರಿಸ್ಥಿತಿಯಾಗುತ್ತದೆ ? you are going to handover everything.ಅದಕ್ಕೆ ಒಬ್ಬ ಎಕ್ಸಿಕ್ಯೂಟಿವ್ ಅಥಾರಿಟಿ ಮಾಡುತ್ತೀರಿ. ಅವರು ಯಾರು ಇರುತ್ತಾರೆ He is the secretary. ಎಲ್ಲಾ ಮಾಡಿದಮೇಲೆ ನಾವು ಏನಾದರೂ ಬಂದು ಸ್ವಾಮಿ ನಮಗೆ ಒಂದು ಕಾಮಗಾರಿಯಾಗಬೇಕು ಎಂದು ಹೇಳಿದರೆ you will

refer to the Authority ತಾವು ಗಮನಿಸಬೇಕು, ಎತಕ್ಕೆ ಎನ್ನುವ ಮಾತನ್ನು ಹೇಳುತ್ತಾ ಪ್ರಿಯಾಂಬಲ್‌ನಲ್ಲಿ ಹೇಳುತ್ತೀರಿ. "A Bill to provide for the constitution of an Authority for the expeditious utilisation of the Karntaka's share of waters of Krishana River and its tributaries, to facilitate speedy execution and maintenance of Irrigation power and other projects and works relating there to.." ಹಾಗೆ ಎಂದು ಅಂದಿದ್ದಾರೆ. ವಾಟರ್ ರೇಟ್ ಪ್ರಾವಿಷನ್ ಇದೆ. ವಾಟರ್ ರೇಟ್ ಲೆವಿ ಮಾಡತಕ್ಕಂಥದ್ದು ಇದೆ. ಇವತ್ತು ಇರಿಗೇಶನ್ ಆಕ್ಟ್ ಕೂಡ ಇದೆ. It is a comprehnsive Act also. ರೈತರಿಗೆ ಸಹಾಯಮಾಡಲಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಇದ್ದರೆ ಸಾಕು . ಇರಿಗೇಷನ್ ಆಕ್ಟ್‌ನಲ್ಲಿ ನೀರನ್ನು ರೈತನಿಗೆ ಕೊಡಲಿಕ್ಕೆ ಸಾಧ್ಯ ಇಲ್ಲದೆಹೋದಂತ ಪಕ್ಷದಲ್ಲಿ ಅವನಿಗೆ ವಾಟರ್‌ರೇಟ್ ಅನ್ನು ಮನ್ನಾ ಮಾಡುವುದಕ್ಕೆ ಅದರಲ್ಲಿ ಅವಕಾಶ ಇದೆ. ಕಟ್ಟಡ ಕಾಮಗಾರಿಗಳನ್ನು ಮಾಡುವುದಕ್ಕೆ ಅವಕಾಶ ಇದೆ. ಹೀಗಿರುವಾಗ stataement of objects and reasons ಎತಕ್ಕೋಸ್ಕರ ಮಾಡಿದ್ದೀರಿ? ಇದರಿಂದ ಎನು ಅನುಕೂಲ ಆಗುತ್ತದೆ? ನೀವು ಯಾವರೀತಿ ಈ ಕಾಮಗಾರಿಗಳನ್ನು ಮಾಡಿ ಮುಗಿಸಲಿಕ್ಕೆ ಸಾಧ್ಯವಾಗುತ್ತದೆ? ನಾನು ಅದಕ್ಕೆ ಕೇಳಿದ್ದು. ಎರಡು ವರ್ಷಗಳಲ್ಲಿ ಸರ್ಕಾರ ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ನಲ್ಲಿ ಸರ್ಕಾರ ಎನು ಪ್ರಗತಿಯನ್ನು ಸಾಧಿಸಿದೆ. ಈ ಮನೆಗೆ ಅಂಕಿ ಅಂಶಗಳ ಸಮೇತ ಇಂತಹ ಕಾಮಗಾರಿಗಳು ನಡದಿವೆ ಎನ್ನುವ ಬಗ್ಗೆ ನಮಗೆ ಮಾಹಿತಿ ಬೇಕಾಗುತ್ತದೆ. ನಾವು ಹಣವನ್ನು ಕೊಟ್ಟಿದ್ದವೆ. ನಿನ್ನೆ ಪ್ಲಾನಿಂಗ್ ಕಮೀಷನ್ ಪ್ರಶ್ನೆ ಬಂದಮೇಲ ಇವತ್ತು ಅರ್ಧ ಗಂಟೆಯ ಚರ್ಚೆಗೆ ಅದನ್ನು ಹಾಕಿದ್ದಾರೆ. ನಾವು ಅವಸರವಸರವಾಗಿ ಮಾಡಿ ಮುಗಿಸುತ್ತಿದ್ದೇವೆ. ಯೋಜನಾ ಬದ್ಧವಾದ ರೀತಿಯಲ್ಲಿ ನಾವು ಅಭಿವೃದ್ಧಿ ಆಗಬೇಕೆಂದು ಹೇಳಿ, ಪಂಚವಾರ್ಷಿಕ ಯೋಜನೆಗಳನ್ನು ಹಾಕಿ ಹಮ್ಮಿಕೊಂಡು ಅದಕ್ಕೆ ಹಣವನ್ನು ನಿಗಧಿ ಮಾಡಿ ಅದಕ್ಕೆ ಖರ್ಚು ಮಾಡುವುದಿಲ್ಲ ಅಂತ ಹೇಳಿದರೆ, ಕೇಂದ್ರದಿಂದ ನಮಗೆ ನೂರಕ್ಕೆ ನೂರು ಗ್ರಾಂಟ್ ಏನು ಬರುತ್ತದೆ ಅದು ಲ್ಯಾಪ್ಸ್ ಆಗುತ್ತದೆ ನಾವು ಲ್ಯಾಪ್ಸ್ ಆಗುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿದರೆ ಏನು ಪ್ರಯೋಜನ ಬಂತು? ಕೈಗಾರಿಕೆಗಳು ಅಭಿವೃದ್ಧಿ ಆಗಿಲ್ಲ. ಎಲ್ಲವನ್ನು ಅವನ ಗ್ರಾಮದಲ್ಲಿ ಅವನ ಮನೆಯ ಮುಂದೆ ಅವನು ಇರತಕ್ಕ ಪರಿಸರದ ಹತ್ತಿರ ಉದ್ಯೋಗವನ್ನು ಒದಗಿಸಿಕೊಡತಕ್ಕಂಥ ಒಂದೇ ಒಂದು ವ್ಯವಸ್ಥೆ ಅಂದರೆ ವ್ಯವಸಾಯ. ಆ ರೈತರಿಗೆ ಅತಿ ಮುಖ್ಯವಾಗಿ ಬೇಕಾಗಿರತಕ್ಕದ್ದು ಏನು ಅಂದರೆ ನೀರು ಒದಗಬೇಕು, ಸಕಾಲಕ್ಕೆ ಅವನಿಗೆ ಬಿಜಕ್ಕೆ ಗೊಬ್ಬರಕ್ಕೆ ಸಾಲವನ್ನು ತೀರಿಸುವುದಕ್ಕೆ ಅವನು ಬೆಳೆದಂಥ ವಸ್ತುಗಳನ್ನು ಸಂಗ್ರಹಣೆ ಮಾಡಿ ಇಡಲಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಹಣಬೇಕು. ಈ ಇನ್‌ಪುಟ್ಸ್‌ಗೆ ಹಣಬೇಕಾಗುತ್ತದೆ. ನಾವು ಕೃಷ್ಣಾ ಯೋಜನೆಯಲ್ಲಿಯೂ ಅಷ್ಟೇ ಕಾವೇರಿ ಯೋಜನೆಯಲ್ಲಿಯೂ ಅಷ್ಟೇ. ನಾವು ಎಷ್ಟು ಕಾಲಹರಣ ಮಾಡಿದ್ದವೆಂದು ಹೇಳಿದರೆ ಅದನ್ನು ಹೇಳತೀರದು. ನಾವು ಕಾಲಹರಣವನ್ನು ಮಾಡಿರತಕ್ಕದ್ದು ಅಕ್ಷಮ್ಯ ಅಪರಾಧ. ಹೀಗಿರುವಾಗ ನನಗೆ ಅನ್ನಿಸುತ್ತದೆ. ಇದೊಂದದು ಸಣ್ಣ ಆ್ಯಕ್ಟ್ ಇದರಲ್ಲಿ ಅಂಥದ್ದು ಏನೂ ಜಾಸ್ತಿ ಇಲ್ಲ. ಇದು 46 ಕಾಲಂ ಇರತಕ್ಕ ಆ್ಯಕ್ಟ್ ಆಗಿದೆ. ಯಾವ ಕಾಲಂನಲ್ಲಿ ನಿಮಗೆ ನಿಮ್ಮ ಉದ್ದೇಶವನ್ನು ಸಫಲ ಮಾಡುವುದಕ್ಕೆ ಅವಕಾಶ ಇದೆ.? you are just handing over all the the powers. ಇವತ್ತು ಇದೂ ಇಲ್ಲದೆ ಹೋಗಿದ್ದ ಪಕ್ಷದಲ್ಲಿ ನೇರವಾಗಿ ಈ ಸದನ ಸರ್ಕಾರವನ್ನು ಹೊಣೆ ಮಾಡುತ್ತಿತ್ತು. ನಾವು ಈ ಅಥಾರಿಟಿ ಅದಮೇಲೆ ಕೇಳುವ ಹಾಗಿಲ್ಲ. ಇವತ್ತು ಕೆಎಸ್‌ಆರ್‌ಟಿಸಿ ನಷ್ಟದಿಂದ ಹೇಗೆ ಮುಗ್ಗರಿಸುತ್ತಿದೆಯೋ ಹಾಗೆ ಈ ಕೆಲಸ ಮಾಡದೆ ಇದ್ದರೂ ಕೂಡ ಹಾಗೇ ಇಡಲಿಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ಯಾರ್‍ಯಾರು ಇದ್ದಾರೆಂಬುದನ್ನು ತಾವು ಗಮನಿಸಬೇಕು.

"The Authority shall consist of the following members namely-
(a) Chief Minister- Chairman, (b) Minister incharge of Major and Medium Irrigation-Vice chairman, (c) Minister Inchange of Minor Irrigation-Member, (d) Minister incharge of Agriculture-Member, (e) Minister

incharge of Revenue-Member (f) Minister incharge of Energy-Member (g) Finance Commissioner-Member and all those officers." what for? ಇವತ್ತು ಆ ಅಧಿಕಾರಿಗಳು ಇಲ್ಲವೋ? ಮೇಜರ್ ಇರಿಗೇಷನ್ ಮಂತ್ರಿಗಳ ಕೆಳಗಡೆ ಎಲ್ಲಾ ಅಧಿಕಾರಿಗಳು ಇಲ್ಲವೋ? ಇರಿಗೇಷನ್ ಆ್ಯಕ್ಟ್ ಇಲ್ಲವೋ? ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಅನುಕೂಲ ಇಲ್ಲವೋ? ಪ್ಲಾನ್ ಮಾಡುವುದಕ್ಕೆ ಅನುಕೂಲ ಇಲ್ಲವೋ? ಏತಕ್ಕೋಸ್ಕರ ಮಾಡುತ್ತಿದ್ದೀರಿ? ನೀವು ಇದನ್ನು ಯಾವ ದೃಷ್ಟಿಯಿಂದ ಮಾಡಿದ್ದೀರಿ? ಆದ್ದರಿಂದ ಮಂತ್ರಿಮಂಡಲ ಈ ಬಿಲ್ಲಿನ ಬಗ್ಗೆ ತನ್ನ ಮನಸ್ಸನ್ನು ಹರಿಸಿಲ್ಲ. ಸರಿಯಾಗಿ ನೋಡಿಲ್ಲ, ಮತ್ತು ಗಮನಿಸಿಲ್ಲ. ಕೆಲವು ದುರುಪಯೋಗ ಮಾಡಲಿಕ್ಕೆ ಸಾಕಷ್ಟು ಅನುಕೂಲಗಳು ಇದ್ದಿವೆ.

ಉದಾ: "Settlement of Disputes : The State Government may be notification in the Official Gazette constitute one or more special Courts for such area in Krishna Bosin or any part thereof as may be specified in the notification for the purpose of adjudication of scheduled disputes arising in relation to functioning of the Authoriity and trial of scheduled offences committed in the Krishna Basin. (2) A special court shall consist of a single Judge as the State Government may deem fit to appoint." ನಿಮ್ಮ ಡಿಸ್‌ಪ್ಯೂಟ್ ಎಲ್ಲಾ ಇಲ್ಲಿಗೆ ಬರುತ್ತದೆ. ನಿಮಗೆ ನ್ಯಾಯದೊರೆಯಬಹುದಾ? ಇವತ್ತು ಡಿಸ್‌ಪ್ಯೂಟ್ ಆ್ಯಕ್ಟ್ ಪ್ರಕಾರ ರೆಫರ್ ಮಾಡಲಿಕ್ಕೆ ಸಾಧ್ಯವಿದೆ. ಇಲ್ಲಿ Chairman himself can do all these things. ಆದ್ದರಿಂದ ಇದನ್ನು ಅವಸರದಲ್ಲಿ ತಂದಿದ್ದೀರಿ. ಲೋಕಸಭೆಯಲ್ಲಿ ರೂಲಿಂಗ್ ಪಾರ್ಟಿಯವರು ಅಮೆಂಡ್‌ಮೆಂಟ್ ಕೊಡುವುದಕ್ಕೆ ಅಲ್ಲಿ ಅವಕಾಶ ಇದೆ. ಆದರೆ, ಇಲ್ಲಿ ದುರಾದೃಷ್ಟವೆಂದರೆ, ನಮ್ಮ ರಾಜ್ಯದಲ್ಲಿ ಅಂತಹ ಒಂದು ಸಂಪ್ರದಾಯವನ್ನು ನಾವು ಹಾಕಿಕೊಂಡು ಬಂದಿಲ್ಲ. ಹೌಸ್‌ನಲ್ಲಿ ಬಂದಿರುವುದರಿಂದ ವಿರೋಧಪಕ್ಷದವರಿಗೆ ಕೂಡ ಅಮೆಂಡ್‌ಮೆಂಟ್ಸ್, ವಗೈರೆಗಳನ್ನು ಕಳುಹಿಸುವುದಕ್ಕೆ ಸಮಯ ಆಗಿಲ್ಲ. ಆದುದರಿಂದ ಈ ಬಿಲ್‌ನ್ನು ಹೀಗೆ ಪಾಸ್ ಮಾಡಿಕೊಡುವುದಕ್ಕೆ ಈ ಮನೆಯಲ್ಲಿ ಅವಕಾಶ ಕೊಡತಕ್ಕಂಥಾದ್ದು ಒಂದು ಒಳ್ಳೆಯ ಸಂಪ್ರದಾಯವಲ್ಲ. ನಾವು ಇಲ್ಲಿ ಏನು ಮಾಡುತ್ತೇವೆ? ಇದು ಕೋರ್ಟಿನಲ್ಲಿ ಸ್ಟ್ರಟಿನಿಗೆ ಹೋಗುತ್ತದೆ. ನಾವು ಇದರ ಬಗ್ಗೆ ಗಮನಹರಿಸಿದ್ದೇವೆಯೋ ಇಲ್ಲವೋ ಎನ್ನುವುದನ್ನು ಕೋರ್ಟಿನವರು ತೀರ್ಮಾನ ಮಾಡುತ್ತಾರೆ, ಈ ರಾಜ್ಯದ ಜನತೆ ತೀರ್ಮಾನ ಮಾಡುತ್ತಾರೆ. ನಾಳೆ ಅವರಿಗೆ ಏನಾದರೂ ತೊಂದರೆಯಾದರೆ ನಮ್ಮನ್ನು ಬಯ್ದುಕೊಳ್ಳುತ್ತಾರೆ. ಆಕಾಶವೇನು ಕೆಳಗೆ ಬೀಳುತ್ತದಾ? ಇವೊತ್ತು ಮಾಡದೆ ಹೋಗಿದ್ದ ಪಕ್ಷದಲ್ಲಿ ಇನ್ನು 15 ದಿವಸಕ್ಕೋ, ಇನ್ನೊಂದು ತಿಂಗಳಿಗೋ ಸೇರಿ ಪಾಸ್ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ನನಗನಿಸುತ್ತದೆ. ಇದರಲ್ಲಿ ಏನು ಕೆಲವು ಕಾನೂನುಗಳಿವೆ ಕ್ಲಾಸ್ (9) ಇದೆ. ಅದರಲ್ಲಿ ವಾಟರ್ ರೇಟ್ ಹಾಕುವುದಿದೆ. ಮಾನ್ಯ ಪ್ರೊ : ನಂಜುಂಡಸ್ವಾಮಿಯವರಿಗೆ ವಾಟರ್ ರೇಟ್ ಕಷ್ಟಗಳೇನೆಂದು ಗೊತ್ತಿದೆ. 1968ರಲ್ಲಿ ನಾವು ವಿರೋಧಪಕ್ಷದಲ್ಲಿದ್ದಾಗ ವಾಟರ್ ರೇಟ್ ಆ್ಯಕ್ಟ್ ಸರಿಯಿಲ್ಲವೆಂದು ಇಲ್ಲಿಯೇ ಕುಳಿತು ಧರಣಿ ಮಾಡಿದ್ದೆವು. ಬಹುಶಃ ಅಧ್ಯಕ್ಷರಿಗೆ ಗೊತ್ತಿರಬಹುದು. ನಾವು ದೊಡ್ಡ ರೈತರಿಗೋಸ್ಕರ ಧರಣಿ ಮಾಡಿದ್ದೆವು. ಇವೊತ್ತು ವಾಟರ್ ರೇಟ್ ಹಾಕಿದ್ದೀರಿ. 10ನೇ ಕ್ಲಾಜ್‌ನಲ್ಲಿ ಎಷ್ಟು ಹೇಗಿದೆಯೆಂದರೆ, ಇದರ ಬಗ್ಗೆ ಮಾನ್ಯ ಪ್ರೊಫೆಸರ್‌ರವರು ಅವಸರದಲ್ಲಿ ಇದನ್ನು ಗಮನಿಸಿದಂತೆ ಕಾಣಲಿಲ್ಲ. ಇದನ್ನು ಅವರು ಬಹಳ ಮಟ್ಟಿಗೆ ಪೂರ್ತಿಯಾಗಿ ಓದಿದ್ದರೆ, ಕಟುವಾಗಿ ಇದನ್ನು ಟೀಕೆ ಮಾಡುತ್ತಿದ್ದರು. ನಾವು ನೋಡಬೇಕು.

Supply of water, where supply has been stopped or reduced. ಎಂದು ಅದರ ಹೆಡ್‌ಲೈನ್ ಇದೆ.

"Supply of water where supply has been stopped of reduced: If with a view to operating its schemes, ಇದರೊಳಗೆ ಏನೇನು ಸ್ಕೀಮ್ಸ್ ಬರುತ್ತದೋ, ಅದರಲ್ಲಿ

"the authority has stopped or reduced the supply of water to any person for agricultural, power, irrigation, industrial, or domestic purposes which such person was prior to such stopped or reduction, enjoying by virtue of any prescriptive right, the Authority shall arrange such supply of water, on the same terms as before."

ಇದು ಸುಲಭವಾಗಿ ಡಿಸ್‌ಪ್ಯೂಟ್ ಆಗುತ್ತದೆಯೇ? ಇಷ್ಟು ಅಥಾರಿಟಿಯನ್ನು ನಾವು ಕೊಡುತ್ತೇವೆಂದು ಹೇಳಿದರೆ, ಹೇಗೆ? ಇವೊತ್ತು ತಾವು ಕ್ಲಾಜ್ (7) ಮತ್ತು (8) ಅನ್ನು ನೋಡಿದರೆ, ಅದರಲ್ಲಿ ಸಾಕಷ್ಟು ಓವರ್ ಲ್ಯಾಪ್ಸ್ ಆಗತಕ್ಕಂಥಾದ್ದು ಗೊತ್ತಾಗುತ್ತದೆ.

"**General Powers of the Authority** : To Construct or caused to be constructed, such dams, barrages, reservoirs, power houses, power structures, electrical transmission lines, sub-stations, navigation, irrigation drainage canals and such other works and structures as may be required."

ಈಗ ಸರ್ಕಾರದ ಅಧಿಕಾರಿಗಳು ನಾಳೆ ದಿವಸ ಈ ಅಥಾರಿಟಿ ಆದನಂತರ ಮುಖ್ಯಮಂತ್ರಿಗಳು ಅದರ ಚೇರ್ಮನ್ ಆಗಿ ಕೆಲಸ ಮಾಡುತ್ತಾರೆ. ನಾವು ಅವರನ್ನು ದಿವಸವೂ ಕೇಳುವುದಕ್ಕಾಗುವುದಿಲ್ಲ. ಒಂದು ರಿಪೋರ್ಟ್ ಕೊಡುತ್ತಾರೆ, ರಿಪೋರ್ಟ್ ಬರುವುದು ಗೊತ್ತಿದೆಯೆಲ್ಲಾ. 10 ವರ್ಷದ ಹಿಂದಿನ ರಿಪೋರ್ಟ್ ಈಗ ಬರುತ್ತಿರುತ್ತದೆ. ಆ ರಿಪೋರ್ಟನ್ನು ನಾವು ನೋಡುವುದಿಲ್ಲ, ಚರ್ಚೆಗೆ ತೆಗೆದುಕೊಳ್ಳುವುದಿಲ್ಲ, ಸ್ಕ್ರುಟನಿ ಮಾಡುವುದಿಲ್ಲ, ಅದು ಹಾಗೆಯೇ ಹೊರಟು ಹೋಗುತ್ತದೆ. ಆದುದರಿಂದ, ಮಾನ್ಯ ಮಂತ್ರಿಗಳ ಉದ್ದೇಶ ಏನಿದೆಯೆಂಬುದು ನನಗೆ ಗೊತ್ತಿಲ್ಲ. ಇದನ್ನು ಇವೊತ್ತೇ ಪಾಸ್ ಮಾಡಬೇಕೆಂದಿದ್ದಾರೋ ಏನೋ ನನಗೆ ಗೊತ್ತಿಲ್ಲ. ಏಕೆಂದರೆ, ನಾವೆಲ್ಲಾ ಸ್ವಲ್ಪ We were kept in darkness ಅಂತ ಹೇಳಿದರೆ ತಪ್ಪಾಗಲಾರದು. We ಎಂದು ಹೇಳಿದರೆ all the members of this a gust house. ಅವಸರವಾಗಿ ಇಲ್ಲದೆಹೋದರೆ ಬಹಳ ಮಟ್ಟಿಗೆ ಇದನ್ನು ಹಾಗೆಯೇ ವಿತ್‌ಡ್ರಾ ಮಾಡಿ, ಅದನ್ನು ಇಲ್ಲಿಯೇ ಉಳಿಸಿಕೊಂಡು, ಮುಂದೆ ನಾವು ಚರ್ಚೆ ಮಾಡಬಹುದು. ಇದನ್ನು ಚರ್ಚೆ ಮಾಡಬೇಕೆಂದು ಹೇಳಿದರೆ ಮಾನ್ಯ ಮಂತ್ರಿಗಳು ಇದ್ದಾರೆ. ಅವರು ಇದನ್ನು ಮಂಡನೆ ಮಾಡಿದ ನಂತರ ಇದು ಪಾಸ್ ಆಗಲೇಬೇಕೆಂದು ಹೇಳಿದರೆ ನಾವು ಕೈ ಎತ್ತುತ್ತೇವೆ, ಪಾಸ್ ಆಗುತ್ತದೆ. ಆದುದರಿಂದ, ತಮ್ಮ ಮುಖಾಂತರ ನಾನು ಮಾನ್ಯ ಮಂತ್ರಿಗಳಲ್ಲಿ, ಕೇಳಿಕೊಳ್ಳುತ್ತಿದ್ದೇನೆ. ಈ ಬಿಲ್ಲನ್ನು ಇನ್ನು ಸೂಕ್ಷ್ಮವಾಗಿ ಸ್ಕ್ರುಟನಿ ಮಾಡುವುದಕ್ಕೆ ಅವಕಾಶ, ಆಗತ್ಯವಿದೆ. ನನ್ನ ದೃಷ್ಟಿಯಲ್ಲಿ ಹೇಳಬೇಕೆಂದರೆ ಈ ಮಸೂದೆಯನ್ನು ತಂದದ್ದೇ ತಪ್ಪು. ಇದನ್ನು 2000 ಇಸವಿಯೊಳಗೆ ಮುಗಿಸಬೇಕೆಂದು ಸರ್ಕಾರದ ಘನ ಉದ್ದೇಶವೇನಿದೆ, ಅದಕೋಸ್ಕರ ಇದನ್ನು ತಂದಿದ್ದೇವೆಂಬ ಏನು ಉದ್ದೇಶ ಹೇಳಿದ್ದಾರೆ. In the Statement of Objects and reasons, that is the only reason that has been given. No other reason is given. ಅದರಲ್ಲೂ ಕೂಡ ಇವೊತ್ತು the Karnataka Power Corporation Act-that becomes defunct and the Cada Authorities Act-that becomes defunct.

In Clause 11(3) it says:

"Any dispute which arises between the Authority and the Boards or other bodies referred to in sub-section (1) in respect of directions issued to them, shall be determined by the Government whose decision shall be final."

In (4) it says:

"Notwithstanding anything in the command Areas. Development Act, 1980, in order to carry out the purposes of this Act, the Authority shall

have power to issue, directions from time to time to the command Areas Development Authorities at Bhadra project Tungabhadra project, Ghataprabha and Malaprabha Project Upper Krishna Project." ಇನ್ನು ಮುಂದೆಯೂ ಹೇಳಿದ್ದಾರೆ. ಆದುದರಿಂದ ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಇದು ಈವತ್ತೇ ಪಾಸ್ ಆಗದಿದ್ದರೆ ಅಂಥ ಅನಾಹುತ ಏನು ಆಗತಕ್ಕ ಪರಿಸ್ಥಿತಿ ಇಲ್ಲ. ನನಗೆ ಅವರಮೇಲೆ ನಂಬಿಕೆ ಇದೆ. He is a corscientious Minister. ಅವರಿಗೆ ಈಗ ಇರತಕ್ಕ ಕೆಲಸವನ್ನು ಮಾಡಿಸಲು ಶಕ್ತಿ ಇದೆ. ಈ ಆ್ಯಕ್ಟ್ ಬರಲಿಲ್ಲವೆಂದು ಅಪ್ಪರ್ ಕೃಷ್ಣಾಮೇಲ್ದಂಡೆ ಯೋಜನೆಯ ಕೆಲಸ ಮಾಡತಕ್ಕದ್ದು ನಿಲ್ಲುವುದಿಲ್ಲ. ಆದುದರಿಂದ ಅವರು ಇದರ ಬಗ್ಗೆ ಹೇಗೆ ವಿಚಾರ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಆದುದರಿಂದ ಅವರು ಇದರ ಬಗ್ಗೆ ಇನ್ನು ಯೋಚನೆ ಮಾಡಿ ಇವತ್ತು ಚರ್ಚೆಯಾಗಲಿ, ಮತ್ತೆ ಚರ್ಚೆಯನ್ನು ಮುಂದುವರೆಸೋಣ.

(ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು
(ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇದರ ಚರ್ಚೆಯನ್ನು ಮುಂದುವರೆಸೋಣ. ಇಲ್ಲದಿದ್ದರೆ ಒಂದು ಸಣ್ಣ ಸೆಲೆಕ್ಟ್ ಕಮಿಟಿಗಾದರೂ ಕಳಿಸಬಹುದು. ಸೆಲೆಕ್ಟ್ ಕಮಿಟಿಗೆ ಕಳಿಸಬೇಕೆಂದು ನಾನು ಹೇಳಿದರೆ ಈ ಬಿಲ್ ಬೇಕು ಎಂದು ಹೇಳಿದಂತಾಗುತ್ತದೆ, ನನ್ನ ವಿಚಾರಕ್ಕೂ ಅದಕ್ಕೂ ತಪ್ಪಾಗುತ್ತದೆ. ಆದರೆ ನಾನು ಈಗಲೂ ಕೂಡ ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ ಇದರ ಬಗ್ಗೆ ಚರ್ಚೆ ನಡೆಯುತ್ತಿರಲಿ ಮುಂದೆ ಸರ್ಕಾರ ವಿಚಾರ ಮಾಡಿ ಇದನ್ನು ವಾಪಸ್ ತೆಗೆದುಕೊಳ್ಳತಕ್ಕದ್ದು ಉತ್ತಮ ಎನ್ನತಕ್ಕ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :— ಉಪಾಧ್ಯಕ್ಷಣೀಯವರೇ, ಸನ್ಮಾನ್ಯ ರಂಗನಾಥ್‌ರವರು ಮಾತನಾಡುತ್ತಾ ನಾನು ಈ ಮಸೂದೆಯನ್ನು ಕೂಲಂಕುಷವಾಗಿ ನೋಡಿಲ್ಲ ಎನ್ನುವಂಥ ಮಾತನ್ನು ಹೇಳಿದರು, ಇದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಕೂಲಂಕುಷವಾಗಿ ನೋಡಲಿಲ್ಲ ಎನ್ನುವುದು ನಿಜ. ಅದಕ್ಕೆ ಕಾರಣವಿಷ್ಟೆ ನಾವು ಏನು ಮಾತನಾಡಿದರು ಕೂಡ ಇಲ್ಲಿ ಬಹುಮತದಿಂದ ಪಾಸ್ ಆಗುತ್ತದೆಯಲ್ಲ ಎನ್ನುವ ಧೋರಣೆಯಿಂದಾನೆ ಮನೆಯನ್ನು ಬಿಟ್ಟು ನಾನು ಬರುವುದು.

ಶ್ರೀ ಕೆ.ಹೆಚ್. ರಂಗನಾಥ್ :— ನೀವು ಮಾತನಾಡಿ ಹೇಳಿದರೆ That is a part of the evidence ಆಗುತ್ತದೆ. ಜನರಿಗೆ ಇದು ಸರಿಯಾಗಿದೆಯೇ ಇಲ್ಲವೇ ಎನ್ನುವುದಾದರೂ ಗೊತ್ತಾಗುತ್ತದೆ ಕೋರ್ಟ್ ಕೂಡ ತೀರ್ಮಾನ ಕೊಡುತ್ತದೆ. With that intention, it helps there.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :— ಸನ್ಮಾನ್ಯ ರಂಗನಾಥ್‌ರವರಿಗೆ ತಮ್ಮ ಮೂಲಕ ಹೇಳುವುದು, ನನಗೆ ಇವತ್ತು ಬಹಳ ಸಂತೋಷವಾಗಿದೆ, ಏಕೆಂದರೆ ಸನ್ಮಾನ್ಯ ರಂಗನಾಥ್‌ರವರಂಥ ಸದಸ್ಯರು ಈ ರೀತಿ ಭಾಗವಹಿಸುವುದಾದರೆ ನಮಗೂ ಒಂದು ರೀತಿಯ ಉತ್ಸಾಹ ಬರುತ್ತದೆ, ಕೂಲಂಕುಷವಾಗಿ ಓದಿಕೊಂಡು ಬರತಕ್ಕಂಥ ಒಂದು ನಡುವಳಿಕೆ ನಮಗೂ ಬರುತ್ತದೆ, ಇಲ್ಲದಿದ್ದರೆ ಇಲ್ಲಿ ಏನು ಬಂದು ಹೇಳಿದರೂ ಅದು ಪ್ರಯೋಜನವಿಲ್ಲ That is what is happening ಬಹುಮತವಿದೆ ಎಂದು ಏನು ಬೇಕಾದರೂ ಮಾಡಿಕೊಳ್ಳುತ್ತಾರೆಂದು ಹೇಳಿ ಅರ್ಧಂಬರ್ಧ, ಸುಮ್ಮನೆ ನೋಡಿಕೊಂಡು ಬರುವುದು. ಇದರಿಂದ ನಮಗೆ ಓದುವ ಅಭ್ಯಾಸವೇ ಹೊರಟು ಹೋಗುತ್ತಿದೆ. ಇನ್ನು ಎರಡೂವರೆ ವರ್ಷದಲ್ಲಿ ಏನಾಗುತ್ತದೋ ಗೊತ್ತಿಲ್ಲ. ಆ ಕಾರಣದಿಂದ ಸನ್ಮಾನ್ಯ ರಂಗನಾಥ್‌ರವರು ಏನು ಸಲಹೆಯನ್ನು ಮಾಡಿದ್ದಾರೆ ಆ ಪ್ರಕಾರ ತಮ್ಮ ಮೂಲಕ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ., ಇದನ್ನು ಕೂಲಂಕುಷವಾಗಿ ಚರ್ಚೆ ಮಾಡಲು ಒಂದು ಅವಕಾಶವನ್ನು ಮಾಡಿಕೊಡಿ.

ಶ್ರೀ ಕೆ.ಹೆಚ್. ರಂಗನಾಥ :— ಇಲ್ಲಿ ನಮ್ಮ ಸಭೆಯ ಸಂಪ್ರದಾಯ 1952ನೇ ಇಸವಿಯಿಂದ ನಾವು ತೆಗೆದು ನೋಡಿದರೆ ಅದರಲ್ಲೂ ಕೂಡ ಮಸೂದೆಗಳು ಬಿಲ್‌ಗಳು ಬಂದಾಗ ಪಕ್ಷಾತೀತವಾದ ವಿಚಾರ ಮಾಡಿದ್ದು ಉಂಟು. ಯಾವ ಕಲಮಿನದಾಗಲಿ ಯಾವುದರ ಬಗ್ಗೆಯಾಗಲಿ we can find lot of precedents here. ಆದ್ದರಿಂದ ಈಗ ನಾವು ಏನು ಕೆಲವು ಕಾರಣಗಳಿಂದ ಹೌಸ್‌ನಲ್ಲಿ ಪಾಸ್ ಮಾಡತಕ್ಕಂತಹ ಒಂದು ಹವ್ಯಾಸ ಮಾಡಿಕೊಂಡು ಬಂದಿರುವುದರಿಂದ ನಾವು ಪ್ರಸ್ತಾಪಮಾಡುತ್ತಿಲ್ಲ. ಆದರೆ ಸಂಪ್ರದಾಯವಿದೆ. ಇದನ್ನು ನಾವು ಒಂದು ಬಿಲ್ ಬಂತು ಎಂದರೆ ಅದನ್ನು ಆಡಳಿತ ಪಕ್ಷದಲ್ಲಿ ಕೂಡ ಅಲ್ಲಿ ಇರತಕ್ಕಂತಹವರು ತುಂಬಾ ಓದಿದ ಮೇಲೆ ಜನ ಏನು ಅಂದಾರು ಎಂದುಕೊಂಡು ಹೇಳಿ ವಿಚಾರ ಮಾಡಿ ಪಾಸ್ ಮಾಡುತ್ತಿದ್ದ ಅಂತ ಕಾಲ ಇತ್ತು. ಆದ್ದರಿಂದ ಹೇಳಬಾರದು ಎಂದು ಏನು ಇಲ್ಲ, ಒಂದು ವೇಳೆ ಹೇಳೋದು ಹೇಳಿ ಬಿಡುವುದು ಮುಂದ ಏನಾಗುತ್ತದೆದಂದು ನೋಡೋಣ.

ಶ್ರೀ ಬಸವರಾಜ ರಾಯರೆಡ್ಡಿ :— ಕೃಷ್ಣಾ ನದಿಯಿಂದ ಬಂದಿರುವವರು ಬಹಶಃ ಯಾರೂ ಮಾತನಾಡಿಲ್ಲ. ಬರೇ ಹಳೆಯ ಮೈಸೂರಿನವರೇ ಮಾತನಾಡಿದ್ದಾರೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) :— ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಕೃಷ್ಣಾ ಮೇಲ್ದಂಡೆ ಯೋಜನಾ ಪ್ರಾಧಿಕಾರ ರಚನೆಯ ಬಗ್ಗೆ ವಿಧೇಯಕವನ್ನು ಮಂಡಿಸಿದಂಥ ಈ ಒಂದು ವಿಧೇಯಕಕ್ಕೆ ನನ್ನ ಸಂಪೂರ್ಣವಾದಂಥ ಬೆಂಬಲವನ್ನು ವ್ಯಕ್ತಪಡಿಸಿ ಕೆಲವೊಂದು ವಿಚಾರಗಳನ್ನು ಇಲ್ಲಿ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಸಂದರ್ಭದಲ್ಲಿ ಪ್ರಮುಖವಾದಂಥ ಮಾನ್ಯ ಸದಸ್ಯರು ಈ ಕೃಷ್ಣಾ ಮೇಲ್ದಂಡೆಯ ಪ್ರಾಧಿಕಾರ ರಚನೆಯ ಬಗ್ಗೆ ಅದರ ಆಗು ಹೋಗುಗಳ ಬಗ್ಗೆ ಅದರ ಲೋಪದೋಷಗಳ ಬಗ್ಗೆ ಬಹಳ ಸ್ಪಷ್ಟವಾಗಿ ಇಲ್ಲಿ ವ್ಯಕ್ತಪಡಿಸಿದ್ದಾರೆ. ಅವರೆಲ್ಲರಿಗೂ ನನ್ನ ವೈಯುಕ್ತಿಕವಾದಂಥ ಅಭಿನಂದನೆಗಳನ್ನು ಹೇಳುತ್ತೇನೆ. ಕೃಷ್ಣಾ ಮೇಲ್ದಂಡೆಯ ಯೋಜನೆ ಬಹಳ ವರ್ಷಗಳಿಂದಲೂ ನಡೆಯುತ್ತಾ ಬಂದಿರತಕ್ಕಂತಹ ಒಂದು ದೊಡ್ಡ ಬೃಹತ್ ನೀರಾವರಿ ಯೋಜನೆ. 1969ನೇ ಇಸವಿಯಲ್ಲಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಈ ಒಂದು ದೊಡ್ಡ ಕಾರ್ಯಕ್ರಮವನ್ನು ಸರ್ಕಾರವು ಹಾಕಿಕೊಂಡು ನಡೆಯುತ್ತಾ ಬಂದಿದ್ದರೂ ಕೂಡ ಅದಷ್ಟು ಶೀಘ್ರವಾಗಿ ಈ ಒಂದು ನೀರಾವರಿ ಯೋಜನೆಯು ಆಗಬೇಕಾದರೆ ಅಲ್ಲಿರತಕ್ಕಂತಹ ಮಾನ್ಯ ಮಂತ್ರಿಗಳು, ಅಲ್ಲಿ ಇರತಕ್ಕಂತಹ ಅಧಿಕಾರಿಗಳು ಸರ್ಕಾರದವರು ಕೊಟ್ಟಂಥ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡಿಕೊಂಡು ಈ ನೀರಾವರಿ ಯೋಜನೆಗಳನ್ನು ಮುಗಿಸುವಂತಹ ಕೆಲಸವನ್ನು ಮಾಡುವುದು ಬಹಳ ಅಗತ್ಯವಾದುದು. ಉದಾಹರಣೆಗೆ ಹೇಳಬೇಕಾದರೆ ಕರ್ನಾಟಕ ರಾಜ್ಯವು ಇಂಜಿನಿಯರ್‌ಗಳ ತೌರಮನೆ ಇಲ್ಲಿ ಎಷ್ಟೊಂದು ಜನ ಇಂಜಿನಿಯರ್‌ಗಳು ಆಗಿ ಹೋಗಿದ್ದಾರೆ, ಜಗತ್ಪಸಿದ್ದ ಇಂಜಿನಿಯರ್ ಕೂಡ ಇಲ್ಲಿ ಆಗಿ ಹೋಗಿದ್ದಾರೆ. ವಿಶ್ವೇಶ್ವರಯ್ಯನವರಂತಹ ಮಹಾನ್ ಇಂಜಿನಿಯರ್‌ರವರು ನಮ್ಮ ರಾಜ್ಯದಲ್ಲಿ ಹುಟ್ಟಿ ಹೋದಂತಹ ವ್ಯಕ್ತಿಗಳಾದರೂ ಕೂಡ ನಾವು ಇವತ್ತು ಉದಾಹರಣೆಗೆ ತೆಗೆದುಕೊಳ್ಳುವುದಕ್ಕೆ ನಮ್ಮ ರಾಜ್ಯದಿಂದ ಮಹಾರಾಷ್ಟ್ರಕ್ಕೆ ಹೋಗಿ ಸಾಕಷ್ಟು ಜನ ಮುಖ್ಯ ಅಭಿಯಂತರಾಗಿದ್ದಾರೆ. ಸೂಪರಿಂಟೆಂಡೆಂಟಿಂಗ್ ಇಂಜಿನಿಯರ್ ಆಗಿದ್ದಾರೆ, ಹಲವಾರು ಇಲಾಖೆಗಳಲ್ಲಿ ಕೂಡ ನಮ್ಮ ಕರ್ನಾಟಕ ಇಂಜಿನಿಯರ್‌ಗಳು ಹೋಗಿ ಕೆಲಸಮಾಡುವಂತಹ ಒಂದು ಪ್ರಸಂಗವನ್ನು ನಾವು ನೋಡಿದ್ದೇವೆ. ಇಂತಹ ಪ್ರಸಂಗಗಳಲ್ಲಿ ನಮ್ಮಲ್ಲಿ ಇಷ್ಟೆಲ್ಲಾ ಸ್ಟಾಫ್ಸ್ ಇದ್ದು ತಂತ್ರಜ್ಞರನ್ನು ಇಟ್ಟುಕೊಂಡು ಎಲ್ಲಾ ರೀತಿಯ ಅನುಕೂಲಗಳು ನಮ್ಮಲ್ಲಿ ಇದ್ದರೂ ಕೂಡ ನಾವು ಇವತ್ತು ನೀರಾವರಿ ಯೋಜನೆಗಳಲ್ಲಿ ಹೆಚ್ಚಿನ ಫಲಪ್ರದವಾಗಿ ಸಾಧಿಸಿಲ್ಲ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇಂತಹ ಒಂದು ಸಂದರ್ಭದಲ್ಲಿ ಪ್ರಥಮ ಬಾರಿಗೆ ನಮ್ಮ ಕರ್ನಾಟಕದಲ್ಲಿ ಸಾಕಷ್ಟು ಸರ್ಕಾರಗಳು ಬರುತ್ತಿವೆ, ಹೋಗುತ್ತಿವೆ, ಮಂತ್ರಿಗಳು ಬರುತ್ತಾರೆ ಹೋಗುತ್ತಾರೆ. ಆದರ ಒಂದು ಕಮಿಟ್‌ಮೆಂಟ್ ಬೇಕು. ಶ್ರೀಮಾನ್ ರಂಗನಾಥ್‌ರವರು, ನಂಜುಂಡಸ್ವಾಮಿಯವರು ಹೇಳಿದ ಪ್ರಕಾರ ಮಂತ್ರಿ ಇದ್ದಂತಹ ಒಂದು ಸಂದರ್ಭದಲ್ಲಿ ಏನು ಮಾಡಬೇಕು ಏನು ಮಾಡಿದ್ದೇವೆ ಎನ್ನುವ ಮಾತು ಬರುತ್ತದೆ. ನಾವು ಇವತ್ತು ಶಾಸನಸಭೆಯಲ್ಲಿ ಏನು ಕೆಲಸ ಮಾಡುತ್ತಿದ್ದೇವೆ, ನನ್ನ ಮತ

ಕ್ಷೇತ್ರದಲ್ಲಿ ಏನು ಮಾಡಿದ್ದೇವೆ ಎನ್ನುವ ಬಗ್ಗೆ ಅದು ಮಹತ್ವವಿರುತ್ತದೆ. ಅದರ ಪ್ರಕಾರವಾಗಿ ಹೆಚ್ಚಿನ ಹಣವನ್ನು ನಿಗದಿತ ಪ್ರಮಾಣದಲ್ಲಿ ಮುಗಿಸಿ ಮಹಾರಾಷ್ಟ್ರದಲ್ಲಿರುವ ಮಾದರಿಯಲ್ಲಿಯೇ ಕರ್ನಾಟಕದಲ್ಲೂ ಕೂಡ ಒಂದು ಕಾರ್ಯಕ್ರಮವನ್ನು ತರುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು. ಈ ದಿಸೆಯಲ್ಲಿ ಇವತ್ತು ನಮ್ಮ ಭಾಗದಲ್ಲಿ ಹೇಳುತ್ತಿದ್ದೇನೆ "ಎಚ್ಚರವಿದ್ದರೆ ಈ ಹುಚ್ಚಿ ಕೂಡ ಅಡಿಗೆ ಮಾಡುತ್ತಾಳೆ" ಎನ್ನುವ ಗಾದೆ ಮಾತು ಇದೆ. ಅಂದರೆ ಹುಚ್ಚಿದ್ದರೂ ಕೂಡ ಅವಳಿಗೆ ಸರಿಯಾದ ರೀತಿಯಲ್ಲಿ ನಾವು ಸಾಮಾನು ಕೊಟ್ಟರೆ ಒಳ್ಳೆಯ ರೀತಿಯಲ್ಲಿ ಅಡಿಗೆ ಮಾಡಬಹುದು ಎನ್ನುವ ಮಾತನ್ನು ಹೇಳಿದಾಗ ನಮ್ಮಲ್ಲಿ ನೀರಾವರಿಗಾಗಿ ಹೈದರಾಬಾದ್ ಕರ್ನಾಟಕದಲ್ಲಿ ಬರತಕ್ಕಂತಹ ಸಾಕಷ್ಟು ಮಧ್ಯಮ ನೀರಾವರಿ ಯೋಜನೆಗಳು ಇರಬಹುದು, ಬೃಹತ್ ಪ್ರಮಾಣದ ನೀರಾವರಿ ಯೋಜನೆಗಳು ಇರಬಹುದು, ಅದೆಲ್ಲದಕ್ಕೂ ನಾವು ಹಣಕಾಸಿನ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಒದಗಿಸಲಿಕ್ಕೆ ಆಗಲಿಲ್ಲ. ಈ ಕಾರಣಕ್ಕಾಗಿ ಇವತ್ತು ನಾವು ಎಲ್ಲಾ ನಮ್ಮ ನೀರಾವರಿ ಯೋಜನೆಗಳನ್ನು ಅಪೂರ್ಣಗೊಳಿಸುತ್ತಿದ್ದೇವೆ. ನಾನು ವಿಷಯಗಳನ್ನು ಸಂಕ್ಷಿಪ್ತವಾಗಿಯೇ ಹೇಳುತ್ತಿದ್ದೇನೆ. ಕೃಷ್ಣಾ ಬೇಸಿನ್ ಪ್ರಾಧಿಕಾರದ ಬಗ್ಗೆ ಮಾನ್ಯ ಸದಸ್ಯರುಗಳು ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಅದರೂ ನಾನು ಮಾನ್ಯ ಮಂತ್ರಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳೂ ಕೂಡ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕು. ಪಿ.ಡಬ್ಲ್ಯು.ಡಿ. ಮಂತ್ರಿಗಳ ಪೈಕಿ ಯಾರು ನಮ್ಮ ರಾಜ್ಯದಲ್ಲಿ ಉತ್ತಮ ಕೆಲಸವನ್ನು ಮಡಿದ್ದಾರೆಂದರೆ ಚನ್ನಬಸಪ್ಪನವರು ಎಂದು ಅವರ ಹೆಸರನ್ನು ಹೇಳುತ್ತಾರೆ. ಅದೇ ರೀತಿ ಶ್ರೀಮಾನ್ ಮಲ್ಲಾರಿಗೌಡ ಪಾಟೀಲರು ನೀರಾವರಿ ಖಾತೆಯನ್ನು ತೆಗೆದುಕೊಂಡಮೇಲೆ ಸರ್ವ ರೀತಿಯಲ್ಲೂ ಸಮರ್ಪಕವಾದಂಥ ಕೆಲಸ ಮಾಡುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಅವರು ಪ್ರಥಮ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ಅವರು ಹೇಳುತ್ತಿದ್ದರು. ಈ ಪ್ರಾಧಿಕಾರವನ್ನು ನಾವು ಕಾನೂನು ಬದ್ಧವಾಗಿ ಮಾಡಿದರೂ ಮುಂದೆ ಕೆಲಸ ಆಗುತ್ತದೋ, ಹೋಗುತ್ತದೋ ಎನ್ನತಕ್ಕ ಅಭಿಪ್ರಾಯ ಬಂದಾಗ ಅದು ಏನೇ ಆಗಲಿ ಮನಸ್ಸಿನಲ್ಲಿರತಕ್ಕ ಒಂದು ವಿಲ್ ಪವರ್ ಏನಿದೆ ಅದರಿಂದ ನಾವು ಈ ಕೆಲಸವನ್ನು ಮಾಡುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗುತ್ತದೆ, ಎನ್ನತಕ್ಕದ್ದು ಸಹಜ. ಇವತ್ತು ನೀರಾವರಿ ಯೋಜನೆಗಳು ಆಗಬೇಕಾದರೆ ಟೈಂ ಬಾಂಡ್ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಎರಡನೆಯದಾಗಿ, ಪ್ರಾಮಾಣಿಕ ಅಧಿಕಾರಿಗಳನ್ನು ಈ ಇಲಾಖೆಯಲ್ಲಿ ಹಾಕಬೇಕು. ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಹೇಳಬೇಕೆಂದರೆ, ಮಾನ್ಯ ಸದಸ್ಯರಾದ ರಂಗನಾಥ್‌ರವರು, ಮತ್ತು ಮಾನ್ಯ ನಂಜುಂಡಸ್ವಾಮಿಯವರೂ ಹೇಳಿದಂತೆ ಅಲ್ಲಿರತಕ್ಕ ಸಿಮೆಂಟ್ ಇರಬಹುದು, ಸ್ಟೀಲ್ ಇರಬಹುದು ಅದನ್ನು ಕ್ಷಿಪ್ರಗತಿಯಿಂದ ನಾವು ಮಾಡಬೇಕಾಗುತ್ತದೆ. ಇದನ್ನು ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ತಾವು ಈ ಸದನದ ಒಂದು ಸಮಿತಿಯನ್ನು ಮಾಡಿ ಆ ಪ್ರಾಜೆಕ್ಟ್‌ಗೆ ಭೇಟಿಯನ್ನು ಕೊಟ್ಟರೂ ಕೂಡ ಅಲ್ಲಿ ನಡೆದಿರತಕ್ಕ ಅಕ್ರಮಗಳನ್ನು ನೋಡಿದರೆ ನಮಗೆ ಒಂದು ರೀತಿ ಭಾವನೆ ಹುಟ್ಟುತ್ತದೆ. ಇದಕ್ಕೆ ಸರ್ಕಾರದವರು ಇಷ್ಟೊಂದು ಹಣವನ್ನು ಕೊಡುತ್ತಾರೆ. ವಿಶ್ವಬ್ಯಾಂಕ್‌ನವರೂ ದುಡ್ಡು ಕೊಡುತ್ತಾರೆ, ಇಷ್ಟೆಲ್ಲಾ ದುಡ್ಡು ಕೊಟ್ಟರೂ ಕೂಡ ನೀರಾವರಿ ಕಾಮಗಾರಿಗಳಿಗೆ ಹಣ ಖರ್ಚಾಗದೆ ಕೇವಲ ಅಧಿಕಾರಿಗಳ ಕೈಗೆ ಸಿಕ್ಕಿ ಆ ನೀರಾವರಿ ಯೋಜನೆಗಳು ಹಾಳಾಗಿ ಹೋಗತಕ್ಕ ಪರಿಸ್ಥಿತಿ ಬಂದಿದೆ. ಅಂಥ ಅಧಿಕಾರಿಗಳ ಮೇಲೆ ಸರ್ಕಾರದವರು ಹತೋಟಿಯನ್ನು ಇಟ್ಟುಕೊಂಡು ಕಠಿಣವಾಗಿ ಕ್ರಮ ತೆಗದುಕೊಳ್ಳಬೇಕು. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅಂಥ ಭ್ರಷ್ಟ ಅಧಿಕಾರಿಗಳು ನೀರಾವರಿ ಯೋಜನೆಗಳಲ್ಲಿ ಇರುವುದರಿಂದ ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅದು ಕಾವೇರಿ ಯೋಜನೆ ಇರಬಹುದು ಕೃಷ್ಣಾ ಬೇಸಿನ್ ಇರಬಹುದು, ಅಥವಾ ಬೇರೆ ಯಾವುದೇ ಯೋಜನೆ ಇರಬಹುದು, ಅವುಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮಗಿಂತ ಹಿಂದೆ ಬಿದ್ದಿದ್ದಂಥ ಹರ್ಯಾಣ, ಪಂಜಾಬ್ ರಾಜ್ಯಗಳು ಇಡೀ ದೇಶದಲ್ಲೇ ಇವತ್ತು 2ನೇ ಸ್ಥಾನವನ್ನು ಪಡೆದಿದೆ. ನೀರಾವರಿ ಯೋಜನೆಗಳಲ್ಲಿ ಅಷ್ಟು ಮುಂದೆ

ಬಂದಿದೆ. ಅದೇ ರೀತಿ ನಮ್ಮ ಕರ್ನಾಟಕ ರಾಜ್ಯವನ್ನೂ ಮಾಡಬೇಕು. ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಸ್ವಪ್ರೇರಣೆಯಿಂದ ತಾವು ಏನು ಈ ವಿಧೇಯಕವನ್ನು ತಂದಿದ್ದಾರೆ ಇದರ ಬಗ್ಗೆ ಒಳ್ಳೆಯ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿದ್ದಾರೆ.

ಮತ್ತೊಂದು ವಿಚಾರ ಎಂದರೆ ಸದಸ್ಯರನ್ನು ನಾಮಿನೇಷನ್ ಮಾಡಬೇಕೆಂದು ತಾವು ಯೋಚನೆ ಮಾಡುತ್ತಿದ್ದೀರಿ. ಇವತ್ತು ಸರ್ಕಾರ ಓಟಿಗೋಸ್ಕರ ಇದನ್ನು ಮಾಡುತ್ತಿದೆಯೋ ಏನೋ ಎನ್ನತಕ್ಕ ಭಾವನೆ ಜನರಿಗೆ ಬರುತ್ತಿದೆ. ಪ್ರತಿಯೊಂದು ಕಾರ್ಯಕ್ರಮವನ್ನೂ ನಾವು ಓಟಿಗೋಸ್ಕರ ಮಾಡಿದರೆ ನಮ್ಮ ದೇಶ, ನಮ್ಮ ರಾಜ್ಯ, ನಮ್ಮ ಗ್ರಾಮಗಳು ಎಲ್ಲಿಗೆ ಹೋಗಬಹುದೆಂಬುದನ್ನು ತಾವೇ ಯೋಚನೆ ಮಾಡಿ. ನಮ್ಮ ರೈತರಿಗೆ ನಾವು ಏನು ಅನುಕೂಲಗಳನ್ನು ಮಾಡಿಕೊಡಬೇಕೆಂಬ ಬಗ್ಗೆ ನಮ್ಮನ್ನು ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ. ಇಂಥ ಪ್ರಸಂಗದಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ನಮ್ಮ ರಾಜ್ಯವನ್ನು ಒಂದು ಮಾದರಿ ರಾಜ್ಯವನ್ನಾಗಿ ಮಾಡಬೇಕೆಂಬ ಹಂಬಲ ಇದೆ. ಈ ರೀತಿಯ ಹೆಮ್ಮೆಯಿಂದ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಪ್ರಯತ್ನವನ್ನು ಮಾಡಬೇಕೆಂದು ಹೇಳಿ ಇವತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಾಧಿಕಾರದ ರಚನೆಯ ಬಗ್ಗೆ ಇವರು ಪ್ರಥಮ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಇಂಥ ಹೊಸ ಕಾರ್ಯಕ್ರಮಗಳನ್ನು ಏನು ತಂದಿದ್ದಾರೆ ಇದು ಸರಿಯಾದ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು.

ಇನ್ನೊಂದು ವಿಚಾರ ಎಂದರೆ ಮಾನ್ಯ ಸದಸ್ಯರಾದ ನಾರಾಯಣರಾವ್ ಮನಹಳ್ಳಿಯವರು ಹೇಳಿದಂತೆ ಗೋದಾವರಿ ಬೇಸಿನ್‌ನಲ್ಲಿರತಕ್ಕ ನಮ್ಮ ಬೀದರ್, ಗುಲ್ಬರ್ಗಾದ ಕೆಲವು ಭಾಗಗಳು ಈ ವ್ಯಾಪ್ತಿಯಲ್ಲಿ ಏನು ಬರುತ್ತವೆ ಅಲ್ಲಿ ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳನ್ನು ಈ ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸೇರಿಸಿದರೆ ಒಳ್ಳೆಯದಾಗುತ್ತದೆ. ಎಂದು ಈ ಕೆಲವು ಸಲಹೆಗಳನ್ನು ಕೊಟ್ಟು ವಿರೋಧ ಪಕ್ಷದವರನ್ನೂ ಕೂಡ ನಾಮಿನೇಟ್ ಮಾಡುತ್ತಿದ್ದೀರಿ. ಎಲ್ಲಕ್ಕೂ ನೀವು ನಾಮಿನೇಷನ್ ಮಾಡುತ್ತಾ ಇದ್ದೀರಿ, ಯಾವ ಕೆಲಸ ಆಗುತ್ತದೆ....

ಶ್ರೀ ಆರ್.ಎನ್. ನಾಯಕ್ : ನೀವು ಇದ್ದಾಗ ಏನು ಮಾಡಿದಿರಿ? ನೀವು ನಾಮಿನೇಷನ್ ಮಾಡಲಿಲ್ಲವೇ? ತಾವು ಮೊದಲು ಏನು ಮಾಡಿದಿರಿ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ರಾಜ್ಯದ ಹಿತದೃಷ್ಟಿಯಿಂದ ನಾಮಿನೇಷನ್ ಮಾಡಿ. ಆದರೆ ರಾಜಕೀಯ ಮಾಡುವುದು ಬೇಡ....

(ಗೊಂದಲ)

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ನಮ್ಮ ಸರ್ಕಾರದವರು ಮಾಡುವುದಿಲ್ಲ. ಆದರೂ ಕೂಡ ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ನಾಮಿನೇಷನ್ ಮಾಡುವಂಥ ಪದ್ಧತಿಯನ್ನು ಕೈಬಿಟ್ಟು ನೀರಾವರಿ ಯೋಜನೆಗಳಲ್ಲಿ ದುಡಿದಂಥ ಮಹನೀಯರು ಬಹಳಷ್ಟು ಜನರಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಚಿಕ್ಕಣ್ಣನವರಿದ್ದಾರೆ, ಬಾಳೆಕುಂದ್ರಿಯವರಿದ್ದಾರೆ. ಇನ್ನೂ ಹಲವಾರು ಪ್ರಮುಖ ವ್ಯಕ್ತಿಗಳಿದ್ದಾರೆ. ಅಂಥ ಜನರನ್ನು ಈ ಪ್ರಾಧಿಕಾರದಲ್ಲಿ ಹಾಕಿ ಅವರ ಸೇವೆಯನ್ನು ತೆಗೆದುಕೊಳ್ಳುವಂಥ ಕೆಲಸ ಮಾಡಬೇಕು. ಉತ್ತಮ ಪ್ರಾಧಿಕಾರವನ್ನು ರಚನೆ ಮಾಡಿ ಭಾಗದ ರೈತರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು ಈ ಕೆಲವು ಮಾತುಗಳನ್ನು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: (ಕನಕಪುರ) ಮಾನ್ಯ ಅಧ್ಯಕ್ಷರೆಯವರೇ ಸರ್ಕಾರ ಕೃಷ್ಣಾ ಜಲಾನಯನ ಪ್ರದೇಶದ ಅಭಿವೃದ್ಧಿಪಡಿಸಲಿಕ್ಕೆ ಎಂದು ಹೇಳಿ ಈ ವಿಧೇಯಕವನ್ನು ಒಪ್ಪಿಗೆಗೋಸ್ಕರ ಈ ಸದನದ ಮುಂದೆ ಇಟ್ಟಿರತಕ್ಕಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ಈ ವಿಧೇಯಕದ ಪ್ರತಿ ನನಗೆ ಸಿಕ್ಕಿತು. ಈ ಪ್ರತಿಯನ್ನು ಓದಿ ನಾನು ಮತ್ತು ಪ್ರೊಫೆಸರ್ ನಂಜುಂಡಸ್ವಾಮಿಯವರ ಜೊತೆಯಲ್ಲಿ ಇದರ ಬಗ್ಗೆ ಖಾಸಗಿಯಾಗಿ ಚರ್ಚೆ ಮಾಡಲಿಕ್ಕೆ ಸಹ ನಾನು ಪ್ರಯತ್ನ ಮಾಡಿದೆ. ನಾನು

ಪ್ರಾಮಾಣಿಕವಾಗಿ ಇದನ್ನು ಸ್ವಾಗತ ಮಾಡಬೇಕು, ಏನೋ ಮಹತ್ವದ ಕೆಲಸ ಮಾಡಲಿಕ್ಕಾಗಿ ಸರ್ಕಾರ ಹೊರಟಿದೆ ಎಂದು ಹೇಳಿ ಈ ಸಭೆಗೆ ಇವತ್ತು ಬಂದವನ್ನು ನಾನು ಅದರಲ್ಲೂ ನಮ್ಮ ಸ್ನೇಹಿತರಾಗಿರತಕ್ಕಂಥ ಮಲ್ಲಾರಿಗೌಡ ಪಾಟೀಲರು ನೀರಾವರಿ ಬಗ್ಗೆ ಮುಂಬೈ ಕರ್ನಾಟಕದ ಬಗ್ಗೆ ಬಹಳ ಅಭಿಮಾನವಿರತಕ್ಕಂಥವರು ಏನೋ ಒಂದು ಒಳ್ಳೆಯ ಕೆಲಸವನ್ನು ಮಾಡಲಿಕ್ಕೆ ಹೊರಟಿದ್ದಾರೆ. ನಾವು ಸರ್ಕಾರದಲ್ಲಿದ್ದಾಗ ಏನಾದರೂ ಒಳ್ಳೆಯ ಕೆಲಸವನ್ನು ಮಾಡಿದರೆ ಅವರು ಬೆನ್ನುತಟ್ಟಿ ಹೇಳುತ್ತಿದ್ದರು ಈ ವಿಧೇಯಕವನ್ನು ನೋಡಿ ಈಗ ನಮಗೆ ಬಹಳ ನಿರಾಶೆಯಾಗಿದೆ ತಾವು 5 ನಿಮಿಷದಲ್ಲಿ ಮಾತನಾಡಬೇಕೆಂದು ಹೇಳಿರುವುದರಿಂದ ನಾನು ಸದನದ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡದೆ ಎರಡು–ಮೂರು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಅದರಲ್ಲೂ ಬಹಳ ಕಳಕಳಿಯಿಂದ ಮಾನ್ಯ ನೀರಾವರಿ ಸಚಿವರಲ್ಲಿ ಒಂದು ಮನವಿ ಮಾಡುತ್ತಿದ್ದೇನೆ. ತಾವು ದಯವಿಟ್ಟು ಈ ವಿಧೇಯಕವನ್ನು ಇವತ್ತು ಪಾಸ್ ಮಾಡಿಕೊಳ್ಳುವುದರಿಂದ ಯಾವುದೇ ರೀತಿಯಾದ ಉಪಯೋಗವಾಗುವುದಿಲ್ಲ. ನಿಮ್ಮದೇ ಸರ್ಕಾರವಿದ್ದು ಇದನ್ನು ಮುಂದಿನ ಒಂದು ವರ್ಷದಲ್ಲಿ ಕಾರ್ಯಾಚರಣೆಗೆ ತರಬೇಕೆಂದು ಪ್ರಯತ್ನ ಮಾಡಿದರೂ ಸಹಿತ ನೀವು ಒಳ್ಳೆಯ ಸಾಧನೆಯ ಗುರಿಯನ್ನು ಇಟ್ಟುಕೊಂಡಿದ್ದರೂ ಸಹಿತ ಅದರ ಹೆಜ್ಜೆಯಲ್ಲಿ ಒಂದು ಹೆಜ್ಜೆಯನ್ನು ಸಹಿತ ಮುಂದೆ ಹೋಗಲಿಕ್ಕೆ ಸಾಧ್ಯವಿಲ್ಲ. ನಿಮ್ಮ ಸಚಿವ ಸಂಪುಟದಲ್ಲಿ ಬಹಳಷ್ಟು ಜನ ವಿಚಾರವನ್ನು ತಿಳಿದುಕೊಂಡಿರತಕ್ಕಂಥ ಹಿರಿಯ ಸದಸ್ಯರು ಇದ್ದಾರೆ. ಆದರೆ ತಾವು ಯಾರು ಈ ವಿಧೇಯಕವನ್ನು ಪೂರ್ತಿಯಾಗಿ ಓದಿದ್ದೀರೆಂದು ನನಗಂತೂ ಅನ್ನಿಸುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಅಧ್ಯಕ್ಷರು. ಇದಕ್ಕೆ 4–5 ಜನ ಸಂಬಂಧಪಟ್ಟ ಗೌರವಾನ್ವಿತ ಮಾನ್ಯ ಮಂತ್ರಿಗಳನ್ನು ಸದಸ್ಯರನ್ನಾಗಿ ಮಾಡಿದ್ದೀರಿ. ಕೆಲವುಜನ ಅಧಿಕಾರಿಗಳನ್ನು ಇದರ ಸದಸ್ಯರನ್ನಾಗಿ ಮಾಡಿಕೊಂಡಿದ್ದೀರಿ. ಇದು ಬೆಂಗಳೂರಿನಲ್ಲಿ ಇರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಾಕ್ಕೆ ಬಂದು, ಬಿಜಾಪುರಕ್ಕೆ ಬಂದು, ಅಥವಾ ಹುಬ್ಬಳಿಗೆ ಬಂದು ಅಥವಾ ಬೆಳಗಾಮ್‌ಗೆ ಬಂದು ಈ ಸಭೆಯನ್ನು ಎಷ್ಟರ ಮಟ್ಟಿಗೆ ಮಾಡಬಲ್ಲರು ಎನ್ನುವುದು ನಮಗೆ ನಿಮಗೆ ಗೊತ್ತಿರತಕ್ಕಂಥ ವಿಚಾರ. ಬೆಂಗಳೂರಿನಲ್ಲಿ ಇದು ಫಂಕ್ಷನ್ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಲಿಕ್ಕೆ ಈ ಪ್ರಾಧಿಕಾರ ಏತಕ್ಕೆಬೇಕು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇದರಲ್ಲಿ ಮಹಾಪಂಡಿತರುಗಳು, ತಜ್ಞರುಗಳು ಯಾರಾದರು ಇದ್ದಿದ್ದರೆ ನಾವು ಒಪ್ಪಿಕೊಳ್ಳಬಹುದಾಗಿತ್ತು. ಅವರೆಲ್ಲರೂ ಕುಳಿತುಕೊಂಡು ಚರ್ಚೆಮಾಡಿ ಒಂದು ನಿರ್ಧಾರಕ್ಕೆ ಬರುತ್ತಾರೆನ್ನತಕ್ಕಂಥದ್ದು ಒಂದು. ಮತ್ತೆ ಏನಾಗುತ್ತದೆ ಉಪಾಧ್ಯಕ್ಷಣೀಯವರೇ ನಾವು ಕೃಷ್ಣಾ ಎಂದರೆ ಕೇವಲ ಬೀದರ್, ಗುಲ್ಬರ್ಗಾ ಜಿಲ್ಲೆ ಎನ್ನುವ ಕಲ್ಪನೆ ಬಹಳ ಜನರಿಗೆ ಇದೆ. ಕೃಷ್ಣಾ ಜಲಾನಯನ ಪ್ರದೇಶವೆಂದರೆ ಚಿಕ್ಕಮಗಳೂರು ಜಿಲ್ಲೆಯೂ ಬರುತ್ತದೆ ಶಿವಮೊಗ್ಗ ಜಿಲ್ಲೆಯೂ ಬರುತ್ತದೆ ಚಿತ್ರದುರ್ಗ ಜಿಲ್ಲೆಯೂ ಬರುತ್ತದೆ. ಇದೇಲ್ಲಾ ತುಂಗಭದ್ರಾ ಸಹಿತ ಅದಕ್ಕೆ ಸೇರುತ್ತದೆ. ಇದಕ್ಕೆಲ್ಲ ಪ್ರಾಧಿಕಾರವೆಂದು ಹೇಳಿಬಿಟ್ಟು ಈಗಾಗಲೇ ನಾವು ಮಾಡಿಕೊಂಡುಬಿಟ್ಟಿದ್ದೇವೆ. ತುಂಗಭದ್ರಾಕ್ಕೆ ಒಂದು ಕಾಡ ಮಾಡಿಕೊಂಡಿದ್ದೇವೆ. ಕೃಷ್ಣಾಕ್ಕೆ ಒಂದು ಕಾಡ ಮಾಡಿಕೊಂಡಿದ್ದೇವೆ. ಮಲಪ್ರಭಾ ಮತ್ತು ಘಟಪ್ರಭಾ ಅಲ್ಲಿ ಕಾಡಾ ಮಾಡಿಕೊಂಡಿದ್ದೇವೆ. ಅಲ್ಲಿ ಒಬ್ಬೊಬ್ಬ ಎಕ್ಸಿಕ್ಯೂಟೀವ್ ಐ.ಎ.ಎಸ್. ಆಫೀಸರ್‌ಗಳನ್ನು ಇಟ್ಟುಕೊಂಡಿದ್ದೇವೆ. ಅವರು ಒಂದು ಸಾರಿ ಚರ್ಚಿಸಿ ಒಂದು ತೀರ್ಮಾನ ತೆಗೆದುಕೊಳ್ಳತಕ್ಕಂಥ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಈಗ ಅವರು ಎಲ್ಲ ಫೈಲ್‌ಗಳನ್ನು ತಗೆದುಕೊಂಡು ಚೀಫ್‌ಮಿನಿಸ್ಟರ್ ಆಫೀಸಿಗೆ ಬರಬೇಕು. ಮತ್ತೆ ಏನಾಗುತ್ತದೆಂದರೆ ಇವತ್ತು ಬ್ಯೂರೋಕ್ರಸಿ ಹೆಚ್ಚು ಮಾಡಿಕೊಳ್ಳುತ್ತಿದ್ದೀರಿ ನಾವು ಈ ಪ್ರಾಧಿಕಾರ ಎಂದ ತಕ್ಷಣ 4–5 ಕೋಟಿ ರೂಪಾಯಿಗಳನ್ನು ಅದಕ್ಕೆ ಪ್ರತಿವರ್ಷ ಕೊಡಬೇಕಾಗುತ್ತದೆ. ಇದಕ್ಕೆ ಸಿಬ್ಬಂಧಿವರ್ಗ ಬೇಕಾಗುತ್ತದೆ. ಆದರೆ ಇದರ ಉದ್ದೇಶ ಏನಿದೆ ಅದನ್ನು ಮಾತ್ರ ನೀವು ಸಾಧನೆ ಮಾಡಲಿಕ್ಕೆ ಆಗುವುದಿಲ್ಲ. ಈಗ ಪ್ರತಿಯೊಂದು ಪ್ರಾಜೆಕ್ಟಿಗೂ ಸಹಿತ ಒಬ್ಬೊಬ್ಬರು ಚೀಫ್‌ಇಂಜಿನಿಯರನ್ನೂ ತಾವು ಮಾಡಿದ್ದೀರಿ. ನಾವೇ ಮಾಡಿದ್ದೇವೆ. ಒಂದು ಕಾಲದಲ್ಲಿ ನಿಮ್ಮ ಪಕ್ಷದವರೇ ಆಗಿರತಕ್ಕಂಥ ನಮ್ಮ ಸ್ನೇಹಿತರಾದಂಥ ಮಾನ್ಯ ವೀರೇಂದ್ರಪಾಟೀಲ್‌ರವರು ಭಾಷಣ

ಮಾಡುತ್ತಾ ಒಂದು ಮಾತನ್ನು ಹೇಳಿದರು. ನಾನು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ 1967ನೇ ಇಸವಿಯಲ್ಲಿ ನಾಲ್ಕುಜನ ಐದುಜನ ಚೀಫ್ ಇಂಜಿನೀಯರು ಇದ್ದರು. ಇವತ್ತು 46 ಜನ ಚೀಫ್ ಇಂಜಿನೀಯರುಗಳು ಆಗಿದ್ದಾರೆ ಇದನ್ನು ಏನಾದರೂ ಮಾಡಿ ಕಡಿಮೆ ಮಾಡಬೇಕೆನ್ನತಕ್ಕಂಥ ಮಾತನ್ನು ಒಂದು ಕಡೆ ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಇವತ್ತು ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದರೆ ಅವರಿಗೆ ಮೇಲೆ ಮೇಲೆ ಬರತಕ್ಕ ಯೋಚನೆ ಬರೆ ಇಂಜಿನೀಯರುಗಳಷ್ಟೇ ಅಲ್ಲ ಪ್ರತಿಯೊಂದು ವರ್ಗದ ಅಧಿಕಾರಿಗಳು ಸಹಿತ ಅವರ ಪ್ರಮೋಷನನ್ನು ಅವರಿಗೆ ಬೇಕಾಗಿರತಕ್ಕಂಥ ಜಾಗ ಇದರ ಬಗ್ಗೆ ಮಾತ್ರ ಯೋಚನೆ ಮಾಡುತ್ತಾರೆ. ಆದರೆ ಅದು ತಪ್ಪು ಎಂದು ಹೇಳುವುದಿಲ್ಲ. ಅವರ ಪಾಯಿಂಟ್ ಆಫ್ ವ್ಯೂನಿಂದ ಸರಿ ಇರಬಹುದು. ಆದರೆ ಈ ಪ್ರಾಧಿಕಾರ ರಚನೆಯಿಂದ ಕೇವಲ ಇನ್ನಷ್ಟು ಜನ ಅಧಿಕಾರಿಗಳಿಗೆ ನೀವು ಅವಕಾಶ ಮಾಡಿಕೊಡುತ್ತಿದ್ದೀರೇ ವಿನಃ ನಿಜವಾಗಿಯೂ ಕೃಷ್ಣಾ ನದಿಯ ನೀರನ್ನು ಕ್ರಿ.ಶ. ಎರಡುಸಾವಿರ ವರ್ಷದೊಳಗಡೆ ಉಪಯೋಗಿಸಿಕೊಳ್ಳುವುದಕ್ಕೆ ಯಾವುದೇ ರೀತಿ ಉದ್ದೇಶ ಇದರಿಂದ ಈಡೇರುವುದಿಲ್ಲ. ಪ್ರತಿಯೊಂದು ಕೆಲಸವನ್ನು ಸಹಿತ ಡೂಪ್ಲಿಕೇಟ್ ಮಾಡಲಿಕ್ಕೆ ಹೊರಟಿದ್ದೀರಿ. ಈಗ ಉದಾಹರಣೆಗೆ ಹೇಳುವುದಾದರೆ ಅರ್ಬಿಟ್ರೇಷನ್ ಪವರ್. ಆರ್ಬಿಟ್ರೇಷನ್ ಪವರ್ ಒಬ್ಬ ಕಂಟ್ರಾಕ್ಟರ್ ತಪ್ಪುಮಾಡಿದರೆ ಅದು ಚೀಫ್‌ಮಿನಿಸ್ಟರ್ ಹತ್ತಿರ ಏತಕ್ಕೆ ಬರಬೇಕು? ಕಮಿಟಿಗೆ ಏತಕ್ಕೆ ಬರಬೇಕು? ಅಲ್ಲಿರತಕ್ಕಂಥ ಚೀಫ್‌ಇಂಜಿನೀಯರ್ ಮಾಡುವುದಕ್ಕೆ ಆಗುವುದಿಲ್ಲವೆ? ಅದನ್ನು ಮಾಡದೆ ಇರುವುದಕ್ಕೆ ಕಾರಣವೇನು? ಇವತ್ತು ಅಕೌಂಟ್‌ಬೆಲಿಟಿ ಇಲ್ಲ. ಅಕೌಂಟಬೆಲಿಟಿ ಇದ್ದರೆ ನಮ್ಮ ಚೀಫ್ ಇಂಜನೀಯರುಗಳು ಮಾಡುತ್ತಿದ್ದರು. ಮತ್ತು ಅವರ ಫೈಲುಗಳನ್ನೆಲ್ಲ ಹೊತ್ತುಕೊಂಡು ಬರಬೇಕಾಗುತ್ತದೆ. ಚೀಫ್ ಇಂಜಿನಿಯರುಗಳ ಗತಿ ಏನು? ಈಗ ತಮಗೆ ಗೊತ್ತಿದೆ, ಒಬ್ಬ ಡೆಪ್ಯೂಟಿ ಕಮಿಷನರ್ ಅಧಿಕಾರವನ್ನು ಕಿತ್ತು ಹಾಕಿ ರೆವಿನ್ಯೂ ಮಿನಿಸ್ಟರ್ ತೆಗೆದುಕೊಂಡರೆ ಡೆಪ್ಯೂಟಿ ಕಮಿಷನರ್ ಪ್ರತಿಯೊಂದು ಹಂತದಲ್ಲಿ ರೆವಿನ್ಯೂ ಮಿನಿಸ್ಟರ್ ಹತ್ತಿರ ಬರಬೇಕೆಂದರೆ ಅವನು ಏನು ಕೆಲಸ ಮಾಡುವುದಕ್ಕಾಗುತ್ತದೆ? ಪ್ರಾಧಿಕಾರದ ಹೆಸರಿನಲ್ಲಿ ಅಧಿಕಾರ ಕೇಂದ್ರೀಕರಣ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಟೆಕ್ನಿಕಲ್ ಸ್ಯಾಂಕ್ಷನ್ ವಿಚಾರ ಇರಬಹುದು, ಲ್ಯಾಂಡ್ ಅಕ್ವಿಸಿಷನ್ ವಿಚಾರದಲ್ಲೂ ಅಷ್ಟೇ. ಲ್ಯಾಂಡ್ ಅಕ್ವಿಸಿಷನ್ ವಿಚಾರದಲ್ಲಿ ಸ್ಪೆಷಲ್ ಪವರ್ಸ್ ತೆಗೆದುಕೊಳ್ಳುವುದಕ್ಕೆ ಕಾನೂನು ಮಾಡಿದ್ದಾರೆ ಲ್ಯಾಂಡ್ ಅಕ್ವಿಸಿಷನ್ ಆ್ಯಕ್ಟಿಗೆ ಅಮೆಂಡ್‌ಮೆಂಟ್ ತಂದಿದ್ದರೆ ಸ್ವಾಗತಿಸಬಹುದಿತ್ತು.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

24 ಗಂಟೆಯೊಳಗೆ, 15 ದಿನಗಳಲ್ಲಿ, ಒಂದೆರಡು ತಿಂಗಳಲ್ಲಿ ಲ್ಯಾಂಡ್ ತೆಗೆದುಕೊಳ್ಳುವುದಕ್ಕೆ ಪ್ರಾಧಿಕಾರಕ್ಕೆ ಪವರ್ಸ್ ಇದೆ ಎಂದು ಹೇಳಿದ್ದರೆ ಸ್ವಾಗತಿಸಬಹುದಿತ್ತು. ಕೇವಲ ಟ್ರಾನ್ಸ್‌ಫರ್ ಪವರ್ಸ್ ಹೇಳಿದ್ದೀರಿ. ಎಲ್ಲಾ ಪ್ರಾಜೆಕ್ಟ್‌ಗಳಿಗೆ ಪ್ರತಿಯೊಂದು ಜಿಲ್ಲೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಇದ್ದಾರೆ. ಅವರಿಗೆ ಅಧಿಕಾರ ಕೊಡಿ. ಈ ಪ್ರಾಧಿಕಾರ ಏತಕ್ಕೆ ಮಾಡಬೇಕು? ರಾಜ್ಯದಲ್ಲಿರತಕ್ಕ ಅನೇಕ ಪ್ರಾಧಿಕಾರಗಳನ್ನು ನೋಡುತ್ತಿದ್ದೇವೆ. ?ಅವು ಏನು ಕೆಲಸ ಮಾಡುತ್ತಿವೆ? ಪ್ರಾಮಾಣಿಕವಾಗಿ ಹೇಳಿ ನಮ್ಮ ಸರ್ಕಾರ, ನಿಮ್ಮ ಸರ್ಕಾರ ಇರಬಹುದು. ಕಾಡಾ ಡೆವಲೆಪ್‌ಮೆಂಟ್ ಅಥಾರಿಟಿ ಮಾಡಿದ್ದೇವೆ, ಅದಕ್ಕೆ ಒಬ್ಬ ಚೇರ್ಮನ್ ಅದಕ್ಕೆ ಸೂಪರ್ ಟೈಂ ಅಧಿಕಾರಿಗಳನ್ನು ಅಡ್ಮಿನಿಸ್ಟ್ರೇಟರ್ ಆಗಿ ಅಪಾಯಿಂಟ್ ಮಾಡಿದ್ದಾರೆ. ಅದರಿಂದ ಏನು ಉಪಯೋಗವಾಗುತ್ತದೆಂದು ಅರ್ಥವಾಗುತ್ತಿಲ್ಲ. ಇದು ಕರ್ನಾಟಕ ಸರ್ಕಾರದ ನೀರಾವರಿ ಇಲಾಖೆಯ ಮೇಲೆ ಇನ್ನೂ 5 ಕೋಟಿ ರೂಪಾಯಿ ಹೆಚ್ಚು ಹಣ ಹಾಕತಕ್ಕ ವಿಧೇಯಕ. ಈ ವಿಧೇಯಕದಿಂದ ನನ್ನ ಅಭಿಪ್ರಾಯದಲ್ಲಿ ಮುಂದಿನ 8–9 ವರ್ಷಗಳ ಕಾಲದಲ್ಲಿ ಏನು ಸಾಧನೆ ಮಾಡಬೇಕೆಂದಿದ್ದೀರಿ ಅದೇನು ಉಪಯೋಗ ಆಗುವುದಿಲ್ಲ. ನಾನು ರಾಜಕೀಯ ಬೆರಸಿ ಮಾತನಾಡುತ್ತಿಲ್ಲ. ಯಾರದ್ದೋ ಭಾವನೆ ಕೆರಳಿಸ ಬೇಕೆಂದು ಮಾತನಾಡುತ್ತಿಲ್ಲ. ನಿರ್ವಂಚನೆಯಿಂದ ಹೇಳಬೇಕೆಂದರೆ ಈ ವಿಧೇಯಕದಿಂದ ಯಾವುದೇ ರೀತಿಯ ಉಪಯೋಗವಾಗುವುದಿಲ್ಲ. ಇದನ್ನು ಪಾಸ್ ಮಾಡಿಕೊಂಡು ಕೇವಲ ಪ್ರಚಾರ ಪಡೆಯಬಹುದು; ನಾವು ಅಧಿಕಾರದಲ್ಲಿದ್ದಾಗ ಕೃಷ್ಣ

ಪ್ರಾಧಿಕಾರ ಮಾಡಿದ್ದೇವೆಂದು ಹೇಳಿಕೊಳ್ಳಬಹುದೇ ಹೊರತು ಬೇರೇನೂ ಉಪಯೋಗವಾಗುವುದಿಲ್ಲ. ದಯವಿಟ್ಟು ತಕ್ಷಣ ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗದೆ ಇರಬಹುದು; ತಾವೇ ಇದರ ಬಗ್ಗೆ ಕುಳಿತುಕೊಂಡು ಯೋಚನೆ ಮಾಡಿ. ನಾಲ್ಕು ಜನ ಮೊದಲಿನಿಂದಲೂ ಕಾವೇರಿ ವಿವಾದದ ವಿಚಾರ ಬಂದಮೇಲೆ ನಾವು ಹೇಳುತ್ತಾ ಬಂದಿದ್ದೇವೆ. ರಿಸೋರ್ಸಸ್ ಮೊಬಿಲೈಸೇಷನ್ ಏನು ಮಾಡಿದ್ದೀರೆಂದು ಹೇಳುತ್ತಲೇ ಬಂದಿದ್ದೇವೆ. ಅದರ ಬಗ್ಗೆ ಏನೇನು ಹೇಳಿಲ್ಲ. ಅಡ್ಮಿಟ್ ಮಾಡಲಿಲ್ಲ. ಕೇವಲ ನಾನು ಯಾರನ್ನೂ ತೆಗಳಬೇಕೆಂದು ಹೇಳಿತ್ತಿಲ್ಲ. 4 ಜನ ಅಧಿಕಾರಿಗಳು ಬರೆದುಕೊಟ್ಟಿದ್ದಾರೆ, ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ನಾನು ಪ್ರಾಧಿಕಾರ ಮಾಡುತ್ತೇನೆಂದು ಹೇಳಿದ್ದಾರೆ. ಗುಲ್ಬರ್ಗಕ್ಕೆ ಹೋದಾಗ ಧರ್ಮಸಿಂಗರು, ಖರ್ಗೆಯವರು ಪ್ರಚಾರಕ್ಕೋಸ್ಕರ ಮಾಡುತ್ತೇವೆಂದು ಹೇಳಿರುತ್ತಾರೆ. ಇದಕ್ಕೆ ಒಬ್ಬ ಮಂತ್ರಿ ಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದ ಏನೂ ಉಪಯೋಗವಾಗುವುದಿಲ್ಲ. ಅದು ಕೇವಲ ಪೇಪರ್ ಟೈಗರ್ ಆಗುತ್ತದೆ. ದಯವಿಟ್ಟು ಇದನ್ನು ಪ್ಲಾಶ್ ಮಾಡಿಕೊಳ್ಳಬೇಡಿ. ಈಗ ಚರ್ಚೆಗೆ ಬಿಟ್ಟು ಮೇ-ಜೂನ್‌ನಲ್ಲಿ ಸಭೆ ಸೇರಿದಾಗ ಇದನ್ನು ವಾಪಸ್ಸು ತೆಗೆದುಕೊಂಡು ಇನ್ನೊಂದು ವಿಧೇಯಕವನ್ನು ಮಂಡನೆ ಮಾಡಿ. ಹೆಚ್ಚಿನ ಅಧಿಕಾರ ತೆಗೆದುಕೊಳ್ಳಿ. ಹಣ ಏನು ಮಾಡಬೇಕೆಂದು ಹೇಳಿ ಅದನ್ನು ಬಿಟ್ಟು ರಿಪಿಟೇಶನ್ ಆಫ್ ವರ್ಕ್ ಆಗಿ ಗುಲ್ಬರ್ಗಾದಲ್ಲಿ ಮಾಡತಕ್ಕ ಕೆಲಸವನ್ನು ಮುಖ್ಯ ಮಂತ್ರಿಗಳ ಕಚೇರಿಗೆ ಹೊತ್ತುಕೊಂಡು ಬಂದು ನಿಂತುಕೊಳ್ಳಬೇಕಾಗಿದೆ ಕಾಡಾ ಅಡ್ಮಿನಿಸ್ಟ್ರೇಟರ್. ಈ ಬಿಲ್ಲನ್ನು ನೀವು ಪಾಸ್ ಮಾಡಿಕೊಳ್ಳುವುದರಿಂದ ಏನು ಉಪಯೋಗವಾಗುತ್ತದೆ? ದಯವಿಟ್ಟು ಇದನ್ನು ಕೈಬಿಡಬೇಕೆಂದು ಹೇಳಿ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) :– ಮಾನ್ಯ ಉಪಾಧ್ಯಕ್ಷಣಿಯವರೇ, ಇದು ಬಹಳ ಮುಖ್ಯವಾದ ಮಸೂದೆ. ಈ ಮಸೂದೆ ಬಗ್ಗೆ ಅನೇಕರು ಅನೇಕ ರೀತಿಯ ಅಭಿಪ್ರಾಯಗಳನ್ನು ಅಭಿವ್ಯಕ್ತ ಮಾಡಿದ್ದಾರೆ. ಮಂತ್ರಿಗಳಿಗೆ ಉತ್ತರ ಹೇಳುವುದಕ್ಕೆ ಸಮಯ ಬೇಕೆಂದು ಕಾಣುತ್ತದೆ. ನಮ್ಮಲ್ಲಿ ಅನೇಕ ಸದಸ್ಯರು ಮಸೂದೆ ಮೇಲೆ ಮಾತನಾಡುವವರು ಇದ್ದಾರೆ.

ಅಧ್ಯಕ್ಷರು :– ಇದು ಏನು ತೋರಿಸುತ್ತದೆಂದರೆ ಕಾವೇರಿ ಜಲಾನಯನ ಪ್ರದೇಶದವರಿಗೆ ಕೃಷ್ಣಾ ಜಲಾನಯನ ಪ್ರದೇಶದ ಮೇಲೆ ಎಷ್ಟು ಅಭಿಮಾನ ಇದೆ. ಏನ್ನುವುದಕ್ಕೆ ಇದು ಸಾಕ್ಷಿ.

ಶ್ರೀ ಡಿ.ಬಿ. ಚಂದ್ರೇಗೌಡ :– ನನ್ನ ಸಲಹೆ ಏನೆಂದರೆ, ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುವುದಾದರೆ ನಾಳೆ ಒಂದು ದಿನದ ಮಟ್ಟಿಗೆ ಸಭೆಯನ್ನು ನಡೆಸಿದರೆ ಎಲ್ಲರಿಗೂ ಸಮಾಧಾನವಾಗುತ್ತದೆ. ಶಾಸನಸಭೆಯ ಕೊನೆಯ ದಿನಗಳಲ್ಲಿ ಬಹುತೇಕ ವಿರೋಧ ಪಕ್ಷದ ಸದಸ್ಯರಿಗೆ ಅವಕಾಶ ಸಿಗಲಿಲ್ಲ. ಕಾರಣ, ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಸರಿಯೋ ತಪ್ಪೋ ಮಾಡಿದ್ದೇವೆ. ನಾಳೆ ಒಂದು ದಿನದವರೆಗೆ ಸಭೆಯನ್ನು ಮುಂದೂಡಿದರೆ, ಇನ್ನೂ 2–3 ವಿಚಾರಗಳಿವೆ. 2–3 ಗಂಟೆ ಚರ್ಚೆಗೆ ಅವಕಾಶವಾಗುತ್ತದೆ. ಆದ್ದರಿಂದ ಸಂಸದೀಯ ಮಂತ್ರಿಗಳು ಇದನ್ನು ಒಪ್ಪುವುದಾದರೆ ಸಭೆ ಮುಂದೂಡುವುದಕ್ಕೆ ನಾವು ಅಧ್ಯಕ್ಷರಲ್ಲಿ ಅನುಮತಿ ಕೇಳಬಹುದು ಎಂದು ಅನ್ನಿಸುತ್ತದೆ.

ಶ್ರೀ ವಾಟಾಳ್‌ನಾಗರಾಜ್ :– ನಾಗರಹೊಳೆ ಪ್ರಶ್ನೆ ಇದೆ. ಅದು ಅರ್ಧ ಗಂಟೆಯಲ್ಲಿ ಮುಗಿಯುವುದಿಲ್ಲ. ಕನಿಷ್ಟ ಎರಡೂವರೆ ಮೂರು ಗಂಟೆ ಚರ್ಚೆ ಮಾಡಬೇಕಾಗಿದೆ. ಬಹಳ ಪ್ರಮುಖವಾದ ವಿಚಾರ. ಆದ್ದರಿಂದ ನಾಗರಹೊಳೆ ವಿಚಾರವನ್ನು ನಾಳೆ ತೆಗೆದುಕೊಳ್ಳೋಣ. ಯೋಜನಾ ಇಲಾಖೆ ಬಗ್ಗೆ ಅರ್ಧ ಗಂಟೆ ಎಂದರೆ ವಿಳಂಬವಾಗುತ್ತದೆ. ಮಂತ್ರಿಗಳಿಂದ ಉತ್ತರ ಇದೆ. ಆದ್ದರಿಂದ ಸಮಸ್ಯೆಗಳು ಬಹಳ ಇರುವುದರಿಂದ, ಈಗಾಗಲೇ ಆರೂವರೆ ಗಂಟೆಯಾಯಿತು. ಇದೆಲ್ಲಾ ಮುಗಿಸಬೇಕಾದರೆ ರಾತ್ರಿ ಹನ್ನೆರಡೂವರೆ ಗಂಟೆಯಾಗುತ್ತದೆ. ಆದ್ದರಿಂದ ದಯಮಾಡಿ ಒಂದು ದಿನ ಮುಂದಕ್ಕೆ ಹಾಕಿ ನಾಳೆ ಬೆಳಿಗ್ಗೆ ಸೇರುವುದು ಒಳ್ಳೆಯದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ನನ್ನ ವೈಯುಕ್ತಿಕ ಅಭಿಪ್ರಾಯದ ಪ್ರಕಾರ ಸುಮಾರು 50 ಪರ್ಸೆಂಟ್ ಶಾಸಕರು ಊರಿಗೆ ಹೋಗುವ ಸಂದರ್ಭ ಇದೆ. ನನಗನ್ನಿಸುತ್ತದೆ ನಾಳೆ ಸದನಕ್ಕೆ ಸದಸ್ಯರು ಬರುವುದು ಕಷ್ಟವಾಗುತ್ತದೆ. ನಿನ್ನೆ ತಾವು ಹೇಳಿದ್ದೀರಿ ಇವತ್ತು ಮುಂದೆ ಹಾಕುತ್ತೇನೆಂದು.

ಶ್ರೀ ಬಸವರಾಜ ರಾಯರೆಡ್ಡಿ :– ಶಾಸಕರು ಯಾರೂ ಊರಿಗೆ ಹೋಗಿಲ್ಲ. ನಾಳೆ ಇರುತ್ತಾರೆ. ದಯಮಾಡಿ ನಾಳೆ ಮುಂದೂಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ನಮ್ಮಗಳಿಗೆ ಊರು ಮನೆ ಮಠ ಇಲ್ಲ ಎಂದು ತಿಳಿದುಕೊಳ್ಳಬಾರದು. ನಮಗೂ ಇದೆ. ಆದರೂ ಇದು ಪ್ರಮುಖವಾದ ವಿಷಯವಾಗಿರುವುದರಿಂದ ನಾಳೆ ನಡೆಸೋಣ. ಇಷ್ಟು ಆತುರದಲ್ಲಿ ಹರಿಬಿರಿಯಲ್ಲಿ ಏತಕ್ಕೆ ಓದುವುದಕ್ಕೆ ಹೋಗುತ್ತಾ ಇದ್ದೀರಿ.?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ನಾನೇನೂ ಓಡಿಹೋಗಬೇಕಾಗಿಲ್ಲ. ನಾನು ಹೇಳುವುದೇನೆಂದರೆ ಮಾನ್ಯ ಸದಸ್ಯರಿಗೆ ಇವತ್ತು ಸದನವನ್ನು ಮುಂದೂಗುತ್ತೇವೆ ಎಂದು ಹೇಳಿಬಿಟ್ಟಿದ್ದೀರಿ. ಅವರು ಊರಿಗೆ ಹೋಗಿರಬೇಕು ಎಂಬ ಅಭಿಪ್ರಾಯ ವ್ಯಕ್ತ ಮಾಡಿದ್ದೇನೆ. ಅವರು ಇರುತ್ತಾರೋ ಬಿಡುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ :– ಎಲ್ಲಾ ಸದಸ್ಯರೂ ಇರುತ್ತಾರೆ. ದಯವಿಟ್ಟು ನಾಳೆ ಒಂದು ದಿವಸಕ್ಕೆ ಮುಂದೂಡಿ.

ಶ್ರೀ ಬಿ.ಎಚ್. ಬನ್ನಿಕೋಡ್ :– ನಿನ್ನೆ ಕೊನೇ ದಿವಸ ಎಂದು ಇತ್ತು. ಇವತ್ತಿಗೆ ಮುಂದೂಡಿದ್ದೀರಿ. ಇವತ್ತೂ ಮುಗಿಯಲಿಲ್ಲ ಎಂದರೆ ನಾಳೆಗೆ ಮುಂದೂಡಬಹುದು.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ :– ಹದಿನೈದು ದಿನ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ಸದನಕ್ಕೆ ಬರಲಿಲ್ಲ. ಈಗ ನಾಳೆ ಮುಂದೂಡಿ ಎಂದು ಹೇಳುತ್ತಿದ್ದಾರೆ. ಇದೇನೋ ನನಗೆ ಅರ್ಥವಾಗುತ್ತಿಲ್ಲ. ಅವರಿಗಾಗಿ ಕಾದೆವು ನಾವು.

ಶ್ರೀ ಡಿ.ಬಿ. ಚಂದ್ರೇಗೌಡ :– ಬರಲಿಲ್ಲ ಎಂಬ ಕಾರಣವನ್ನೇ ಇಟ್ಟುಕೊಳ್ಳಿ. ಆದಕ್ಕಾಗಿ ಅವಕಾಶ ಕೊಡಿ.

ಅಧ್ಯಕ್ಷರು :– ತಮಗೆ ಉತ್ತರ ಕೊಡುವುದಕ್ಕೆ ಎಷ್ಟು ಟೈಮ್ ಬೇಕು ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– 15 ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು :– 15 ನಿಮಿಷದಲ್ಲಿ ಮುಗಿಸುತ್ತೀರಾ

ಶ್ರೀ ಬಸವರಾಜ ರಾಯರೆಡ್ಡಿ :– ಹಾಗಾದರೆ ನಿಮಗೆ ಕಳಕಳಿ ಇಲ್ಲ ಎಂದು ಹೇಳಿದಹಾಗಾಯಿತು.

ಅಧ್ಯಕ್ಷರು :– ಈ ತಿದ್ದುಪಡಿಗಳಿವೆ. ಈಗ ಈ ತಿದ್ದುಪಡಿಗಳನ್ನೆಲ್ಲಾ ಮತಕ್ಕೆ ಹಾಕಬೇಕಲ್ಲ. ಕೃಷ್ಣಾ ಜಲಾನಯನ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ತಿದ್ದುಪಡಿಗಳಿವೆ. ಮಾತನಾಡತಕ್ಕ ಮಾನ್ಯ ಸದಸ್ಯರು ನಿಮ್ಮಲ್ಲಿ ಎಷ್ಟು ಜನ ಇದ್ದಾರೆ?

ಶ್ರೀ ಬಿ.ಎಚ್. ಬನ್ನಿಕೋಡ್ :– ಬಹಳ ಜನ ಇದ್ದಾರೆ. ಶಿವಾನಂದ ಕೌಜಲಗಿಯವರು ಬಿಟ್ಟರೆ ಮಿಕ್ಕವರು ಯಾರೂ ಮಾತನಾಡಿಲ್ಲ ನಮ್ಮಲ್ಲಿ.

ಶ್ರೀ ಬಸವರಾಜಪಾಟೀಲ್ ಅಟ್ಟೂರ್ :– ನಾಳೆಗೆ ಮುಂದೂಡಿ. ನಾಗರಹೊಳೆ ವಿಚಾರ ಎಲ್ಲಾ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ :– ಸಂಸದೀಯ ಮಂತ್ರಿಗಳು ಏನಾದರೂ ಒಂದು ಹೇಳಿ. ನಿಮ್ಮ ಪ್ರವೇಶ ಮಾಡಿದರೆ ಸರಿಹೋಗುತ್ತದೆ.

ಶ್ರೀ ಎಂ. ವೀರಪ್ಪ ಮೋಯಿಲಿ :– ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ತಾನೇ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆ ಸೇರಿ ಇವತ್ತಿಗೆ ಸಭೆ ಮುಗಿಸಬೇಕೆಂದು ನಿರ್ಣಯ ಆಗಿತ್ತು. ಈ ಅಭಿಪ್ರಾಯ ಸಾಮಾನ್ಯವಾಗಿ ಎಲ್ಲ ಸದಸ್ಯರಿಗೆ ಬಂದು ಈಗ ಪ್ರಶ್ನೆ ಏನೆಂದರೆ ನಾಳೆ ಸದಸ್ಯರ ಸಂಖ್ಯೆ ಕಡಿಮೆಯಾದರೆ ಸದನ ಸಂದಿಗ್ಧ ಪರಿಸ್ಥಿತಿಗೆ ಬೀಳಬಾರದು. ಏಕೆಂದರೆ ಸದನದ ಎಲ್ಲಾ ಸದಸ್ಯರೂ ಸಹಕರಿಸಬೇಕಾಗುತ್ತದೆ ನಾಳೆ. ಕೃಷ್ಣ ವ್ಯಾಲಿ ಅಥಾರಿಟಿ ಬಿಲ್ ಏನಿದೆ ಅದು ಚಾರಿತ್ರಿಕವಾದ ಒಂದು ನಮ್ಮ ಪ್ರಯೋಗ. ಏಕೆಂದರೆ 2000 ಎ.ಡಿ. ಹೊತ್ತಿಗೆ ನಮ್ಮ ಪಾಲಿನ ನೀರಿನ ಉಪಯೋಗ ಮಾಡದೇ ಇದ್ದರೆ ನಾನಾ ರೀತಿಯ ಅನಾಹುತ ಆಗುತ್ತದೆ. ಮೊನ್ನೆ ಕೇಂದ್ರದ ಹಣಕಾಸು ಸಚಿವರಾದ ಶ್ರೀ ಮಾನಮೋಹನ ಸಿಂಗ್ ಅವರು ಬಂದಾಗ ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ಸಮಸ್ಯೆಯನ್ನು ಮುಂದೆ ಇಟ್ಟಾಗ ನೀರಿನ

ಉಪಯೋಗ ಮಾಡಲಿಕ್ಕೆ ಬೇರೆ ಬೇರೆ ರೀತಿಯಲ್ಲಿ ಈಗಾಗಲೇ ಫೇಸ್ (1) ಮತ್ತು (2)ಕ್ಕೆ ವಿಶ್ವಬ್ಯಾಂಕ್ ನಮಗೆ ನೆರವು ಕೊಟ್ಟಿದೆ. ಇನ್ನೂ ಬೇರೆ ರೀತಿಯಲ್ಲಿ ವಿಭಜನೆ ಮಾಡಿ ಈ ಒಂದು ಕೃಷ್ಣಾ ಜಲಾನಯನ ಪ್ರದೇಶಕ್ಕೆ ಹಣ, ಸಂಪನ್ಮೂಲ ಒದಗಿಸುವ ಪ್ರಯತ್ನ ನಾನು ಕೂಡ ಮಾಡುತ್ತೇನೆ ಎಂದು ಡಾಕ್ಟರ್ ಮನ್‌ಮೋಹನ್‌ಸಿಂಗ್ ಹೇಳಿರುವಂಥ ಹಿನ್ನಲೆಯಲ್ಲಿ ಯುದ್ಧದೋಪಾದಿಯಲ್ಲಿ ಒಂದು ಕಡೆ ಸಂಪನ್ಮೂಲ ಕ್ರೋಢೀಕರಣ ಮಾಡಬೇಕು. ಮತ್ತೊಂದು ಕಡೆ ಈ ಕಾರ್ಯಕ್ರಮವನ್ನು ಕಾರ್ಯಗತ ಮಾಡಬೇಕು. ಇವೆರಡೂ ಜೊತೆಜೊತೆಯಲ್ಲಿ ತೆಗೆದುಕೊಂಡು ಹೋಗತಕ್ಕ ರೀತಿಯಲ್ಲಿ ಇದು ಬಹುಶ: ಅಥಾರಿಟಿ ಮಾಡಿದರೆ ಹೆಚ್ಚು ವೇಗವಾಗಿ ತ್ವರಿತವಾಗಿ ನಿರ್ಣಯ ತೆಗೆದುಕೊಂಡು ಡೇ ಟು ಡೇ ಬೇಸಿಸ್ ಮೇಲೆ ಮಾನಿಟರ್ ಮಾಡುವುದಕ್ಕೆ ಸಾಧ್ಯವಿದೆ ಎಂಬ ಅಭಿಪ್ರಾಯ ಬಂದಮೇಲೆ ಈ ಒಂದು ಮಸೂದೆಯನ್ನು ಇಲ್ಲಿ ನಾವು ತಂದಿದ್ದೇವೆ. Authority has been created. That Authority will take a decision from time to time . . . .

ನಮ್ಮ ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್ ಇದೆ, ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಇದೆ. ಅದರ ಪ್ರಕಾರ ಈವನ್ ಕ್ಯಾಬಿನೆಟ್‌ಗೆ ಬರತಕ್ಕ ಅಧಿಕಾರವನ್ನು ಕೂಡಾ ಈ ಅಥಾರಿಟಿಗೆ ಆ ಬೋರ್ಡ್‌ಗೆ ಕೊಟ್ಟ ಪ್ರಸಂಗಗಳು ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಇದೆ. ಆದುದರಿಂದ ಇದು ಒಂದು ನವ್ಯ ಪ್ರಯೋಗ ಮತ್ತು ಹೊಸ ಪ್ರಯೋಗ. ಮುಂದೆ ಇರುವ ಸಮಸ್ಯೆಗಳನ್ನು ಎದುರಿಸುವ ರೀತಿಯಲ್ಲಿ ಒಂದು ರೀತಿಯ ಕ್ರಾಂತಿಕಾರಕ ಬೆಳವಣಿಗೆ ಎಂದು ತಂದಿದ್ದೇವೆ. ಈ ಮಸೂದೆಯನ್ನು ಅವಸರವಸರವಾಗಿ ಅನುಮತಿ ತೆಗೆದುಕೊಂಡು ನಾವು ಹೋಗಬೇಕು ಎನ್ನುವ ಪಟ್ಟಭದ್ರ ಹಿತಾಶಕ್ತಿ ನಮ್ಮ ಕಡೆಯವರಿಗೆ ಇಲ್ಲವೇ ಇಲ್ಲ. ಆದುದರಿಂದ ತಮ್ಮ ಅಭಿಪ್ರಾಯ ಮತ್ತು ಸದನದ ಅಭಿಪ್ರಾಯ ಇದ್ದರೆ ನಾವು ಚರ್ಚೆಗೆ ತಡೆ ಮಾಡಬೇಕೆಂದು ಅಲ್ಲ. ಚರ್ಚೆ ಆಗಲಿ, ಚರ್ಚೆ ಆದಮೇಲೆ ನಾಳೆ ಬೆಳಿಗ್ಗೆ 11 ಗಂಟೆ ಒಳಗೆ ನಮಗೆ ಈ ಬಿಲ್ ಮಂಜೂರು ಆಗಬೇಕು. ಏಕೆಂದರೆ 11.30ಕ್ಕೆ ಅದು ಬರಬೇಕಾಗುತ್ತದೆ. ನಾಳೆ ಮಧ್ಯಾಹ್ನದ ಒಳಗೆ ಈ ಸದನ ಮುಗಿಸಬೇಕು. ಏಕೆಂದರೆ ಅನೇಕ ವಿಚಾರಗಳು ಇವೆ. ನಾಳೆ ಮಧ್ಯಾಹ್ನದ ಒಳಗೆ ಈ ಸದನ ಕಾರ್ಯಕಲಾಪ ಮುಗಿಸುವವರಾಗೆ ತಾವು ಸಹಕಾರ ಮಾಡಿದರೆ ಬಹುಶ: ಇದನ್ನು ಮುಗಿಸಬಹುದು.

ಶ್ರೀ ಬಸವರಾಜ ರಾಯರೆಡ್ಡಿ :— ಈ ಪ್ರಾಧಿಕಾರ ಏಪ್ರಿಲ್ 1ನೇ ತಾರೀಖು ಆಗಿ, ಏಪ್ರಿಲ್‌ಫೂಲ್ ಆಗುವುದು ಬೇಡ ಎಂದು ಹೇಳುತ್ತೇನೆ.

ಅಧ್ಯಕ್ಷರು :— ಸದನದ ಮಾನ್ಯ ಸದಸ್ಯರ ಇಚ್ಛೆಯನ್ನು ಗಮನಿಸಿದೆ. ಬಹಳ ಪ್ರಾಮುಖ್ಯವಾದ ಒಂದು ಮಸೂದೆ ಬಗ್ಗೆ ಸದನ ಚರ್ಚೆ ನಡೆಸುತ್ತಿದೆ. ಈಗತಾನೇ ಮಾನ್ಯ ಸಚಿವರು ಇದಕ್ಕೆ ಕೆಲವು ತಿದ್ದುಪಡಿಗಳನ್ನು ಕೂಡಾ ಸೂಚನೆ ಮಾಡಿದ್ದಾರೆ. ತಿದ್ದುಪಡಿಗಳ ಸಮೇತ ಈ ಮಸೂದೆ ಈ ಸಭೆಯ ಅನುಮತಿ ಪಡೆಯಬೇಕೆಂದರೆ ನಾಳೆಗೆ ಹೋಗಬೇಕಾಗುತ್ತದೆ. ಏಕೆಂದರೆ ಈ ತಿದ್ದುಪಡಿ ಇವುಗಳನ್ನೆಲ್ಲಾ ಸರ್ಕ್ಯುಲೇಟ್ ಮಾಡಬೇಕಾಗುತ್ತದೆ. ತಿದ್ದುಪಡಿ ಬೇಡ, ಮಸೂದೆ ಒಂದನ್ನೇ ಸಭೆಯ ಅಂಗೀಕಾರಕ್ಕೆ ಇಡಿ ಎಂದರೆ ಈಗಲೇ ಓಟಿಗೆ ಹಾಕುತ್ತೇನೆ, ಮಂತ್ರಿಗಳ 15 ನಿಮಿಷಗಳ ಉತ್ತರ ಆದಮೇಲೆ. ಎರಡನೆಯದಾಗಿ, ಇನ್ನೂ ಬನ್ನಿಕೋಡ್ ಅವರು ಮಾತನಾಡಿಲ್ಲ. ರಾಯರೆಡ್ಡಿಯವರು ಮಾತನಾಡಿಲ್ಲ. ಇದು ಇನ್ನೂ ಒಂದು ಪ್ರಾಮುಖ್ಯವಾದ ಕೊರತೆಯಾಗುತ್ತದೆ. ಈ ಮಸೂದೆಗೆ. ಆದುದರಿಂದ ಈ ಕೊರತೆ ತುಂಬಿಸುವ ಎಲ್ಲ ದೃಷ್ಟಿಯಿಂದಲೂ ಕೂಡಾ ನಾಳೆಗೆ ಈ ಮಸೂದೆ, ತಿದ್ದುಪಡಿ ಸಮೇತ ಜಾರಿಗೆ ಬರಲಿ. ಇದು ಒಂದು. ಇನ್ನು ಎರಡನೆಯದಾಗಿ, ಪ್ರೊಫೆಸರ್ ನಂಜುಡಸ್ವಾಮಿಯವರು ಒಂದು ಹಕ್ಕುಚ್ಯುತಿ ಸೂಚನೆಯನ್ನು ಕೊಟ್ಟಿದ್ದರು. ನಾನು ಮಾನ್ಯ ಸದಸ್ಯರಾದ ರಾಮಕೃಷ್ಣ ಹೆಗ್ಡೆಯವರಿಗೆ ನಮ್ಮ ಕಚೇರಿಯಿಂದ ಪತ್ರ ಬರೆದಿದ್ದೇನೆ. ಮತ್ತು ಅವರು ಈ ದಿವಸ ನನ್ನ ಕಚೇರಿಗೆ ಒಂದು ಪತ್ರವನ್ನು ಕಳುಹಿಸಿ, ಅವರು ಕೆಲವು ದಿವಸಗಳ ಕಾಲಾವಕಾಶವನ್ನು ಕೇಳಿಕೊಂಡಿದ್ದಾರೆ. ಆದುದರಿಂದ ಕಾಲಾವಕಾಶ ಕೊಡುವುದರಿಂದ ಮಾನ್ಯ ಪ್ರೊ : ನಂಜುಂಡಸ್ವಾಮಿಯವರ ಹಕ್ಕಿಗಾಗಲೀ, ಈ ಸದನದ ಹಕ್ಕಿಗಾಗಲೀ ಯಾವ ಚ್ಯುತಿ

ಆಗುವುದಿಲ್ಲವೆಂದು ಹೇಳಿ 15 ದಿವಸ ಕಾಲ ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅನಂತರ ಈ ಬಗ್ಗೆ ನಾನು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ :— ಹೊರ ರಾಜ್ಯಕ್ಕೆ ಕಳುಹಿಸುವ ಕಬ್ಬಿಗೆ ಚೆಕ್ ಪೋಸ್ಟನಲ್ಲಿ ದಂಡ ವಿಧಿಸುತ್ತಿರುವ ಬಗ್ಗೆ.

ಶ್ರೀ ಪಿ.ಜಿಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೇ, ಒಂದು ವಿಚಾರದ ಬಗ್ಗೆ ನಾನು ತಕ್ಷಣ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಇವತ್ತು ಮಂಡ್ಯ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಏನು ಕಬ್ಬು ಬೆಳೆದುನಿಂತಿದೆ ಅದನ್ನು ಹಾಲಿ ಇರುವ ಸಕ್ಕರೆ ಕಾರ್ಖಾನೆಗಳೂ ಸಹಾ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಒಪ್ಪಿಗೆ ಕಬ್ಬನ್ನು ಸಹಾ ಏನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೋ ಅದನ್ನೂ ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಈ ಹಿನ್ನೆಲೆಯಲ್ಲಿ ನಾವು ತಮಿಳುನಾಡಿನ ಕೆಲವು ನೇಬರಿಂಗ್ ಏರಿಯಾದಲ್ಲಿ ಬರುವ ಕೋ—ಆಪರೇಟಿವ್ ಶುಗರ್ ಫ್ಯಾಕ್ಟರಿಗಳವರ ಜೊತೆ ಮಾತನಾಡಿ, ಉದಾಹರಣೆಗೆ ಧರ್ಮಪುರಿಯಲ್ಲಿರುವ ಧರ್ಮಪುರಿ ಕೋ—ಆಪರೇಟೀವ್ ಶುಗರ್ ಫ್ಯಾಕ್ಟರಿ, ಮುಂತಾದುವುಗಳ ಜೊತೆ ಒಪ್ಪಂದ ಮಾಡಿ, ಒಂದು ರೇಟ್ ಫಿಕ್ಸ್ ಮಾಡಿದ್ದು, ಕೊಯಮತ್ತೂರಿಗೆ ಸಹಿತಾ ಇಲ್ಲಿಂದ ಕಳಿಸಲು ಒಪ್ಪಿಗೆಯನ್ನು ಮಾಡಿ, ಕಬ್ಬು ಹೋಗುತ್ತಾ ಇತ್ತು. ಬೆಂಗಳೂರು ಜಿಲ್ಲೆಯಿಂದ ಹೋಗತಕ್ಕ ತಮಿಳುನಾಡು ಬಾರ್ಡರ್‌ನಲ್ಲಿ ಅತ್ತಿಬೆಲೆ ಚೆಕ್‌ಪೋಸ್ಟ್‌ನಲ್ಲಿ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನವರು ಕಳೆದ ಮುರ್‍ನಾಲ್ಕು ದಿವಸಗಳಿಂದ ಬೇರೆ ಬೇರೆ ಕಾರಣಗಳನ್ನು ಕೊಟ್ಟು ಕಬ್ಬು ಹೊರಗಡೆ ಹೋಗುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನವರು ಅತ್ತಿಬೆಲೆ ಚೆಕ್‌ಪೋಸ್ಟ್ ಹತ್ತಿರ ಹೆರ್‍ಯಾಸ್ ಮಾಡುತ್ತಿದ್ದಾರೆ. ಕಾನೂನು ಇಂಪ್ಲಿಮೆಂಟ್ ಮಾಡಿದರೆ ತೊಂದರೆಯೇನಾಗುತ್ತದೆಂದರೆ ಒಂದೆರಡು ದಿವಸ ಕಬ್ಬು ನಿಂತರೆ ಬೆಲೆ ಕಡಿಮೆಯಾಗುತ್ತದೆ. ಹೊರಗಡೆ ಕಳುಹಿಸಲಿಕ್ಕೆ ಯಾವುದೇ ಟ್ಯಾಕ್ಸ್ ಕಲೆಕ್ಟ್ ಮಾಡುವಹಾಗೆ ಇಲ್ಲ ಸರ್ಕಾರವೇ ಫ್ರೀ ಮಾಡಿದೆ. ಒಂದೊಂದು ಲಾರಿಗೆ 450—500 ರೂಪಾಯಿಗಳನ್ನು ಸ್ಪಾಟ್ ಫೈನ್ ಹಾಕಿದ್ದಾರೆ. ಹಾಗೆ ಮಾಡುವುದರಿಂದ ಲಾರಿಯಲ್ಲಿನ ಕಬ್ಬನ್ನು ಕೆಳಗಡೆ ಕೆಡವಿ ಬೆಂಕಿಹಾಕಿ ಹೋಗಬಹುದು. ಕಬ್ಬು ಬೆಳೆದಿರತಕ್ಕ ರೈತರ ಪರಿಸ್ಥಿತಿ ತಮಗೆ ಗೊತ್ತಿದೆ. ಪರ್ಟಿಕ್ಯುಲರ್ಲೀ ಈ ವರ್ಷ ಕಬ್ಬು ಹೊರಗಡೆ ಹೋಗುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದರ ಬಗ್ಗೆ ಕೆಲವು ಶಾಸಕರುಗಳು ಈಗಾಗಲೇ ಮಾನ್ಯ ಅಜೀಜ್‌ಸೇಟ್‌ರವರ ಗಮನಕ್ಕೆ ತಂದಿದ್ದಾರೆ. ಆದರಿಂದ ತಕ್ಷಣ ಅದರ ಬಗ್ಗೆ ಹೆಚ್ಚಿನ ಪರಿಣಾಮಕಾರಿಯಾದ ಉಪಯೋಗವಾಗಲಿಲ್ಲ. ತಾವು ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಇವತ್ತೇ ಮಾತನಾಡಬೇಕಾಗಿದೆ. ಇಲ್ಲದಿದ್ದರೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕ್ರಿಯೇಟ್ ಆಗುತ್ತದೆ. ಹತ್ತಾರು ಲಾರಿಗಳನ್ನು ಅಲ್ಲಿ ನಿಲ್ಲಿಸಿಕೊಂಡು ಕುಳಿತುಕೊಂಡಿದ್ದಾರೆ. ಪ್ರತಿಯೊಂದಕ್ಕೂ ತೊಂದರೆ ಮಾಡುತ್ತಿದ್ದಾರೆ. ತಾವು ದಯವಿಟ್ಟು ಇದರ ಕಡೆಗೆ ಗಮನಹರಿಸಬೇಕು. ಆ ಕಬ್ಬನ್ನು ತೆಗೆದುಕೊಂಡು ಹೋಗಲಿಕ್ಕೆ ಅವಕಶ ಮಾಡಿಕೊಡಬೇಕು. ನಳೆ ಅಂದರೆ ಕಬ್ಬು ಒಣಗಿ ಹೋಗುತ್ತದೆ ಆದರಿಂದ ರೈತರಿಗೆ ತೊಂದರೆಯಾಗುತ್ತದೆ. ತಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಭೈರೇಗೌಡ : "ಮಾರಿ ಕಣ್ಣು ಹೋತನ ಮೇಲೆ'' ಎನ್ನುವಹಾಗೆ ಅಧಿಕಾರಿಗಳ ಕಣ್ಣು ಕಬ್ಬು ಬೆಳೆದ ರೈತರ ಮೇಲೆ ಯಾವರೀತಿ ಬಿತ್ತೋ ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ತಾವೆಲ್ಲ ಕಬ್ಬು ಬೆಳೆಯುತಕ್ಕ ಪ್ರದೇಶದಿಂದ ಬಂದಿರತಕ್ಕವರು. ಕಬ್ಬು ಬಿಸಿಲಿನಲ್ಲಿ ಒಣಗಿದರೆ ಇಳುವರಿ ಕಡಿಮೆಯಾಗುತ್ತದೆ. ಅದರಿಂದ ತೂಕ ಕಡಿಮೆಯಾಗುತ್ತದೆ. ಆದರಿಂದ ರೈತರಿಗೆ ಸಾಕಷ್ಟು ನಷ್ಟವಾಗುತ್ತದೆ. ಈಗ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನವರು ಮತ್ತು ಅಲ್ಲಿ ಎಲ್ಲ ಸಮರ್ಪಕವಾಗಿದೆಯೆಂದು ನಾನು ಹೇಳುವುದಿಲ್ಲ. ಅಲ್ಲಿ ನಡೆಯುತಕ್ಕ ಅವ್ಯವಹಾರದ ಬಗ್ಗೆ ನಾನು